ಶನಿವಾರ, ಡಿಸೆಂಬರ್ 28, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 359 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಹೊಸವರ್ಷದ ಹೊಸ್ತಿಲಲ್ಲಿದ್ದೇವೆ. ಯಾರ್ಯಾರ 'ಬಕೆಟ್‌ಲಿಸ್ಟ್'ನಲ್ಲಿ ಏನಿವೆ?

ಆಳ-ಅಗಲ
ರೂಪಾಯಿ ಮೌಲ್ಯ ಕುಸಿತ ಏಕೆ ಮತ್ತು ಹೇಗೆ?

ರೈಲಿನಡಿ ಅಡಗಿ 290 ಕಿ.ಮೀ. ಪಯಣ 13

'ಹವ್ಯಕರು ಎರಡಕ್ಕಿಂತ ಹೆಚ್ಚು ಮಕ್ಕಳ ಪಡೆಯಿರಿ' 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,699 ▲	23,813 ▲	₹80,340 (ಬೆಂಗಳೂರು) ▲	₹93,500 (ಬೆಂಗಳೂರು) ▲	85.48 ▼

ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದ ಭಾರತೀಯ ಕರೆನ್ಸಿ ಮೌಲ್ಯ • ಆರ್‌ಬಿಐ ಮಧ್ಯಪ್ರವೇಶದ ಸಾಧ್ಯತೆ

ಡಾಲರ್ ಪ್ರಾಬಲ್ಯ; ರೂಪಾಯಿಗೆ ಜ್ವರ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ಭಾರತದ ರೂಪಾಯಿ ಮೌಲ್ಯದ ಕುಸಿತ ಮುಂದುವರಿದಿದೆ. ಶುಕ್ರವಾರದ ವಹಿವಾಟಿನಲ್ಲಿ 21 ಪೈಸೆ ಕುಸಿದಿದ್ದು, ಅದರ ಮೌಲ್ಯ ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ತಲುಪಿದೆ. ವಹಿವಾಟಿನ ಅಂತ್ಯಕ್ಕೆ ಪ್ರತೀ ಡಾಲರ್ ಮೌಲ್ಯ ₹85.48 ಆಗಿದೆ.

ವಹಿವಾಟಿನ ಆರಂಭದಲ್ಲಿ ₹85.31 ಇದ್ದ ರೂಪಾಯಿ ಮೌಲ್ಯವು, ಇಂಟ್ರಾಡೇ ವಹಿವಾಟಿನಲ್ಲಿ 53 ಪೈಸೆ ಕುಸಿದು ಎರಡು ವರ್ಷದ ಕನಿಷ್ಠ ಮಟ್ಟವಾದ ₹85.80ಕ್ಕೆ ತಲುಪಿತ್ತು.

2023ರ ಫೆಬ್ರುವರಿ 2ರಂದು 68 ಪೈಸೆ ಕುಸಿದಿತ್ತು. ಇದು ದಿನವೊಂದರಲ್ಲಿ ಆಗಿರುವ ರೂಪಾಯಿ ಮೌಲ್ಯದ ಅತಿದೊಡ್ಡ ಕುಸಿತವಾಗಿದೆ.

ಡಾಲರ್ ಪ್ರಾಬಲ್ಯದ ಎದುರು ರೂಪಾಯಿ ಮೌಲ್ಯವು ಕುಸಿಯುತ್ತಿರುವುದನ್ನು ತಡೆಯಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಧ್ಯಪ್ರವೇಶಿಸುವ ಸಾಧ್ಯತೆಯಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಲ್ಪಾವಧಿಯ ಖರೀದಿ ಒಪ್ಪಂದಗಳಿಗೆ ಸಂಬಂಧಿಸಿದಂತೆ ತನ್ನ ಡಾಲರ್ ಪಾವತಿ ಮಿತಿಯನ್ನು ಹಿಡಿದಿಟ್ಟುಕೊಳ್ಳುವ ನಿಲುವಿಗೆ ಅಂಟಿಕೊಂಡಿದೆ. ಸದ್ಯ ಡಿಸೆಂಬರ್ ತಿಂಗಳು ಮುಕ್ತಾಯ ಹಂತದಲ್ಲಿದೆ. ಹಾಗಾಗಿ, ಆಮದುದಾರರು ತಮ್ಮ ಪಾವತಿಯ ಜವಾಬ್ದಾರಿ ಪೂರೈಸಲು ಮುಂದಾಗುತ್ತಿರುವುದು ಡಾಲರ್ ಕೊರತೆಯನ್ನು ಹೆಚ್ಚಿಸಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ದೇಶೀಯ ಷೇರುಪೇಟೆ ಸ್ಥಿರವಾಗಿದ್ದರೂ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬಂಡವಾಳ ಹಿಂಪಡೆಯುತ್ತಿರುವುದು ಮುಂದುವರಿದಿದೆ. ಗುರುವಾರದ ವಹಿವಾಟಿನಲ್ಲಿ ₹2,376 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಕಳೆದ ಮೂರ್ನಾಲ್ಕು ವಾರಗಳಿಂದ ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಿದೆ. ಜೊತೆಗೆ, ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಏರಿಕೆಯಾಗುತ್ತಿದೆ. ಇದು ಡಾಲರ್ ಎದುರು ರೂಪಾಯಿ ಮೌಲ್ಯದ ಕುಸಿತಕ್ಕೆ ಕಾರಣವಾಗಿದೆ ಎಂದು ಹೇಳಿದ್ದಾರೆ.

'ಪ್ರಸ್ತುತ ಅಮೆರಿಕದ ಬಾಂಡ್‌ಗಳ ಗಳಿಕೆಯಲ್ಲಿ ಏರಿಕೆಯಾಗಿದೆ. ಇದರಿಂದ ಭಾರತದ ಷೇರುಪೇಟೆಯಲ್ಲಿನ ಬಂಡವಾಳವನ್ನು ಹಿಂಪಡೆಯುತ್ತಿರುವ ವಿದೇಶಿ ಸಾಂಸ್ಥಿಕ ಹೂಡಿಕೆದಾರರು, ಈ ಬಾಂಡ್‌ಗಳ ಮೇಲೆ ಹೂಡಿಕೆ ಮಾಡುತ್ತಿದ್ದಾರೆ. ಇದು ಡಾಲರ್ ಮೌಲ್ಯವನ್ನು ಬಲಗೊಳಿಸಿದೆ' ಎಂದು ಶೇರ್‌ಖಾನ್ ಸಂಸ್ಥೆಯ ವಿಶ್ಲೇಷಕ (ಸಂಶೋಧನಾ ವಿಭಾಗ) ಅನುಜ್ ಚೌಧರಿ ಹೇಳಿದ್ದಾರೆ.

12ನೇ ಪುಟ ನೋಡಿ

ರೂಪಾಯಿ ಮೌಲ್ಯ

ಆವರಣದಲ್ಲಿ ಇರುವುದು ಪೈಸೆಗಳ ಏರಿಕೆ / ಇಳಿಕೆ



2025ರಲ್ಲೂ ಕುಸಿತ ಮುಂದುವರಿಕೆ?

ಇತ್ತೀಚೆಗೆ ನಡೆದ ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್‌ನ ಹಣಕಾಸು ನೀತಿ ಸಮಿತಿ ಸಭೆಯು, ಶೇ 0.25ರಷ್ಟು ಬಡ್ಡಿದರವನ್ನು ಕಡಿತಗೊಳಿಸಿದೆ.

ಮುಂದಿನ ವರ್ಷ ನಾಲ್ಕು ಬಾರಿ ಬಡ್ಡಿದರ ಕಡಿತಗೊಳಿಸಲಿದೆ ಎಂದು ಹೂಡಿಕೆದಾರರು ನಿರೀಕ್ಷಿಸಿದ್ದರು. ಆದರೆ, ಎರಡು ಬಾರಿ ಕಡಿತಗೊಳಿಸುವುದಾಗಿ ಸಮಿತಿಯು ಪ್ರಕಟಿಸಿದೆ. ಇದರ ಬೆನ್ನಲ್ಲೇ ಡಿಸೆಂಬರ್ 19ರಂದು ಮೊದಲ ಬಾರಿಗೆ ಡಾಲರ್ ಎದುರು ರೂಪಾಯಿ ಮೌಲ್ಯವು ₹85ಕ್ಕೆ ತಲುಪಿತ್ತು.

12ನೇ ಪುಟ ನೋಡಿ

ಚಾಲ್ತಿ ಖಾತೆ ಕೊರತೆ ಇಳಿಕೆ

ಮುಂಬೈ: ಪ್ರಸಕ್ತ ಆರ್ಥಿಕ ವರ್ಷದ ಜುಲೈ-ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದ ಚಾಲ್ತಿ ಖಾತೆ ಕೊರತೆಯು(ಸಿಎಡಿ) ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 1.2ರಷ್ಟು (₹95,760 ಕೋಟಿ) ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಶುಕ್ರವಾರ ತಿಳಿಸಿದೆ.

2023–24ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 1.3ರಷ್ಟಿತ್ತು (₹96,615 ಕೋಟಿ). ಇದಕ್ಕೆ ಹೋಲಿಸಿದರೆ ಅಲ್ಪ ಪ್ರಮಾಣದಲ್ಲಿ ಇಳಿಕೆಯಾಗಿದೆ. ದೇಶದ ಆಮದು ಮತ್ತು ರಫ್ತಿಗೆ ಸಂಬಂಧಿಸಿದಂತೆ ಮಾಡುವ ಪಾವತಿ ಹಾಗೂ ವಿದೇಶಿ ನೆರವಿನಂತಹ ವರ್ಗಾವಣೆಯನ್ನು ಈ ಚಾಲ್ತಿ ಖಾತೆಯು ಪ್ರತಿನಿಧಿಸುತ್ತದೆ.

12ನೇ ಪುಟ ನೋಡಿ

ಧೀಮಂತ ನಾಯಕನಿಗೆ ಮಿಡಿದ ದೇಶ

ಸಕಲ ಸರ್ಕಾರಿ ಗೌರವದೊಂದಿಗೆ ಮನಮೋಹನ ಸಿಂಗ್ ಅಂತ್ಯಕ್ರಿಯೆ ಇಂದು

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಭಾರತದ ಆರ್ಥಿಕತೆಗೆ ಹೊಸ ದಿಕ್ಕು ತೋರಿದ, ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಪಾರ್ಥಿವ ಶರೀರಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ಮುಖಂಡರಾದ ಸೋನಿಯಾ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹಲವರು ಶುಕ್ರವಾರ ಶ್ರದ್ಧಾಂಜಲಿ ಸಲ್ಲಿಸಿದರು.

ತ್ರಿವರ್ಣ ಧ್ವಜ ಹೊದಿಸಿರುವ ಮೃತದೇಹಕ್ಕೆ ಪ್ರಮುಖ ರಾಜಕೀಯ ನಾಯಕರು ಪಕ್ಷಭೇದ ಮರೆತು ಅಂತಿಮ ನಮನ ಸಲ್ಲಿಸಿದರು. ಭಾರತದ ಆರ್ಥಿಕ ಸುಧಾರಣೆಗಳ ಹರಿಕಾರ ಎಂದೇ ಖ್ಯಾತರಾದ ಮನಮೋಹನ ಸಿಂಗ್ (92) ಅವರು ನವದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಏಐಐಎಂಎಸ್) ಗುರುವಾರ ರಾತ್ರಿ ನಿಧನರಾಗಿದ್ದರು.

11ನೇ ಪುಟ ನೋಡಿ

ಮನಮೋಹನ ಸಿಂಗ್ ಅವರ ಪಾರ್ಥಿವ ಶರೀರಕ್ಕೆ ಪ್ರಧಾನಿ ನರೇಂದ್ರ ಮೋದಿ ಅಂತಿಮ ನಮನ ಸಲ್ಲಿಸಿದರು – ಪಿಟಿಐ ಚಿತ್ರ

ಎಐಸಿಸಿ ಕಚೇರಿಯಿಂದ ಅಂತಿಮ ಯಾತ್ರೆ

ಮನಮೋಹನ ಸಿಂಗ್ ಅವರ ಮೃತದೇಹವನ್ನು ಅಂತ್ಯಕ್ರಿಯೆಗಾಗಿ ನವದೆಹಲಿಯ ಎಐಸಿಸಿ ಕೇಂದ್ರ ಕಚೇರಿಯಿಂದ ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುವುದು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಶುಕ್ರವಾರ ತಿಳಿಸಿದರು.

11ನೇ ಪುಟ ನೋಡಿ

ಮುಖ್ಯಾಂಶಗಳು

- ನಿಗಮ್‌ಬೋಧ್ ಘಾಟ್‌ನಲ್ಲಿ ಬೆಳಿಗ್ಗೆ 11.45ಕ್ಕೆ ಅಂತ್ಯಕ್ರಿಯೆ
- 8.30ರಿಂದ 9.30ರ ವರೆಗೆ ಕಾಂಗ್ರೆಸ್ ಕಚೇರಿಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ
- ಪ್ರಧಾನಿ ಒಳಗೊಂಡಂತೆ ಗಣ್ಯರಿಂದ ಅಂತಿಮ ನಮನ

7 ದಿನ ಶೋಕಾಚರಣೆ

ಮನಮೋಹನ ಸಿಂಗ್ ಅವರ ಗೌರವಾರ್ಥವಾಗಿ ದೇಶದಾದ್ಯಂತ ಏಳು ದಿನಗಳ ಶೋಕ ಆಚರಿಸಲಾಗುತ್ತದೆ ಮತ್ತು ಈ ಅವಧಿಯಲ್ಲಿ ರಾಷ್ಟ್ರಧ್ವಜವನ್ನು ಅರ್ಧಮಟ್ಟದಲ್ಲಿ ಹಾರಿಸಲಾಗುತ್ತದೆ ಎಂದು ಕೇಂದ್ರ ಗೃಹ ಸಚಿವಾಲಯ ಪ್ರಕಟಿಸಿದೆ.

11ನೇ ಪುಟ ನೋಡಿ

ನೌಕರರ ಸಂಘಕ್ಕೆ ಮತ್ತೆ ಷಡಾಕ್ಷರಿ ಸಾರಥ್ಯ

ಬೆಂಗಳೂರು: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರು ಪುನರಾಯ್ಕೆಯಾಗಿದ್ದಾರೆ.

ಷಡಾಕ್ಷರಿ ಅವರು 507 ಮತಗಳು ಹಾಗೂ ಬಿ.ಪಿ. ಕೃಷ್ಣೇಗೌಡ ಅವರು 442 ಮತಗಳನ್ನು ಪಡೆದರು. ಷಡಾಕ್ಷರಿ ಅವರು 65 ಮತಗಳ ಅಂತರದಿಂದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎ. ಹನುಮನರಸಯ್ಯ ಅವರು ಘೋಷಿಸಿದರು.

13

ಹೆಡ್ ಕಾನ್‌ಸ್ಟೆಬಲ್ ಅಮಾನತು

ಪ್ರಜಾವಾಣಿ ವಾರ್ತೆ

ಬೀದರ್: ಭಾಲ್ಕಿ ತಾಲ್ಲೂಕಿನ ಕಟ್ಟಿ ಗೂಗಾಂವ್‌ನ ಯುವ ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣದಲ್ಲಿ ಕರ್ತವ್ಯ ಲೋಪವೆಸಗಿದ ಆರೋಪದಡಿ ನಗರದ ಗಾಂಧಿ ಗಂಜ್ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್‌ಗಳಾದ ರಾಜೇಶ್ ಚೆಲ್ವಾ ಹಾಗೂ ಶಾಮಲಾ ಅವರನ್ನು ಶುಕ್ರವಾರ ಸೇವೆಯಿಂದ ಅಮಾನತು ಗೊಳಿಸಲಾಗಿದೆ.

ಸಚಿವ ಪ್ರಿಯಾಂಕ್ ಖರ್ಗೆ ಆಪ್ತ, ಕಲಬುರಗಿಯ ಕಾಂಗ್ರೆಸ್ ಮುಖಂಡ ರಾಜು ಕಪನೂರ ಸೇರಿ ಎಂಟು ಮಂದಿ ಟೆಂಡರ್ ವಿಚಾರಕ್ಕೆ ಹಣದ ಬೇಡಿಕೆ ಇಟ್ಟು ಕೊಲೆ ಬೆದರಿಕೆ ಹಾಕಿದ್ದರಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಸಚಿನ್ ಏಳು ಪುಟಗಳ ಮರಣಪತ್ರ ಬರೆದು, ನಗರದ ಬೀದರ್-ಹೈದರಾಬಾದ್ ನಡುವಿನ ಹಳಿಯಲ್ಲಿ ಗುರುವಾರ ರೈಲಿನ ಅಡಿಗೆ ತಲೆ ಇಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದರು.

ಸಚಿನ್ ಡೆತ್‌ನೋಟ್ ಅನ್ನು ಸಾಮಾಜಿಕ ಜಾಲತಾಣದಲ್ಲಿ ಗುರುವಾರ ಪೋಸ್ಟ್ ಮಾಡಿದ್ದನ್ನು ಕುಟುಂಬದ ಸದಸ್ಯರು ಗಮನಿಸಿದ್ದರು.

13ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Banashankari

BANASHANKARI 6TH Stage, 2nd BLOCK, BDA attached BBMP 'A' Shashidar Layout 20×30 SALE, N/Facing. 9611105595

Gnanabharathi

DIRECT OWNER 30x40 E/F BDA Site Sale 'JNANABHARATHI' Nagadevanahalli 2nd Block, Close to Ring-Road. 9886634578

J P Nagar

SALE 40X60-BDA Prime Semi Comercial Corner Property-on 60feet`Road JPNagar 2nd Phase Near Innisfree House School Genuine Buyers Call:9986490019

Kanakapura Road

30X40 N/E CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

Kempegowda Layout

KEMPEGOWDA LAYOUT, COMMERCIAL BDA Site for Sale 20x30, 30x40, 40x60, 50x80, Contact: Kumar 9945119449

BDA SITE FOR SALE @ Kempegowda Layout 40x60, 50x80 Good Location Contact: 9845555666

KEMPEGOWDA LAYOUT BDA, Commercial Property East Facing 50×80 Measurement, Only Genuine Buyer Contact. Owner. 9663005859/ 9731594565

BDA SITE FOR SALE @ Kempegowda Layout 40x60, 50x80 Good Location Contact: 9845555666

Magadi Road

FOR SALE: 50X90 (4500 Sft) South facing site with old building at 1-A Main Road, Govindarajanagar (M.C. Layout)Near Hotel Swathi Green Land (Jaimunirao Circle) Bengaluru. Broker's excuse. Contact: 9343432456

FOR SALE: 50x80 (4000 SFT) North Facing Vacant Site No. Old 29/08, New Municipal No. 8, 2nd Main Road, Agrahara Dasarahalli. Contact 9845177455/ 9845454304

Mysore

SITES @MYSORE DTCP Facing State Highway `A`Khatha,RERA, 100%Completed Layout, Rs.1700-2050 PerSft, 85%Loan Immediate Registration, Near HD Kote Road, 10Minutes to Airport,Ring Road, 15Minutes to Palace, 9845287802 /8050001571

Rajarajeshwari Nagar

RAJARAJESHWARI NAGAR 1500 Square A Khatha Price 12500 Immediate Settlement Suitable for Apartment Call:8951240669

Vishweshwariah Layout

"VISVESHWARAIAH LAYOUT 40x60 East & North facing Site for Sale. Genuine Buyers & Sellers Contact: 9845268611"

AVAILABLE 30X40 BDA Site Viswesavaraiah Layout 1st Block Near 100ft Parallel Road Good Location: 9035470616

30X40 SITE Sale Vishveshwaraiah W/F 1st Block & 3rd Block Near 100ft Road Direct Owner: 8310003509

Kengeri Satellite Town

SITE FOR Sale site no. 4412, 4413, 30x40, 40 Feet Road, Nadaprabhu Kempegowda Layout 3rd Block, L.Sector South Face close to PRR Road, Price Rs. 7700/- sq.feet. Negotiable. 9980339217/ 9448709882.

Commercial Land

Mysore

PRIME LAND: Chamarajanagar-Mysore 4.12 Acres Ideal for Commercial development and Farming near KIADB Indl.Area, NH-150A & Railway Station. Contact: 9620495333

Commerical

Multiple Locations

10 ACRES Indl. Rent, 40x60 west Nagarabhavi sale, 9000 sqft on Dr.Rajkumar Road Sale, BasaveshwaraNagar 5000 sqft Sale. 9035010595

Flat

Kanakapura Road

FLAT FOR Sale 2BHK 70 Lakhs Opp KSIT College 500 meters Metro Station Kanakapura Road: 9880161640

M G Road And Around

OPPOSITE OBEROI N/E Corner Apartment 3 BHK /4Toilets /2Car- parking Price 3.5Crores Negotioble:8884501767

House

Banashankari

"BANASHANKARI 6TH-STAGE 3 years old house built on 30x40 Site ₹1.95`Crore "Sri.Ganesh Estate"- 9845286505"

Yelahanka

BAGALUR ROAD close to Airport Road 30*45 Site 4400 Sft Building 2016 Built Good Borewell Water, getting 70k Rent Price 2.40 CR. Contact 9900569524/ 9448461704

Industrial & Factory

Tumkur Road

SALE INDUSTRIAL 15,000sft with shed 40HP power KIADB Sale deed 40feet road East'facing Sompura Industrial Estate 1st Stage, Dabaspet. 8310719986/ 9448061555.

Villas/Bunglows

Kanakapura Road

INDEPENDENT BUNGALOW/ Villa of duplex house for sale on site measuring 2,800 Sq.feet along with 4353 Sq.feet (RCC building) at B.M.Kaval Village, Thathaguni, Bangalore to Kanakapura Main Road, Bangalore South Taluk, Bangalore. Contact: 9902401486

PROPERTY
To Place your Classified Ads Contact
9845114560

REAL ESTATE BUYING

Joint Development

South

A LEADING ISO 9001 builder required 1-3 acres clear property for outright/ JV in BBMP limit South Bangalore. Contact- 9071712000 Broker excuse

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 30x40 40x60 Anjanapura BDA, Banashankari 6th Stage, Narayan`Nagar BCCHS Layout, Gubblala, Agent Excuse. Call: 9008259222.

Mahalakshmi Layout

REQUIRE AN House site (30x40) in and around Mahalakshmi Layout, Bangalore, Contact: 9845560708

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

WEEKEND CORNER

ಕ್ಲಾಸಿಫೈಡ್ಸ್

ಬೆಂಗಳೂರಿನಲ್ಲಿ ನಿಮ್ಮ ಕನಸಿನ ನಿವೇಶನ
E-KHATA, RERA ಅನುಮೋದನೆ ಆಗಿರುವ
BULK ನಿವೇಶನಗಳು
ಸೂರ್ಯ ನಗರ, ಆನೇಕಲ್ ಎಲೆಕ್ಟ್ರಾನಿಕ್ ಸಿಟಿ ಹತ್ತಿರ
ನೋಂದಣಿಗೆ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ
ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ
(ಗ್ರೂಪ್ ಎಂಪ್ಲಾಯೀಸ್, ಸೊಸೈಟಿಗಳು, ಸಂಸ್ಥೆಗಳಿಗೆ ಆದ್ಯತೆ)
Call for Bulk Sites: 6366941640

LAST 2 DAYS | ENTRY FREE
தமிழ்ப் புத்தகத் திருவிழா 2024 பெங்களூரு
TAMIL BOOK FESTIVAL
Time: 10am to 9pm
KANNADA, ENGLISH BOOKS ALSO AVAILABLE
28th-29th December-2024
The Institution of Engineers
#3, Dr. B.R. Ambedkar Veedhi, Opp. Indian Express, Bengaluru
FREE PARKING
9916542367
6363118988

BUILDERS ESSENTIAL

Building Contractors

BUILDIYA PROJECTS Will Develop Well-Equipped Residential, Commercial Buildings and Complexes Beautifully By Using Planning and Designed By Skilled Architects and Engineers 30-Years Of-Experience Contact:9148691980

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Industrial And Factory

AVAILABLE OF Industrial Shed of 95000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
*Conditions apply
www.dhclassifieds.com
BOOK NOW
For more details contact:
9901641752
9845114560

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-*
FOR 15 WORDS

www.dhclassifieds.com
BOOK NOW
*Conditions apply
Book your ad with us now! For more details contact:
+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 550/-*
PER SQCM
SINGLE / DOUBLE / MULTIPLE COLUMN

*Conditions apply
www.dhclassifieds.com
BOOK NOW
For more details contact:
+91 9901641752 | +91 9845114560
+91 9900428036 | +91 9731810277
+91 9886213331 | 080- 45557163/164

ಗಿರಿಯಾಸ್®

ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ

NEW YEAR SALE

ಮೆಗಾ ಡಿಸ್ಕೌಂಟ್ ಸೇಲ್

ನಿಶ್ಚಿತ ಕಡಿಮೆ ಬೆಲೆಯಲ್ಲಿ

EXCHANGE BONANZA

UPTO ₹25,000

ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳ. ಎಕ್ಸ್‌ಚೇಂಜ್ ಮೇಲೆ

WELCOME 2025 WITH SAVINGS

UPTO 70% OFF

CASH BACK BONANZA

UPTO 20% ಕ್ಯಾಶ್ ಬ್ಯಾಕ್*

AXIS BANK | citi | HDFC BANK | HSBC | BOBCARD | IndusInd Bank | kotak | RBL BANK | Union Bank | YES BANK | Standard Chartered | Bank of Baroda | FEDERAL BANK | SBI card

ಉಚಿತ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್ ಮೌಲ್ಯ ₹20000

ಫೈನಾನ್ಸ್ ಬೊನಾಂಜಾ Upto ₹10,000 ಕ್ಯಾಶ್ ಬ್ಯಾಕ್*

FINANCE POWERED BY Groww — 0% EMI | 2,000 Cash Back | MIN PRODUCT VALUE ₹10,000

1 ಇ.ಎಮ್.ಐ ಉಚಿತ*

INSTANT LOAN APPROVAL UPTO ₹4,00,000*

FEDERAL BANK — 7.5% INSTANT DISCOUNT ON CC EMI* MIN SWIPE ₹5000 MAX DISCOUNT UPTO ₹2000

ASSURED GIFTS ON ALL LG PRODUCTS* — BT SPEAKER | INDUCTION COOKER | STEAM IRON | KETTLE | DRY IRON

24 HOURS EXPRESS DELIVERY*

LG — 65 ಓಎಲ್‌ಇಡಿ EVO 4K SMART TV OLED65C46LA — ಇ.ಎಮ್.ಐ ₹6,999 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

SAMSUNG — 65 ಎಲ್‌ಇಡಿ 4K SMART TV 65S90D — ಇ.ಎಮ್.ಐ ₹6,990

SONY — BRAVIA 55 ಎಲ್‌ಇಡಿ 4K HDR GOOGLE TV K-55XR70 — ಇ.ಎಮ್.ಐ ₹5,500

LG — 43 4K UHD SMART ಎಲ್‌ಇಡಿ 43UT80406LA — ಇ.ಎಮ್.ಐ ₹4,999 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

NVY — LOWEST PRICE CHALLENGE 4K ಎಲ್‌ಇಡಿ — 52% OFF — NVY Official LED partner of RCB

Model	Price	EMI
43 4K SMART	₹18,990	₹1,582
55 4K SMART	₹29,490	₹2,457

mi NOTE 14 5G 6+128 — EFFECTIVE PRICE ₹17,999* (PRICE AFTER CASH BACK) — ಇ.ಎಮ್.ಐ ₹1,500 — ಉಚಿತ: BT NECKBAND WORTH ₹1499*

oppo F27 5G 8+128 — 10% CASH BACK — ₹19,650* — ಇ.ಎಮ್.ಐ ₹1,638 — ಉಚಿತ: BT NECKBAND WORTH ₹1499*

vivo Y300 5G 8+128 — EFFECTIVE PRICE ₹19,080* (PRICE AFTER CASH BACK) — ಇ.ಎಮ್.ಐ ₹1,590 — ಉಚಿತ: BT NECKBAND WORTH ₹1499*

realme 14X 5G 6 + 128 — EFFECTIVE PRICE ₹14,490* (PRICE AFTER CASH BACK) — ಇ.ಎಮ್.ಐ ₹1,208 — ಉಚಿತ: BT NECKBAND WORTH ₹1499*

iPhone 16 — EFFECTIVE PRICE ₹74,890* (PRICE AFTER CASH BACK) — EMI STARTS FROM ₹3121 — FREE: MAGSAFE POWERBANK 10000 MAH WORTH ₹7499

SAMSUNG S24 FE/ S24/ S24 Ultra — EFFECTIVE PRICE ₹60,999* (PRICE AFTER CASH BACK) — EMI STARTS FROM ₹2,542 — GET: MAGSAFE POWERBANK 10000 MAH WORTH ₹7499 @ ₹199

hp 15 — 10% CASH BACK — RYZEN 3-7320U, 8GB, 512GB SSD, 15.6 FHD, WIN 11 MSO 21 — OFFER PRICE ₹33,990 — ಇ.ಎಮ್.ಐ ₹2,833 — MRP ₹45,995 — ಉಚಿತ: 32GB PEN DRIVE + W/L MOUSE + QUICK HEAL AV INTERNET SECURITY WORTH ₹2499*

DELL INS 15 3530 — 10% CASH BACK — 13TH GEN I3 1305U, 16 GB, 512GB, 15.6 FHD, WIN 11 MSO 21 — OFFER PRICE ₹43,990 — ಇ.ಎಮ್.ಐ ₹3,666 — MRP ₹48,827 — ಉಚಿತ: 32GB PEN DRIVE + W/L MOUSE + QUICK HEAL AV INTERNET SECURITY WORTH ₹2499*

Lenovo SLIM 3 — 10% CASH BACK — RYZEN 5 7520U, 16GB, 512GB SSD, RADEON 610M, 15.6 FHD, WIN 11 MSO, 21 — OFFER PRICE ₹44,990 — ಇ.ಎಮ್.ಐ ₹3,749 — MRP ₹64,800 — ಉಚಿತ: 32GB PEN DRIVE + W/L MOUSE + QUICK HEAL AV INTERNET SECURITY WORTH ₹2499*

hp VICTUS GAMING — 10% CASH BACK — RYZEN 5 5600H, 16GB, 512GB SSD, 4GB GFX RX6500M, 15.6 FHD, WIN 11 MSO 21 — OFFER PRICE ₹54,990 — ಇ.ಎಮ್.ಐ ₹4,583 — MRP ₹67,264 — ಉಚಿತ: BT CALLING SMART WATCH + QUICK HEAL AV INTERNET SECURITY WORTH ₹8999*

DELL INS 3530 — 10% CASH BACK — 13TH GEN i5 1334U, 16GB, 512GB SSD, 15.6 FHD, WIN 11 MSO21 — OFFER PRICE ₹57,990 — ಇ.ಎಮ್.ಐ ₹4,833 — MRP ₹72,598 — ಉಚಿತ: BT CALLING SMART WATCH + QUICK HEAL AV INTERNET SECURITY WORTH ₹8999*

Haier 602 ಲಿ ಸೈಡ್ ಬೈ ಸೈಡ್ — ಇ.ಎಮ್.ಐ ₹2,994 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

SAMSUNG 653 L BESPOKE CONVERTIBLE 5IN1 SIDE BY SIDE REFRIGERATOR RS76CB81A333 — ಇ.ಎಮ್.ಐ ₹4,990

Whirlpool 411L INTELLIFRESH CONVERTIBLE FROST FREE DOUBLE-DOOR — ಇ.ಎಮ್.ಐ ₹3,758 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

IFB 8 ಕೆಜಿ ಫ್ರಂಟ್ ಲೋಡಿಂಗ್ — ಇ.ಎಮ್.ಐ ₹3,191 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

Godrej 8 ಕೆಜಿ ಫ್ರಂಟ್ ಲೋಡಿಂಗ್ — ಇ.ಎಮ್.ಐ ₹3,133 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

LG SOUND BAR SC9S, 3.1.3 CH, 400W, DOLBY ATMOS & IMAX ENHANCED — OFFER PRICE ₹31,290 — EMI ₹2,608 — MRP ₹89,990

BOSCH SERIES 6 13 PLACE SETTINGS FREE STANDING DISHWASHER WITH GLASS PROTECTION TECHNOLOGY — ಇ.ಎಮ್.ಐ ₹4,287

Panasonic 27ಲೀ ಕನ್‌ವೆಕ್ಷನ್ ಮೈಕ್ರೋವೇವ್ — ಇ.ಎಮ್.ಐ ₹1,366

HOT DEALS — OFFER VALID TILL STOCK LAST | OFFER VALID TILL STOCK LAST

Preethi P/C NEO 5L ALUMINIUM+ MILTON 3PC PEARL CASSEROLE+ VIJAYALAKSHMI ECO DRY IRON — OFFER PRICE: ₹2025 — COMBI MRP: ₹5,074

Greenchef GAS STOSES:BLISS 2 BURNER + NON STICK COOKWARE: 2PC DUET PACK — OFFER PRICE: ₹2025 — COMBI MRP: ₹4,798

Lifelong INDUCTION COOKER:LLIC102 1800 W+ Preethi P/C NEO 3L ALUMINIUM — OFFER PRICE: ₹2025 — COMBI MRP: ₹6,349

NON STICK COOKWARE:ASPA 4 Pc SET KETTLE:S S Kettle 1.5litre - Swift STARTER KIT (HOSE+LIGHT+TROLLY) — OFFER PRICE: ₹2025 — COMBI MRP: ₹5,888

LG | SAMSUNG | SONY | Haier | Panasonic | NVY | IFB | Godrej | LLOYD | Whirlpool | BOSCH | Electrolux | PHILIPS | hp | acer | DELL | Lenovo | ASUS | vivo | oppo | ONEPLUS | mi | iPhone | JBL | BLUE STAR | HAFELE | Symphony | HAVELLS | USHA | DAIKIN | GENERAL | Prestige | VOLTAS | VOLTAS·beko | Butterfly | Preethi | VIJAYALAKSHMI | ULTRA | EUREKA FORBES | pureit | Livpure | FABER | KENSTAR | Pigeon | BAJAJ | Crompton | MAHARAJA WHITELINE | V-GUARD | ZEBRONICS | KAFF | OZONE

GIRIAS® THE CONSUMER DURABLE PEOPLE Since 1971

ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಭಾರ್ತಿಯಾ ಮಾಲ್ 9036289560 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633 | ಹೊಸೂರು ರಸ್ತೆ 9035499022

STORE LOCATOR

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರಾಂಡ್‌ಗಳು ಮತ್ತು ಮಾಡೆಲ್‌ಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ರಿಯಾಯಿತಿ. ರೂ.10000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. 3 ಇಎಂಐ ಅನ್ನು ತೆರವುಗೊಳಿಸಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / ಐಪಿಎಲ್ ವ್ಯಾಲೆಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ. ಆಯ್ಕೆಮಾಡಿದ ಮೊಬೈಲ್‌ಗಳಲ್ಲಿ 70% ವರೆಗೆ ಖಚಿತವಾದ ಮರುಖರೀದಿಯು ಮಾನ್ಯವಾಗಿರುತ್ತದೆ.*ಉತ್ತಮ ಕೆಲಸದ ಸ್ಥಿತಿಯಲ್ಲಿರಲು ಎಂ.ಆರ್.ಪಿ ಮತ್ತು ಉತ್ಪನ್ನದ ಮೇಲೆ ಮಾನ್ಯವಾದ ವಿನಿಮಯ ಕೊಡುಗೆ. ಹಳೆಯ ಉತ್ಪನ್ನದ ಸ್ಥಿತಿಯನ್ನು ಆಧರಿಸಿ ವಿನಿಮಯ ಮೌಲ್ಯವು ಭಿನ್ನವಾಗಿರುತ್ತದೆ.

165 ಮೆಗಾ ಸ್ಟೋರ್ಸ್, ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.

SHOP ONLINE @ www.giriasindia.com

"like" us on facebook HTTPS://WWW.FACEBOOK.COM/GIRIAS.INDIA

WE SUPPORT ROUND TABLE INDIA LADIES CIRCLE INDIA

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

INCHARA MANAGED VILLA PLOTS — NISCHITHA PROPERTIES PRESENTS — RAJATHADRI GREEN CITY

NISCHITHA PROPERTIES
More Than Real Estate

INCHARA FARMS
Managed Villa Plots

ಪ್ರೀ ಲಾಂಚ್ ಆಫರ್

ನಗರಕ್ಕೆ ಹತ್ತಿರ, ಪ್ರಕೃತಿಯ ಒಡನಾಟದಲ್ಲಿ

ದಕ್ಷಿಣ ಬೆಂಗಳೂರಿನ ಪ್ರಧಾನ ಪ್ಲಾಟ್‌ಗಳು

ವಿಲ್ಲಾ ಪ್ಲಾಟ್‌ಗಳು
ನೆಲಮಂಗಲ

1 Km from Highway,
Close to proposed **IRR (300ft) Ring Road**

ಬೆಂಗಳೂರಿನ ಹತ್ತಿರದ,
ಸುಸಜ್ಜಿತ ವಿಲ್ಲಾ ಪ್ಲಾಟ್ಸ್

EARN Monthly Income
along with
PURCHASING PROPERTY.

2BHK VILLA
Festival Offer Price
₹1499
per sqft
Plot size
5000+ sqft

ಪ್ರೀಮಿಯಂ ಪ್ಲಾಟ್
ಮೈಸೂರು ರಸ್ತೆ

- **1.5 Km** from Mysore Expressway
- **3 Kms** to Wonderla & Close to Industrial Areas
- **10 Mins** to Kengeri Metro
- Close to Leading Schools & Tech Parks

PLOT SIZE
30X40, 30X50, 40X60 and Odd Sites
PLOT FACING
East, West and North facing
ROADS
60ft, 40ft, and 33 ft Roads

HIGHLIGHTS
- Near To Nelamangala Town
- Huge Price Appreciation Potential
- 100% Clear Legal Titles
- Club House With 20+ Amenities

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9164 00 9004
nischitaproperties.com

- 9 Acres, 147 Plots
- Security, Water, Power, Drainage
- Top Schools & Tech Parks
- 100% Clear Legal Title

JANKAL PRISTINE

READY TO MOVE IN
Super Luxurious 2 & 3 BHK Residential Apartments with Modern Amenities

* Terms & Conditions Apply

JP Nagar 8th Phase, Kothanur Village

NEW YEAR OFFER
Actual price **7499/-** per sqft
OFFER PRICE **6999/-** per sqft
HURRY UP! FOR LIMITED PERIOD ONLY
all inclusive except registration

PROXIMITY
- **1.3 km** Meenakshi Mall & Temple
- **2 km** from Brigade Millienium
- **3.5 km** from Metro cash & carry Konanakunte
- **4 km** from Bannerghatta NICE Road
- **5 km** from J.P. Nagar Ring Road Junction
- **7 km** from Jayanagar 4th Block

SCHOOL & COLLEGES
Chaitanya School, Delhi Public School, Valley International, Kumarans, Oxford, Dayananda Sagar Engg. College, PES Engg. College, KSIT Engg.

HOSPITALS
Apollo, Fortis, Jayadeva Hospital, Sagar Hospital

All Modern Amenities | Bank Loan Available

9141090997 | 9900578737

RERA No.PRM/KA/RERA/1251/310/PR/190506/002548
www.aashirvad.net

RAJESHWARI AASHIRVAD
your dreams! our go

ಅನುಮೋದನೆ ಆದ ಸುಸಜ್ಜಿತವಾಗಿ, ಅಭಿವೃದ್ಧಿಯಾಗಿರುವ
ಸೈಟಿನ ಮೇಲೆ ಇನ್ವೆಸ್ಟ್ ಮಾಡಿ

BMRDA & RERA APPROVED SITES

ಕೆಂಗೇರಿಯಿಂದ | ಮೈಸೂರು ರಸ್ತೆ
ಕೆಲವೇ ನಿಮಿಷದ ಪ್ರಯಾಣ | ದೊಡ್ಡ ಆಲದಮರದ ಬಳಿ

10+ YEARS OF EXPERIENCE **2k+** HAPPY CUSTOMER **9+** COMPLETED PROJECTS

- ಚಲ್ಲಘಟ್ಟ ಮೆಟ್ರೋ ನಿಲ್ದಾಣದಿಂದ 10 ನಿಮಿಷ
- ಕೆಂಗೇರಿ ರೈಲು ನಿಲ್ದಾಣದಿಂದ 30 ನಿಮಿಷ

Special Offer
Rs. **2** Lakh
Discount
On Spot Booking

- ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇಯಿಂದ 10 ನಿಮಿಷ
- ಪ್ರಸ್ತಾವಿತ ಬೆಂಗಳೂರು ಹೊರ ವರ್ತುಲ ರಸ್ತೆ (ORR)

AMENITIES
Under Ground Electricity | Rain Water Harvesting | Over Head Tank | Gated Community | Children Play Area | Black Top Tarred Road | Tree Plantation | Temple

Layout Video Scan Here

ಲೇಔಟ್ ವಿಶೇಷತೆಗಳು :
- ನೋಂದಣಿಗೆ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ
- ನಿವೇಶನ ಖರೀದಿಸಲು ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ
- ಲೇಔಟ್ ಅಭಿವೃದ್ಧಿಯಾಗಿ ಆಕರ್ಷಕವಾಗಿದೆ
- ಎಲ್ಲಾ ಕಾನೂನಾತ್ಮಕ ದಾಖಲೆಗಳನ್ನು ಹೊಂದಿದೆ

ಸೈಟ್ ಭೇಟಿಗಾಗಿ ಕರೆಮಾಡಿ: **6399889911**
Sites Sizes: 20x30 30X35, 30X40

ಕನಕಪುರ ರಸ್ತೆಯ ಸೋಮನಹಳ್ಳಿ ಗೇಟ್ ಬಳಿ ಟೋಲ್ ನಿರ್ಮಿಸುತ್ತಿರುವುದನ್ನು ವಿರೋಧಿಸಿ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಕಾಮಗಾರಿ ಸ್ಥಗಿತಕ್ಕೆ ರೈತ ಸಂಘ ಆಗ್ರಹ

ಟೋಲ್‌ಗೆ ವಿರೋಧ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಪುರ ರಸ್ತೆಯ ಸೋಮನಹಳ್ಳಿ ಗೇಟ್ ಬಳಿ ಟೋಲ್ ನಿರ್ಮಾಣ ಮಾಡುತ್ತಿರುವುದನ್ನು ವಿರೋಧಿಸಿ ಸ್ಥಳೀಯರು ರೈತ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

‘ಟೋಲ್ ವಸೂಲಿ ಕೇಂದ್ರವು ಸ್ಥಳೀಯ ಜನರ ಪಾಲಿಗೆ ಶಾಪವಾಗಿದೆ. ದಿನಂಪ್ರತಿ ಶಾಲೆ, ಆಸ್ಪತ್ರೆಗೆ ಇತರ ಕೆಲಸಗಳಿಗೆ ತೆರಳುವವರು ಸೋಮನಹಳ್ಳಿ ಗೇಟ್ ದಾಟಿಯೇ ಹೋಗಬೇಕು. ಕೆಲವೇ ಕಿಲೋ ಮೀಟರ್ ಓಡಾಟಕ್ಕೂ ರೈತರು ಸೇರಿದಂತೆ ಎಲ್ಲರೂ ದುಬಾರಿ ಶುಲ್ಕ ಪಾವತಿಸಬೇಕಾದ ಸನ್ನಿವೇಶ ಸೃಷ್ಟಿಯಾಗುತ್ತದೆ. ಬಡವರು, ಮಧ್ಯಮ ವರ್ಗದವರು ಹಾಗೂ ರೈತರ ಪಾಲಿಗೆ ನುಂಗಲಾರದ ತುತ್ತಾಗಿದೆ’ ಎಂದು ಪ್ರತಿಭಟನಕಾರರು ಆರೋಪಿಸಿದರು.

‘ಟೋಲ್‌ಗೇಟ್ ವಿರೋಧಿಸಿ ರೈತ ಸಂಘವು ಹಿಂದೆ ಪ್ರತಿಭಟನೆ ನಡೆಸಿದ್ದಾಗ ಕಾಮಗಾರಿ ನಿಲ್ಲಿಸಲಾಗಿತ್ತು. ಸ್ಥಳೀಯರಿಗಾಗಿ ಸರ್ವಿಸ್ ರಸ್ತೆ ನಿರ್ಮಿಸಿಕೊಡಬೇಕು. ಇಲ್ಲವೇ ಟೋಲ್ ಕೇಂದ್ರವನ್ನು ಸ್ಥಳಾಂತರಿಸಬೇಕು ಎಂಬ ಬೇಡಿಕೆಯನ್ನು ಕಡೆಗಣಿಸಿ ಈಗ ಪೊಲೀಸರ ಸರ್ಪಗಾವಲಿನಲ್ಲಿ ಕಾಮಗಾರಿ ಮತ್ತೆ ಆರಂಭಿಸಿದ್ದಾರೆ’ ಎಂದು ಪ್ರತಿಭಟನಕಾರರು ತಿಳಿಸಿದರು.

ಕಾಮಗಾರಿ ನಿಲ್ಲಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡುವುದಾಗಿ ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡ ನದೀಂ ಪಾಷಾ ಎಚ್ಚರಿಸಿದರು.

ಪ್ರತಿಭಟನೆ ಹಿಂಪಡೆಯುವಂತೆ ಮನವೊಲಿಸಲು ಪೊಲೀಸರು ಮುಂದಾದಾಗ ರೈತರು ಮತ್ತು ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಪ್ರತಿಭಟನಕಾರರನ್ನು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದು ಬಿಡುಗಡೆ ಮಾಡಿದರು.

ಟಿಬೆಟ್ ಮೇಲೆ ಚೀನಾ ದೌರ್ಜನ್ಯ ಜಾಗೃತಿಗಾಗಿ ಬೈಕ್ ರ‍್ಯಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿಬೆಟ್ ಮೇಲೆ ಚೀನಾ ನಡೆಸಿದ ದೌರ್ಜನ್ಯವನ್ನು ಬಹಿರಂಗ ಪಡಿಸಲು ಟಿಬೆಟಿಯನ್ ಯುವ ಕಾಂಗ್ರೆಸ್ ಅಖಿಲ ಭಾರತ ಮೋಟಾರ್ ಬೈಕ್ ರ‍್ಯಾಲಿ ಹಮ್ಮಿಕೊಂಡಿದೆ ಎಂದು ರ‍್ಯಾಲಿ ಸಂಯೋಜಕ ವಿಷ್ಣುಜಿ ತಿಳಿಸಿದರು.

‘ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾವು 1959ರಲ್ಲಿ ಟಿಬೆಟ್ ಅನ್ನು ವಶಪಡಿಸಿಕೊಂಡ ಮೇಲೆ, ಶಾಂತಿಯುತವಾಗಿದ್ದ ಇಂಡೋ-ಟಿಬೆಟ್ ಗಡಿ ಛಿದ್ರವಾಯಿತು. ತನ್ನ ವಿಸ್ತರಣಾ ನೀತಿಯಿಂದಾಗಿ ಚೀನಾವು ಭಾರತದ ಭೂಪ್ರದೇಶದೊಳಗೆ ನುಸುಳುವಿಕೆಗೆ ಪ್ರಚೋದಿಸುತ್ತಿದೆ. ಭಾರತದ ಗಡಿ ಭದ್ರತೆ ಮತ್ತು ಸಾರ್ವಭೌಮತೆಗೆ ನೇರ ಬೆದರಿಕೆಯನ್ನು ಉಂಟುಮಾಡಿದೆ’ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಟಿಬೆಟ್ ಸಂಸ್ಕೃತಿಯನ್ನು ಚೀನಾ ನಾಶ ಮಾಡುತ್ತಿದೆ. ಟಿಬೆಟಿಯನ್ ಶಾಲೆಗಳು ಮತ್ತು ಸನ್ಯಾಸಿಗಳ ಸಂಸ್ಥೆಗಳನ್ನು ಬಲವಂತವಾಗಿ ಮುಚ್ಚುತ್ತಿದೆ. ಬೃಹತ್ ಅಣೆಕಟ್ಟು ನಿರ್ಮಿಸುವುದು. ಪರಮಾಣು ಉತ್ಪಾದನೆ, ಪರಮಾಣು ತ್ಯಾಜ್ಯವನ್ನು ಸುರಿಯುವುದು ಸೇರಿದಂತೆ ವಿನಾಶಕಾರಿ ನೀತಿಗಳ ಮೂಲಕ ಟಿಬೆಟ್ ಪರಿಸರವನ್ನು ಕೂಡ ಹಾಳು ಮಾಡುತ್ತಿದೆ’ ಎಂದು ಆರೋಪಿಸಿದರು.

‘ಟಿಬೆಟ್ ಸ್ವತಂತ್ರ ದೇಶವಾದರೆ ಭಾರತದ ಭದ್ರತೆಗೆ ಪೂರಕವಾಗಲಿದೆ. ಟಿಬೆಟ್‌ನ ಐತಿಹಾಸಿಕ ಸ್ವತಂತ್ರ ಸ್ಥಾನಮಾನವನ್ನು ಬೆಂಬಲಿಸುವ ಮತ್ತು ಐತಿಹಾಸಿಕ ಇಂಡೋ-ಟಿಬೆಟ್ ಗಡಿಯನ್ನು ಗುರುತಿಸುವ ನಿರ್ಣಯವನ್ನು ಭಾರತ ಸರ್ಕಾರ ಕೈಗೊಳ್ಳಬೇಕು. ಟಿಬೆಟ್ ಪರಿಸರವನ್ನು ಉಳಿಸಲು ವಿಶ್ವದ ಸಮುದಾಯಗಳು ಧ್ವನಿ ಎತ್ತಬೇಕು’ ಎಂದು ಆಗ್ರಹಿಸಿದರು.

‘ಈ ಬಗ್ಗೆ ಭಾರತೀಯರಲ್ಲಿ ಜಾಗೃತಿ ಮೂಡಿಸಲು ನವೆಂಬರ್ 22ರಂದು ಅರುಣಾಚಲ ಪ್ರದೇಶದ ಇಂಡೋ-ಟಿಬೆಟ್ ಗಡಿಯಲ್ಲಿರುವ ಬುಮ್-ಲಾ ಪಾಸ್‌ನಿಂದ ಬೈಕ್ ರ‍್ಯಾಲಿ ಆರಂಭಿಸಿದ್ದೇವೆ. ಭಾರತದ 20ಕ್ಕೂ ಹೆಚ್ಚು ರಾಜ್ಯಗಳಲ್ಲಿ 15,000 ಕಿಲೋಮೀಟರ್ ರ‍್ಯಾಲಿ ನಡೆಸಲಾಗುತ್ತಿದೆ’ ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ಗೊನ್ಪೊ ದುಂಡುಪ್, ತ್ಸೆರಿಂಗ್ ಚೊಂಪೆಲ್, ಟೆನ್‌ಜಿನ್ ಲಾಡೆನ್ ಉಪಸ್ಥಿತರಿದ್ದರು.

ಸುಧಾ, ಮಯೂರ ಓದಿರಿ



ಹೊಸ ವರ್ಷಕ್ಕೆ ಹತ್ತಾರು ಸಂಕಲ್ಪಗಳೊಂದಿಗೆ ಕಾಲಿಡುತ್ತೇವೆ. ಆದರೆ, ಅದನ್ನು ಎಷ್ಟರ ಮಟ್ಟಿಗೆ ಸಾಕಾರಗೊಳಿಸುತ್ತೇವೆ ಎಂಬುದು ಆ ವರ್ಷದ ಕೊನೆಯಲ್ಲಿ ತಿಳಿಯುತ್ತದೆ. ಹುರುಪಿನಲ್ಲಿ ಕೈಗೊಳ್ಳುವ ಎಷ್ಟೋ ಸಂಕಲ್ಪಗಳನ್ನು ಪೂರ್ಣಗೊಳಿಸಲು ಚಿಕ್ಕ ಪ್ರಯತ್ನಗಳು ಮಾಡದೇ ಅವುಗಳು ಸಂಕಲ್ಪಗಳಾಗಿಯೇ ಉಳಿದುಬಿಟ್ಟಿರುತ್ತವೆ. ಸಂಕಲ್ಪಗಳನ್ನು ನೆರವೇರಿಸಲು ಮುಖ್ಯವಾಗಿ ಪರಿಶ್ರಮ, ತಾಳ್ಮೆ, ಪ್ರಯತ್ನದ ಅಗತ್ಯವಿರುತ್ತದೆ. ಮನಸ್ಸಿದ್ದರೇ ಮಾರ್ಗ ಎಂಬ ನಾಣ್ಣುಡಿಯಂತೆ ಸ್ಥಿರ ಮನಸ್ಸಿದ್ದರೇ ಏನು ಬೇಕಾದರೂ ಸಾಧಿಸಬಹುದು.

2025 ಇರಲಿ ದೃಢ ಸಂಕಲ್ಪ

ಸಿಂಧು ಕೆ.ಟಿ

ಕೆಲ ಸರ್ವೇಸಾಮಾನ್ಯ ಸಂಕಲ್ಪಗಳು

1. **ಆರೋಗ್ಯದ ಸಮತೋಲನ:** ಇಂದಿನ ದಿನಮಾನದಲ್ಲಿ ಆರೋಗ್ಯವೇ ಎಲ್ಲಕ್ಕಿಂತ ಮುಖ್ಯವಾಗಿದ್ದು, ಆರೋಗ್ಯದ ಕಡೆ ಹೆಚ್ಚು ಗಮನ ಕೊಡುವುದು ಅಗತ್ಯ. ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಢರಾಗುವತ್ತ ಗಮನವಿರಬೇಕು. ಆ ನಿಟ್ಟಿನಲ್ಲಿ ಉತ್ತಮ ಆಹಾರ ಸೇವನೆಯನ್ನು ರೂಢಿಸಿಕೊಂಡು ಸ್ವಸ್ಥ ಆರೋಗ್ಯವನ್ನು ಕಾಯ್ದುಕೊಳ್ಳುವುದು 2025ರ ನಿಮ್ಮ ಮೊದಲ ಸಂಕಲ್ಪವಾಗಿರಲಿ.

2. **ನಿಮಗಾಗಿ ಸಮಯ ಮೀಸಲಿಡಿ:** ಕೆಲಸದ ಜಂಜಾಟದಲ್ಲಿ ನಮಗಾಗಿ ನಾವು ಸಮಯವನ್ನು ಕೊಡುವುದೇ ಕಡಿಮೆಯಾಗಿದೆ. ಆಧುನಿಕ ಯುಗದಲ್ಲಿ ಯಂತ್ರಗಳಂತೆ ಭಾವನೆಗಳನ್ನು ಮರೆತು, ನಮ್ಮ ಆಸೆ–ಆಕಾಂಕ್ಷೆಗಳನ್ನು ಬಿಟ್ಟು ಇಷ್ಟವಿಲ್ಲದ ಜೀವನಶೈಲಿಗೆ ಬೇರೆ ದಾರಿಯೇ ಇಲ್ಲದೆ ಒಗ್ಗಿಕೊಂಡಿರುವುದನ್ನು ಬದಲಿಸಿಕೊಳ್ಳಬೇಕು. ನಮಗೆ ಇಷ್ಟವಾದ ಕೆಲಸಗಳಲ್ಲಿ ತೊಡಗಿಕೊಳ್ಳಲು ಹೆಚ್ಚು ಸಮಯವಿಡಿ.

3. **ಹೆಚ್ಚು ಕ್ರಿಯಾಶೀಲರಾಗಿರಿ:** ಹೆಚ್ಚು ಕ್ರಿಯಾಶೀಲತೆಯಿಂದ ಇರುವುದು ನಮ್ಮನ್ನೂ ಸದಾ ಲವಲವಿಕೆಯಿಂದ ಇಡಲು ಸಾಧ್ಯ. ಉದ್ಯೋಗ, ಶಿಕ್ಷಣ ಹೀಗೆ ನಾನಾ ಕಾರಣಗಳಿಂದ ದೂರವಿರುವ ಎಷ್ಟು ಜನರು ಒಂಟಿತನ, ನಕಾರಾತ್ಮಕ ಚಿಂತನೆಗಳಿಂದ ಬಳಲುವ ಸಾಧ್ಯತೆಗಳು ಹೆಚ್ಚಿರುತ್ತವೆ. ಈ ಪರಿಸ್ಥಿತಿಗೆ ಅವಕಾಶ ಕಲ್ಪಿಸದೇ ಯಾವುದಾದರೊಂದು ಚಟುವಟಿಕೆಯಲ್ಲಿ ತೊಡಗಿಕೊಳ್ಳುವ ಪ್ರಯತ್ನ ಮಾಡಿ.

4. **ವ್ಯಕ್ತಿತ್ವ ವಿಕಸನದೆಡೆ ಹೆಜ್ಜೆ:** ವ್ಯಕ್ತಿತ್ವದಿಂದಾಗಿ ವ್ಯಕ್ತಿಯ ಮೇಲಿನ ಗೌರವ ಹೆಚ್ಚುತ್ತದೆ. ವ್ಯಕ್ತಿತ್ವವು ವ್ಯಕ್ತಿಯ ಕನ್ನಡಿಯಿದ್ದಂತೆ. ಅದನ್ನು ಉತ್ತಮ ಪಡಿಸಿಕೊಳ್ಳಲು ಅಗತ್ಯವಿರುವ ಎಲ್ಲ ರೀತಿಯ ವಿಷಯಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ. ವ್ಯಕ್ತಿತ್ವದಿಂದ ದೊರೆಯುವ ಜನಪ್ರಿಯತೆಯೂ ಎಂದಿಗೂ ಕುಗ್ಗುವುದಿಲ್ಲ. ಎಷ್ಟೋ ಅತ್ಯುತ್ತಮ ಸಾಧಕರು ನಮ್ಮೊಂದಿಗೆ ಇದ್ದರೂ ಸಾಧನೆಯೊಂದಿಗೆ ಉತ್ತಮ ವ್ಯಕ್ತಿತ್ವ ಹೊಂದಿರುವವರನ್ನು ಜನ ಎಂದಿಗೂ ಮರೆಯುವುದಿಲ್ಲ.

5. **ಅನುಕರಣೆಗಿಂತ ಅಳವಡಿಕೆ ಕಡೆಗೆ ಗಮನ:** ಯಾರನ್ನೋ ನೋಡಿ ಅನುಕರಿಸುವುದಕ್ಕಿಂತ ನೀವಾಗಿಯೇ ನಿಮ್ಮ ಬೇಕು–ಬೇಡಗಳ ಕಡೆ ಗಮನ ಹರಿಸಿ. ಜಿಮ್‌ಗೆ ಹೋಗುವವರನ್ನು ನೋಡಿ ಅವರಂತೆ ಹೋಗಬೇಕು ಎಂದುಕೊಳ್ಳುವುದಕ್ಕಿಂತ, ನಮಗೆ ಏನು ಬೇಕು, ಏನು ಮಾಡಿದರೆ ಸೂಕ್ತ ಎಂಬುದರ ಸ್ಪಷ್ಟ ಅರಿವಿರಲಿ. ಒಬ್ಬೊಬ್ಬೊರಿಗೆ ಒಂದೊಂದು ವೈಯಕ್ತಿಕ ಸಂಕಲ್ಪಗಳಿರುತ್ತವೆ. ಕೆಲವರು ವೃತ್ತಿ ಜೀವನದಲ್ಲಿ ಯಶಸ್ಸು ಗಳಿಸಬೇಕು ಎಂದು ನಿರ್ಧರಿಸಿದರೆ, ಇನ್ನು ಕೆಲವರು ಸಂಬಂಧಗಳನ್ನು ಗಟ್ಟಿಗೊಳಿಸುವ ಪ್ರಯತ್ನ ಮಾಡುತ್ತಾರೆ. ಏನೋ ಒಂದು ಸಾಧಿಸಬೇಕು ಎಂದು ನಿರ್ಧರಿಸುವವರಿಗೆ ಹೊಸವರ್ಷವೇ ಸಂಕಲ್ಪಕ್ಕೆ ಸಮಯವಲ್ಲ. ಯಾವ ಸಮಯದಲ್ಲಿ ಬೇಕಾದರೂ ದೃಢ ಸಂಕಲ್ಪ ಮಾಡಬಹುದು. ಆಯ್ಕೆ ನಿಮ್ಮ ಕೈಯಲ್ಲೇ ಇರುತ್ತೆ. ಅದನ್ನು ಅವಕಾಶವಾಗಿ ಬದಲಾಯಿಸಿಕೊಳ್ಳಿ.

ಇನ್ನೂ ಕೆಲವರು ಹೊಸ ವರ್ಷಕ್ಕೆ ಸಂಕಲ್ಪಗಳನ್ನು ಇಟ್ಟುಕೊಳ್ಳುವುದೇ ಇಲ್ಲ. ಕಾರಣ ಒಬ್ಬೊಬ್ಬರಿಗೆ ಒಂದೊಂದು ಇರಬಹುದು. ಬದುಕು ಬಂದಂತೆ ಸ್ವೀಕರಿಸಿದರೆ ಆಯಿತು ಎಂಬ ಮನಸ್ಥಿತಿಯೂ ಇರಬಹುದು. ಸಾಧಿಸುವ ಹಠ, ಛಲ ಇದ್ದರೆ ಅರ್ಧ ಕೆಲಸ ಮುಗಿದಂತೆ.

ಹೊಸವರ್ಷದ ಎಲ್ಲ ಸಂಕಲ್ಪಗಳು ಈಡೇರಲಿ, ಅದರ ಸಲುವಾಗಿ ಪರಿಶ್ರಮ ಹಾಕಲು ಮನಸ್ಸು ಸಿದ್ಧಗೊಳ್ಳಲಿ. 2025 ನಿಮ್ಮ ಯಶಸ್ಸಿಗೆ ದಾರಿದೀಪವಾಗಲಿ. ❖

ಸಂಕಲ್ಪ ಈಡೇರುವ ಬಗೆಯೇನು?

- **ಗುರಿಗಳ ಸಾಕಾರಕ್ಕೆ ಅಗತ್ಯ ಪರಿಶ್ರಮವನ್ನು ನಿರಂತರವಾಗಿ ಹಾಕಿ.**
- **ಚಿಕ್ಕ ಗುರಿಗಳನ್ನು ಸಾಧಿಸುವ ಮೂಲಕ ದೊಡ್ಡ ಸಂಕಲ್ಪಕ್ಕೆ ಕೈ ಹಾಕಿ.**
- **ಹಿಂದಿನ ತಪ್ಪುಗಳ ಮೂಲ ಹುಡುಕಿ, ತಿದ್ದಿಕೊಳ್ಳಿ.**
- **ಧೈರ್ಯ, ಆತ್ಮವಿಶ್ವಾಸ, ಗಟ್ಟಿ ನಿಲುವು ಬೆಳೆಸಿಕೊಳ್ಳಿ.**
- **ಬೇಕು– ಬೇಡಗಳ ಕುರಿತು ಸರಿಯಾದ ತಿಳಿವಳಿಕೆ ಇರಲಿ.**
- **ನಿಮ್ಮ ಮೇಲೆ ನಿಮಗೆ ನಿಯಂತ್ರಣವಿರಲಿ.**

‘ಬಕೆಟ್‌ಲಿಸ್ಟ್’ನಲ್ಲಿ ಏನಿದೆ?

ಹೊಸ ವರ್ಷ ಆರಂಭವಾಗುತ್ತಿದ್ದಂತೆ ‘ಬಕೆಟ್‌ಲಿಸ್ಟ್’ನಲ್ಲಿ ಏನು ಸೇರಿಸಬಹುದು? ಎಂಬ ಪ್ರಶ್ನೆ ಎದುರಾಗುತ್ತದೆ. ಆಸೆ ಸಣ್ಣದೊ, ದೊಡ್ಡದೊ ಅದನ್ನು ಬಕೆಟ್‌ಲಿಸ್ಟ್‌ಗೆ ಸೇರಿಸಿ , ಈಡೇರಿಸಿಕೊಳ್ಳಲು ಪಣತೊಡುವುದರಲ್ಲಿ ಒಂದು ಸಂಭ್ರಮವಿದೆ. 2025ರಲ್ಲಿ ಯಾರ್‍ಯಾರ ಬಕೆಟ್‌ಲಿಸ್ಟ್‌ನಲ್ಲಿ ಏನಿವೆ?

ನಿರೂಪಣೆ: ರೂಪಾ ಕೆ.ಎಂ.

ಹೊಸತು ಕಲಿಯುವಾಸೆ

ಸದ್ಯಕ್ಕೆ ನಾನು ‘ಮಕ್ಕಳ ಮನಃಶಾಸ್ತ್ರ’ವಿಷಯದಲ್ಲಿ ಸ್ನಾತಕೋತ್ತರ ಪದವಿ ಕೋರ್ಸ್‌ಗೆ ಸೇರಿದ್ದು, ಮೊದಲ ವರ್ಷದ ಪರೀಕ್ಷೆಯನ್ನು 2025ರಲ್ಲಿ ಎದುರಿಸುತ್ತಿದ್ದೇನೆ. ಆ ಬಗ್ಗೆ ಖುಷಿ ಇದೆ. ಇದರ ಜತೆಗೆ ಹೊಸ ಭಾಷೆ, ಹೊಸ ಸಂಸ್ಕೃತಿಯನ್ನು ಅರಿಯುವ ಸಲುವಾಗಿ ಹೊಸ ಪ್ರಾಂತ್ಯಕ್ಕೆ ಭೇಟಿ ಕೊಡುವ ಆಸೆ ಇದೆ. ದೇಶದ ಒಳಗೆ ಅಥವಾ ವಿದೇಶ ಯಾವುದಾದರೂ ಸರಿ. ಆ ನಿಟ್ಟಿನಲ್ಲಿಯೂ ಯೋಜನೆಗಳನ್ನು ಹಾಕಿಕೊಂಡಿದ್ದೀನಿ.

ಉತ್ತಮ ಪಾತ್ರಗಳಿರುವ ಸಿನಿಮಾಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಉತ್ತಮ ಕಥೆ ಇರುವ ಸಿನಿಮಾಗಳಲ್ಲಿ ಅವಕಾಶ ಸಿಗಬೇಕು ಎನ್ನುವುದೂ ಎಂದಿನಂತೆ ಇದೆ. ಹಿಮಾಲಯಕ್ಕೆ ಭೇಟಿ ಕೊಡುವ ಆಸೆಯಿದೆ. ಕಳೆದ ವರ್ಷ ಸ್ತೋತ್ರಗಳನ್ನು ಕಲಿತೆ. ಈ ವರ್ಷ ವಿಷ್ಣು ಸಹಸ್ರನಾಮ ಅಥವಾ ಲಲಿತಾ ಸಹಸ್ರನಾಮ ಕಲಿಯುವ ಆಸೆಯಿದೆ.

ಸ್ಕೈಡೈವಿಂಗ್ ಮತ್ತು ಸ್ಕೂಬಾ ಡೈವಿಂಗ್ ಮಾಡಬೇಕು ಎಂಬ ಆಸೆಗಳನ್ನು 2024ರಲ್ಲಿ ಈಡೇರಿಸಿಕೊಂಡಿದ್ದೇನೆ. ಈ ಸಲ ಬಂಜಿ ಜಂಪಿಂಗ್‌ನಂಥ ಸಾಹಸ ಮಾಡುವ ಆಸೆಯಿದೆ.

ಅಂಕಿತಾ ಅಮರ್, ನಟಿ

ಸ್ವಕಾಳಜಿ ಹೆಚ್ಚಿಸಬೇಕು

ಒಳ್ಳೊಳ್ಳೆಯ ಸಿನಿಮಾಗಳನ್ನು ಮಾಡಬೇಕು. ಉತ್ತಮ ಕಥೆ ಇರುವ ಸಿನಿಮಾಗಳಲ್ಲಿ ಪಾತ್ರ ಮಾಡಬೇಕು ಎನ್ನುವುದು ಪ್ರತಿ ವರ್ಷವೂ ಇರುತ್ತದೆ. ಇದರ ಜತೆಗೆ ‘ಸ್ವಕಾಳಜಿ’ಗೆ ಹೆಚ್ಚು ಒತ್ತು ಕೊಡಬೇಕು ಅಂಥ ಅಂದುಕೊಂಡಿದ್ದೀನಿ. ಕೆಲಸದ ಒತ್ತಡಗಳ ನಡುವೆಯೂ ದೈಹಿಕವಾಗಿ, ಮಾನಸಿಕವಾಗಿ ಕಾಳಜಿ ವಹಿಸಬೇಕು ಅಂತಿದೆ. ಕೆಲಸದ ಗೀಳು ಇರುವುದರಿಂದ ಒಂದಾದ ಮೇಲೆ ಒಂದು ಕೆಲಸ ಮಾಡ್ತಾನೆ ಇರುತ್ತೀನಿ. ಕೆಲಸಗಳ ನಡುವೆಯೂ ವಿರಾಮ ಕೊಟ್ಟುಕೊಳ್ಳುವುದನ್ನು ಕಲಿಯಬೇಕಿದೆ. ಇದನ್ನು ಪ್ರಜ್ಞಾಪೂರ್ವಕವಾಗಿ ಮಾಡಬೇಕಿದೆ. ಧ್ಯಾನ ಮಾಡುತ್ತೇನೆ. ನಿತ್ಯ ವರ್ಕ್ ಔಟ್ ಮಾಡ್ತೀನಿ. ಈಗ ಶೂಟಿಂಗ್ ಇರುವ ಕಾರಣ ಆಗುತ್ತಿಲ್ಲ. ಎಲ್ಲೇ ಇದ್ದರೂ ವರ್ಕ್‌ಔಟ್ ಬಿಡದಂತೆ ನೋಡಿಕೊಳ್ಳಬೇಕಿದೆ. ಅದಕ್ಕಾಗಿ ವೇಳಾಪಟ್ಟಿಯನ್ನು ಹಾಕಿಕೊಳ್ಳುವ ಆಸೆಯಿದೆ.

ಕಳೆದ ವರ್ಷ ಬಕೆಟ್‌ಲಿಸ್ಟ್‌ನಲ್ಲಿ ಈಜುವುದು ಇತ್ತು. ಅದನ್ನು ಮುಗಿಸಿದ್ದೇನೆ. ಉತ್ತಮ ಈಜುಗಾರ್ತಿಯಾಗಬೇಕು ಎಂಬುದು ಈ ವರ್ಷವೂ ಇದೆ. ಒಬ್ಬಂಟಿಯಾಗಿ ಪ್ರವಾಸ ಮಾಡುವುದು ಈವರೆಗೆ ಸಾಧ್ಯವಾಗಿಲ್ಲ. ಹಾಗಾಗಿ 2025ರಲ್ಲಿ ಒಬ್ಬಳೇ ಯೋಜನೆ ಹಾಕಿಕೊಂಡು ಯುರೋಪ್‌ಗೆ ಪ್ರವಾಸ ಮಾಡುವ ಆಸೆಯಿದೆ. ಮಾಹಿತಿಗಾಗಿ ಹೆಚ್ಚು ಓದುತ್ತೀನಿ. ಕಾದಂಬರಿ, ವೈಯಕ್ತಿಕ ಬೆಳವಣಿಗೆಗೆ ಸಂಬಂಧಿಸಿದ ಪುಸ್ತಕಗಳು, ಆತ್ಮಕಥೆಗಳನ್ನು ಹೆಚ್ಚು ಓದುತ್ತೀನಿ. ಇದನ್ನು ಹೆಚ್ಚು ಮಾಡಿಕೊಳ್ಳಬೇಕು ಅಂಥ ಅಂದುಕೊಂಡಿದ್ದೇನೆ.

ಚೈತ್ರಾ ಜೆ. ಆಚಾರ್, ನಟಿ

ಎವರೆಸ್ಟ್ ಬೇಸ್‌ಕ್ಯಾಂಪ್‌ಗೆ ರೈಡಿಂಗ್

ಬೈಕ್ ರೈಡರ್‌ಗಳಿಗೆ ಮಹೋನ್ನತ ಕನಸೆಂದರೆ ಅದು ಮೌಂಟ್ ಎವರೆಸ್ಟ್ ಬೇಸ್ ಕ್ಯಾಂಪ್‌ಗಳಿಗೆ ಹೋಗಬೇಕು ಅನ್ನುವುದು. ಅದು 2025ರ ಬಕೆಟ್‌ಲಿಸ್ಟ್‌ನಲ್ಲಿದೆ. ಇದಕ್ಕಾಗಿ ಹಲವು ಬಗೆಯ ಸಿದ್ಧತೆಗಳನ್ನು ಮಾಡಿಕೊಳುತ್ತಾ ಇದ್ದೀನಿ. ಜತೆಗೆ ಈ ಬಾರಿ ನಾನೂ, ನನ್ನ ಅಮ್ಮ ವಿಲ್ಮಾ ಕರ್ವಾಲೋ ಇಬ್ಬರೂ ಒಟ್ಟಿಗೆ ಹೋಗುವುದಕ್ಕೆ ಯೋಜನೆ ಹಾಕಿಕೊಂಡಿದ್ದೇವೆ. ವರ್ಷದ ಮೊದಲ ಆರು ತಿಂಗಳ ಒಳಗೆ ಹೋಗಬೇಕು ಅಂತ ಯೋಚಿಸಲಾಗಿದೆ.

ಸಿದ್ಧತೆ ಅಂದರೆ ದೇಹವನ್ನು ಆದಷ್ಟು ಫಿಟ್ ಆಗಿರುವಂತೆ ನೋಡಿಕೊಳ್ಳುವುದು. ಶಿಸ್ತುಬದ್ಧ ಜೀವನ, ಸರಿಯಾದ ಸಮಯಕ್ಕೆ ಪೌಷ್ಟಿಕ ಆಹಾರ ಸೇವನೆ, ಕ್ರಮಬದ್ಧ ವ್ಯಾಯಾಮ ಮಾಡ್ತೀನಿ. ಜತೆಗೆ ಟೆನ್ನಿಸ್ ಆಡ್ತೀನಿ. ಇದು ದೇಹದ ಕ್ಷಮತೆಯನ್ನು ಹೆಚ್ಚಿಸುತ್ತದೆ. ಎವರೆಸ್ಟ್ ಬೇಸ್ ಕ್ಯಾಂಪ್ ಬಗ್ಗೆ ಹೇಳುವುದಾದರೆ ಅಲ್ಲಿಗೆ ಹೋಗಲು ಎರಡು ಮಾರ್ಗಗಳಿವೆ. ಕಠ್ಮಂಡು ಕಡೆಯಿಂದ ಟಿಬೆಟ್ ಮೂಲಕ ಹೋಗುವ ಮಾರ್ಗವನ್ನು ಆರಿಸಿಕೊಂಡಿದ್ದೇವೆ. ವೈಯಕ್ತಿಕವಾಗಿ ನೋಡುವುದಾದರೆ 2025ರಲ್ಲಿ ಮನಃಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಕೋರ್ಸ್‌ಗೆ ಸೇರಲಿದ್ದೇನೆ.

ಚೆರಿಷ್ ಕರ್ವಾಲೊ, ಬೈಕ್ ರೈಡರ್

ರಸಾಸ್ವಾದ

ಹುರುಳಿಕಾಳಿನ ಖಾದ್ಯ

ಚಳಿಗಾಲಕ್ಕೆ ಹುರುಳಿಕಾಳು ಉತ್ತಮ ಪೌಷ್ಟಿಕಾಂಶವನ್ನು ಒದಗಿಸುತ್ತದೆ. ಹುರುಳಿಕಾಳು ಕಬ್ಬಿಣ, ಕ್ಯಾಲ್ಸಿಯಂ ಹೆಚ್ಚು ಶರ್ಕರ ಪಿಷ್ಠದಿಂದ ಕೂಡಿದೆ. ಚಳಿಗಾಲದಲ್ಲಿ ದೇಹವನ್ನು ಬೆಚ್ಚಗಿರಿಸುವುದಕ್ಕೆ ಹುರುಳಿಕಾಳು ಸೇವನೆ ಉತ್ತಮ ಮದ್ದಾಗಬಲ್ಲದು. ಜತೆಗೆ ಶೀತದಿಂದ ದೂರವಿಡುತ್ತದೆ. ಇಂಥ ಹುರುಳಿಕಾಳನ್ನು ಬಳಸಿ ಹಲವು ಖಾದ್ಯ ತಯಾರಿಸಿದ್ದಾರೆ ಕೆ.ವಿ.ರಾಜಲಕ್ಷ್ಮಿ

ಹುರುಳಿಕಾಳಿನ ದೋಸೆ

ಬೇಕಾಗುವ ಸಾಮಗ್ರಿ : ಅಕ್ಕಿ 2 ಕಪ್, ಹುರುಳಿಕಾಳು 1/2 ಕಪ್, ಉದ್ದಿನ ಬೇಳೆ 1/2 ಕಪ್, ಸಣ್ಣಗೆ ಕತ್ತರಿಸಿದ ಈರುಳ್ಳಿ 1 ಕಪ್, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ : ಅಕ್ಕಿ, ಹುರುಳಿಕಾಳು ಮತ್ತು ಉದ್ದಿನಬೇಳೆಗಳನ್ನು ಚೆನ್ನಾಗಿ ತೊಳೆದು 6-8 ಗಂಟೆಗಳ ಕಾಲ ನೆನೆಸಿ, ಈರುಳ್ಳಿಯೊಂದಿಗೆ ಸೇರಿಸಿ ಅರೆದು ಉಪ್ಪು ಸೇರಿಸಿ ಮಿಶ್ರಣ ಮಾಡಿ. ಐದು ನಿಮಿಷ ಮುಚ್ಚಿಡಿ. ನಂತರ ಕಾದ ಹೆಂಚಿನ ಮೇಲೆ ತುಪ್ಪ ಹಾಕಿ, ದೋಸೆ ಹುಯ್ದು ಎರಡೂ ಕಡೆ ಬೇಯಿಸಿದರೆ, ಹುರುಳಿ ದೋಸೆ ಸಿದ್ಧ.

ಮಿನಿ ಲಡ್ಡು

ಬೇಕಾಗುವ ಸಾಮಗ್ರಿ: ಹುರುಳಿಕಾಳು 1 ಕಪ್, ಶೇಂಗಾ 1/4 ಕಪ್, ಒಣಕೊಬ್ಬರಿ ತುರಿ 1/4 ಕಪ್, ಬೆಲ್ಲದ ಪುಡಿ 1 ಕಪ್, ತುಪ್ಪ 1/4 ಕಪ್, ಏಲಕ್ಕಿ ಪುಡಿ 1 ಚಮಚ.

ಮಾಡುವ ವಿಧಾನ: ಹುರುಳಿ ಕಾಳನ್ನು 4-5 ಗಂಟೆ ನೆನೆಸಿ, ಬಟ್ಟೆಯ ಮೇಲೆ ಹರವಿ ತೇವ ತೆಗೆದಿಟ್ಟುಕೊಳ್ಳಿ. ಸಣ್ಣ ಉರಿಯಲ್ಲಿ ಶೇಂಗಾ ಮತ್ತು ಹುರುಳಿಕಾಳನ್ನು ಪ್ರತ್ಯೇಕವಾಗಿ ಹುರಿಯಿರಿ. ಒಣಕೊಬ್ಬರಿ ತುರಿಯನ್ನು ಸ್ವಲ್ಪ ಬೆಚ್ಚಗೆ ಮಾಡಿಕೊಳ್ಳಿ. ನಂತರ ಹುರಿದ ಹುರುಳಿ ಕಾಳು, ಶೇಂಗಾ, ಕೊಬ್ಬರಿತುರಿಯನ್ನು ಒಟ್ಟಿಗೆ ಅರೆದು ತರಿತರಿಯಾಗಿ ಪುಡಿಮಾಡಿಕೊಳ್ಳಿ. ಬಾಣಲೆಯಲ್ಲಿ ಸ್ವಲ್ಪ ನೀರು ಹಾಕಿ, ಬೆಲ್ಲವನ್ನು ಕರಗಿಸಿ, ತುಪ್ಪ, ಏಲಕ್ಕಿ ಪುಡಿ, ಅಣಿಯಾದ ಕಾಳಿನ ಪುಡಿಯನ್ನು ಸೇರಿಸಿ ಕೈಯಾಡುತ್ತಿರಿ. ಆಗಾಗ ಮಿಶ್ರಣ ಚೆನ್ನಾಗಿ ಹೊಂದಿಕೊಂಡು ತಳ ಬಿಡುವಾಗ ಉರಿ ಆರಿಸಿ, ಬಿಸಿ ಇರುವಾಗಲೇ ಸಣ್ಣಸಣ್ಣ ಉಂಡೆಗಳನ್ನಾಗಿ ಕಟ್ಟಿ.

ತೊವ್ವೆ

ಬೇಕಾಗುವ ಸಾಮಗ್ರಿ: ಹುರುಳಿಕಾಳು 1 ಕಪ್, ಹೆಸರುಬೇಳೆ 1/4 ಕಪ್, ತೊಗರಿಬೇಳೆ 2 ಚಮಚ, ಹಸಿಮೆಣಸಿನಕಾಯಿ 2-3, ಕಾಯಿ ತುರಿ 1/4 ಕಪ್ , ಕರಿಬೇವು 1 ಎಸಳು, ಅರಿಶಿನ 1/2 ಚಮಚ, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಕಾಳುಗಳನ್ನು 1/2 ಗಂಟೆ ನೆನೆಸಿ, ಎರಡು ಕಪ್ ನೀರು, ಅರಿಶಿನ ಸೇರಿಸಿ ಕುಕ್ಕರಿನಲ್ಲಿ ಮೂರು ಸೀಟಿ ಕೂಗಿಸಿ. ಕಾಯಿತುರಿಯನ್ನು ನುಣ್ಣಗೆ ಅರೆದುಕೊಳ್ಳಿ. ಬಾಣಲಿಯಲ್ಲಿ ಒಗ್ಗರಣೆಗೆ ಸಾಸಿವೆ ಸಿಡಿಸಿ ಇಂಗು, ಕರಿಬೇವು ಮೆಣಸಿನಕಾಯಿ, ಅರೆದ ಕಾಯಿ ಸೇರಿಸಿ ಒಂದೆರಡು ನಿಮಿಷ ಹುರಿದು, ಬೆಂದ ಬೇಳೆಕಾಳುಗಳು ಮತ್ತು ಉಪ್ಪು ಸೇರಿಸಿ, ಚೆನ್ನಾಗಿ ಮಿಶ್ರಣ ಮಾಡಿ ಐದು ನಿಮಿಷ ಸಣ್ಣ ಉರಿಯಲ್ಲಿ ಇಡಿ. ನಂತರ ಉರಿ ಆರಿಸಿ, ಮುಚ್ಚಳ ಮುಚ್ಚಿ ತಣಿಯಲು ಬಿಡಿ. ❖

ಸ್ಪಂದನ

ಡಾ. ವೀಣಾ ಎಸ್. ಭಟ್

ಪಿಸಿಒಡಿಗೂ ಬಂಜೆತನಕ್ಕೂ ನಂಟಿದೆಯೇ?

- **ಮೇಡಂ, ನನಗೆ ತಿಂಗಳಿಗೊಮ್ಮೆ ಮುಟ್ಟಾದಾಗ ವಿಪರೀತ ಹೊಟ್ಟೆನೋವಾಗುತ್ತದೆ. ವೈದ್ಯರಿಗೆ ತೋರಿಸಿದಾಗ ಪಿಸಿಒಡಿ ಸಮಸ್ಯೆ ಇದೆ ಎಂದು ಹೇಳಿದ್ದಾರೆ. ಮಗು ಹೊಂದುವಾಸೆಯಿದೆ. ಐವಿಎಫ್ ಮಾಡಿಸಿಕೊಳ್ಳಲು ಸಲಹೆ ನೀಡಿದರು. ಆದರೆ ಐವಿಎಫ್ ಇಷ್ಟವಿಲ್ಲ. ಸಲಹೆ ನೀಡಿ.**

ಸುಮಿತ್ರಾ, ಶಿಕಾರಿಪುರ

ಮುಟ್ಟಾದಾಗ ವಿಪರೀತ ಹೊಟ್ಟೆ ನೋವು ಇದ್ದರೆ ಬಹುಶಃ ಎಂಡೋಮೆಟ್ರಿಯೋಸಿಸ್ ಇರಬಹುದು. ಪಿಸಿಒಡಿ ಮತ್ತು ಮತ್ತು ಪಿಸಿಒಎಸ್ ಸಮಸ್ಯೆಗಳು ಹತ್ತರಲ್ಲಿ ನಾಲ್ವರಿಗೆ ಇದೆ. ಪಿಸಿಒಡಿ ಅಂದರೆ ಪಾಲಿಸಿಸ್ಟಿಕ್ ಓವೆರಿಯನ್ ಡಿಸೀಸ್‌ನಲ್ಲಿ ಮಹಿಳೆಯರಲ್ಲಿ ತಿಂಗಳಿಗೊಮ್ಮೆ ಅಂಡಾಶಯದಿಂದ ಅಂಡಾಣು ಉತ್ಪತ್ತಿಯಾಗದೆ ಬಂಜೆತನ ಉಂಟಾಗಬಹುದು. ಬರಿ ಪಿಸಿಒಡಿ ಸಮಸ್ಯೆ ಇದ್ದರೆ ಅಂಡಾಶಯದಿಂದ ಅಂಡಾಣು ಬಿಡುಗಡೆ ಸರಿಯಾಗಿ ಹಾಗುವ ಹಾಗೆ ಮಾತ್ರೆಗಳನ್ನು ತಜ್ಞ ವೈದ್ಯರು ಸೂಚಿಸುತ್ತಾರೆ. ಇಷ್ಟೆ ಅಲ್ಲದೆ ಪಿಸಿಒಡಿ ತಪ್ಪು ಜೀವನಶೈಲಿಯ ಬಳುವಳಿ. ಪಿಸಿಒಡಿ/ಪಿಸಿಒಎಸ್ ಸಮಸ್ಯೆಗಳು ಬೊಜ್ಜು ಇರುವವರಲ್ಲಿಯೇ ಉಂಟಾಗುವುದರಿಂದ ತೂಕ ನಿರ್ವಹಣೆ ಮಾಡಬೇಕು. ಹೆಚ್ಚು ಪ್ರೊಟೀನ್‌ಯುಕ್ತ ಹಾಗೂ ಕಡಿಮೆ ಕಾರ್ಬೋಹೈಡ್ರೇಟ್ ಅಂಶಗಳಿರುವ ಆಹಾರವನ್ನು ಸೇವಿಸಬೇಕು. ಪ್ರತಿದಿನವು ಕನಿಷ್ಠ ಒಂದುಗಂಟೆ ದೈಹಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳಿ. (ವಾಕಿಂಗ್/ಸ್ವಿಮ್ಮಿಂಗ್/ಸೈಕ್ಲಿಂಗ್/ಯೋಗ/ಏರೋಬಿಕ್ಸ್) ರಾತ್ರಿ ಆರರಿಂದ ಎಂಟು ತಾಸು ಸುಖ ನಿದ್ರೆ ಅಗತ್ಯ. ಅಂಡಾಶಯದಿಂದ ಅಂಡಾಣುಬಿಡುಗಡೆಯನ್ನು ಪ್ರಚೋದಿಸುವುದಕ್ಕಾಗಿ ಕೆಲವು ಮಾತ್ರೆಗಳನ್ನ ಕೊಡುತ್ತಾರೆ. ಅಂಡಾಣು ಬಿಡುಗಡೆಯಾಗುತ್ತಿದೆಯೇ ಇಲ್ಲವೇ ಎನ್ನುವುದನ್ನು ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್‌ನಲ್ಲಿ ಪತ್ತೆ ಹಚ್ಚಿ, ಅಂಡೋತ್ಪತ್ತಿಯ ಸಮಯದ ಆಸುಪಾಸಿನಲ್ಲಿ ಪತಿಯೊಂದಿಗೆ ಲೈಂಗಿಕಕ್ರಿಯೆ ನಡೆಸಿ.

ಪತಿಯ ವೀರ್ಯಾಣುಗಳ ಸಂಖ್ಯೆ ಹಾಗೂ ಗುಣಮಟ್ಟ, ವೀರ್ಯಾಣುಗಳ ಚಲನೆ ಸರಿಯಾಗಿದ್ದರೆ ಸಹಜವಾಗಿಯೇ ಮಗು ಆಗುತ್ತದೆ. ಹೀಗೆ ಸತತ ಪ್ರಯತ್ನದಿಂದ ಮಗು ಆಗದೇ ಇದ್ದಾಗ ಕೊನೆಯ ಪ್ರಯತ್ನವಾಗಿ ಐ.ವಿ.ಎಫ್ ಅಥವಾ ಪ್ರನಾಳಶಿಶುವಿನ ಮೊರೆಹೋಗಬಹುದು. ❖

ಅಂದಿಗೂ ಇಂದಿಗೂ ಬನ್ ಕೇಶವಿನ್ಯಾಸ

ಫ್ಯಾಷನ್

ತುರುಬು ಎಂದು ಈಗ ಮೂಗು ಮುರಿಯುವಂತಿಲ್ಲ. ಮದುವೆ ಇರಲಿ; ನಿಶ್ಚಿತಾರ್ಥ, ಮೆಹೆಂದಿ, ಸಂಗೀತ ಸಂಜೆ, ಆರತಕ್ಷತೆ ಪಾರ್ಟಿಗೂ ಚಂದದ ತುರುಬು ಕಟ್ಟಿಕೊಳ್ಳಬಹುದು. ಸೀರೆಯಷ್ಟೆ ಅಲ್ಲ ಪಾಶ್ಚಿಮಾತ್ಯ ಶೈಲಿಯ ಫ್ಯೂಷನ್ ದಿರಿಸಿಗೂ ತುರುಬು ಸೂಕ್ತ ಆಯ್ಕೆ

ಸುಶೀಲಾ ಡೋಣೂರು

ಮದುವೆಗೊಂದು ಅಂದದ ಕೇಶವಿನ್ಯಾಸ ಬೇಕು ಎಂದಾಗ ಥಟ್ಟನೇ ಹೊಳೆಯುವ ನೂರಾರು ಆಯ್ಕೆಗಳಲ್ಲಿ ಬನ್ ಕೇಶವಿನ್ಯಾಸ ಕೂಡ ಒಂದು. ’ಅರೆ! ಅದಾ? ತುರುಬು. ಅದರಲ್ಲೇನು ವಿಶೇಷ?... ಬನ್ ಹಳೇಯದಾಯ್ತು ಬಿಡಿ’ ಎನ್ನುವವರಿಗೆ ಇಲ್ಲಿವೆ ನೂರಾರು ವೈವಿಧ್ಯಮಯ ಬನ್ ಕೇಶವಿನ್ಯಾಗಳು.

ಹೌದು, ಅಜ್ಜಿ–ಮುತ್ತಜ್ಜಿಯ ಕಾಲದ ಗಟ್ಟಿಯಾದ, ಹೆಣೆದ ತುರುಬು ಅಮ್ಮನ ಕಾಲಕ್ಕೆ ಬಂದಾಗ ತುಸು ಮೆದುವಾಯಿತು. ಅಜ್ಜಿಯ ಕಾಲದಲ್ಲಿ ಕತ್ತಿನಿಂದ ತುಸು ಮೇಲಿನ ಜಾಗದಲ್ಲಿದ್ದ ತುರುಬು, ಅಮ್ಮನ ಕಾಲಕ್ಕೆ ಒಂಚೂರು ಮೇಲಕ್ಕೆ ಜರಿದು ಆಕರ್ಷಣೆಯನ್ನು ಹೆಚ್ಚಿಸಿಕೊಂಡಿತ್ತು.

70ರ ದಶಕದಿಂದ ಉದ್ದ ಜಡೆಯನ್ನು ಒಪ್ಪವಾಗಿ ಹೆಣೆದು ದೊಡ್ಡ ಬನ್‌ಗಳಿಂದಲೇ ಗುರುತಿಸಿಕೊಂಡ ಕನ್ನಡ ನಟಿಯರಾದ ಕಲ್ಪನಾ, ಆರತಿ, ಮಂಜುಳಾರಿಂದ ಹಿಡಿದು, ಬಾಲಿವುಡ್ ನಟಿಯರಾದ ಸಾಯಿರಾ, ಸಾಧನಾ, ಮುಮ್ತಾಜ್‌ವರೆಗೆ ಅನೇಕರು ಈ ಕೇಶವಿನ್ಯಾಸ ಹೊಸ ಹೊಸ ಹೊಳಹುಗಳನ್ನು ನೀಡಿ ಹೋಗಿದ್ದಾರೆ. ಇಂದಿಗೂ ಕಾಲಕ್ಕೆ ತಕ್ಕಂತೆ ಬದಲಾಗುತ್ತ, ಎಲ್ಲಾ ಕಾಲದ ವನಿತೆಯರನ್ನೂ ತನ್ನ ಲೋಕಕ್ಕೆ ಸೇರಿಸಿಕೊಳ್ಳುತ್ತಿರುವ ಬನ್ ಕೇಶವಿನ್ಯಾಸಕ್ಕೆ ಮನಸೋಲದವರೇ ಇಲ್ಲ.

ಬನ್ ಕೇಶವಿನ್ಯಾಸದ ಬಗ್ಗೆ ಮಾತನಾಡುವಾಗ ಈ ಬಗೆಯ ಹೇರ್‌ಸ್ಟೈಲ್‌ನಲ್ಲಿ ಕಂಗೊಳಿಸಿದ ಈಗಿನ ಬಾಲಿವುಡ್ ಬೆಡಗಿಯರ ಬಗೆಗೂ ಹೇಳಲೇಬೇಕು. ಕಾಜೋಲ್, ಮಾಧುರಿ ದಿಕ್ಷೀತ್, ಪ್ರಿಯಾಂಕಾ ಚೋಪ್ರಾ, ದೀಪಿಕಾ ಪಡುಕೋಣೆ ಒಂದಿಲ್ಲ ಒಂದು ಸಂದರ್ಭಗಳಲ್ಲಿ ಸಾಂಪ್ರದಾಯಿಕ ದಿರಿಸಿನೊಂದಿಗೆ ಬನ್ ಕೇಶವಿನ್ಯಾಸದಲ್ಲಿ ಕಾಣಿಸಿಕೊಂಡಿದ್ದನ್ನು ಗಮನಿಸಬಹುದು.

ಕಾರ್ಯಕ್ರಮವೊಂದರಲ್ಲಿ ಸರಳವಾದ ಬನ್ ಕೇಶವಿನ್ಯಾಸಕ್ಕೆ ಮಲ್ಲಿಗೆ ಮೊಗ್ಗು ಮುಡಿದು, ನೇರಳೆ ಬಣ್ಣದ ರೇಷ್ಮೆ ಸೀರೆಯಲ್ಲಿ ಕಾಣಿಸಿಕೊಂಡ ಶ್ರದ್ಧಾ ಕಪೂರ್ ಎಲ್ಲರ ಗಮನ ಸೆಳೆದಿದ್ದರು. ತಾಪ್ಸಿ ಪನ್ನು ಸಹ ಒಂದು ಸಂದರ್ಭದಲ್ಲಿ ಲ್ಯಾವೆಂಡರ್ ಸೀರೆಗೆ ಪಫ್ಡಿ ನೆಟ್ ಸ್ಲೀವ್ಸ್ ರವಿಕೆಯುಟ್ಟು, ಸಿಂಪಲ್ ಬನ್ ಹೇರ್‌ಸ್ಟೈಲ್‌ನಲ್ಲಿ ಗಮನ ಸೆಳೆದಿದ್ದರು. ದೀಪಿಕಾ ಪಡುಕೋಣೆ ತಮ್ಮ ಪಾಶ್ಚಿಮಾತ್ಯ ಶೈಲಿಯ ಔಟ್‌ಫಿಟ್‌ನಲ್ಲಿಯೂ ಹೈ ಬನ್ ಕೇಶವಿನ್ಯಾಸದ ಮೊರೆ ಹೋಗುವುದುಂಟು. ಬಿಪಾಶಾ ಬಸು, ಸೋನಂ ಕಪೂರ್, ಕೀರ್ತಿ ಸನಾನ್ ಕಾಕ್‌ಟೈಲ್ ಅಥವಾ ರಿಸೆಪ್ಶನ್‌ನಂತಹ ಪಾರ್ಟಿಗಳಲ್ಲಿ ತಮ್ಮ ಗೌನ್, ಸೂಟ್, ಮ್ಯಾಕ್ಸಿಯಂಥ ದಿರಿಸಿನ ಜತೆಗೂ ಸರಳವಾದ ಲೋ ಬನ್ ಹೇರ್‌ಸ್ಟೈಲ್‌ನಲ್ಲಿ ಕಾಣಿಸಿಕೊಂಡಿದ್ದುಂಟು. ನಿಶ್ಚಿತಾರ್ಥ, ಮೆಹೆಂದಿ, ಸಂಗೀತ ಸಂಜೆ, ಆರತಕ್ಷತೆ ಪಾರ್ಟಿಯವರೆಗೆ ಅಂದದ ಬನ್ ಕೇಶವಿನ್ಯಾಸ ಹೊಂದಲಿದೆ ಎನ್ನುತ್ತಾರೆ ಮೇಕಪ್ ಕಲಾವಿದರು.

ವಿವಿಧ ಬಗೆಯ ಕಿರೀಟ, ಚೈನ್, ಹೂವು, ಆಭರಣಗಳಿಂದ ಅಲಂಕೃತಗೊಂಡು ಕಾಲ ಎಷ್ಟೇ ಮುಂದಕ್ಕೋಡಿದರೂ ತನ್ನ ಮೀರಿಸುವವರು ಯಾರಿಲ್ಲ ಎನ್ನುವಂತೆ ಅಗ್ರ ಹೇರ್‌ಸ್ಟೈಲ್ ಪಟ್ಟಿಯಲ್ಲಿ ಇದು ಉಳಿದುಕೊಂಡಿದೆ. ಸಾಂಪ್ರದಾಯಿಕ ಸೀರೆಯೇ ಆಗಲಿ, ಇಂಡೋ–ವೆಸ್ಟರ್ನ್ ಲೆಹೆಂಗಾ ಆಗಿರಲಿ, ಎರಡಕ್ಕೂ ಒಪ್ಪುವುದು ಬನ್ ಹೇರ್‌ಸ್ಟೈಲ್. ನಂಬರ್ ಒನ್ ವೆಡ್ಡಿಂಗ್ ಪ್ಲಾನರ್ ವೆಬ್‌ಸೈಟ್ ಆಗಿರುವ ‘ವೆಡ್ಡಿಂಗ್ ಬಜಾರ್’ನ ಹೇರ್‌ಸ್ಟೈಲ್ ಪಟ್ಟಿಯಲ್ಲಿಯೂ ಇದಕ್ಕೆ ಮೊದಲ ಸ್ಥಾನವಿದೆ.

ಎರಡೂ ಕಡೆ ಜಡೆಗಳನ್ನು ಹೆಣೆದು, ಅದನ್ನು ಹಿಂದಕ್ಕೆ ಎಳೆದು ಒಂದು ಬನ್ ಕಟ್ಟಿ ಅದಕ್ಕೆ ಆಕರ್ಷಕ ಚಿಕ್ಕಚಿಕ್ಕ ತಿಳಿಗುಲಾಬಿ ಬಣ್ಣದ ಗುಲಾಬಿ ಹೂವುಗಳಿಂದ ಸಿಂಗರಿಸಬಹುದು. ಒಂದೇ ಬದಿಗೆ ಜಡೆ ಹೆಣೆದು ಅದನ್ನು ಇನ್ನೊಂದು ಬದಿಗೆ ಎಳೆದು ಬನ್ ಕಟ್ಟಬಹುದು. ಇದನ್ನು ಚಿಕ್ಕ ಚಿಕ್ಕ ಬೀಡ್ಸ್‌ಗಳಿಂದ ಅಲಂಕರಿಸಬಹುದು. ಇನ್ನು ಚಿಕ್ಕ ಚಿಕ್ಕ ಹೆರಳುಗಳನ್ನು ಹೆಣೆದು ಬನ್ ಕಟ್ಟುವ ಟ್ವಿಸ್ಟೆಡ್ ಬನ್ ಹೇರ್‌ಸ್ಟೈಲ್‌ಗೆ ಯಾವುದೇ ಅಲಂಕಾರಿಕ ವಸ್ತುಗಳನ್ನು ಬಳಸುವ ಅಗತ್ಯವಿಲ್ಲ. ಸಣ್ಣ ಸಣ್ಣ ಜಡೆಗಳಿಂದ ಹೆಣೆಯಲ್ಪಟ್ಟ ಬನ್‌ಗೆ ಮುತ್ತು ಅಥವಾ ಹರಳುಗಳಿಂದ ಅಲಂಕರಿಸಬಹುದು.

ದಟ್ಟವಾದ ಕೇಶರಾಶಿಯನ್ನು ಹೊಂದಿರುವವರು ಮೆಸ್ಸಿ ಬನ್ ಹೇರ್‌ಸ್ಟೈಲ್ ಪ್ರಯತ್ನಿಸಬಹುದು. ಆದರೆ, ಇದಕ್ಕೆ ಅದ್ದೂರಿಯಾದ ಅಲಂಕಾರ ಬೇಡ. ಮೆಸ್ಸಿ ಬನ್ ಸರಳವಾಗಿದ್ದಷ್ಟೂ ಚಂದ. ಹಾಗೆಯೇ ಬೊಕೆ ಬನ್ ಹೇರ್‌ಸ್ಟೈಲ್ ಕಡಿಮೆ ಅಥವಾ ತೆಳುವಾದ ಕೇಶರಾಶಿಯವರಿಗೆ ಸೂಕ್ತ. ಹೆಸರೇ ಹೇಳುವಂತೆ ಬೊಕೆ ಬನ್‌ಗೆ ಆಕರ್ಷಕ ಹೂವುಗಳಿಂದ ಅಲಂಕರಿಸಿ ಬೊಕೆಯ ಹಾಗೆಯೇ ಕಂಗೊಳಿಸುವಂತೆ ಮಾಡಲಾಗುತ್ತದೆ.

ಬನ್ ಹೇರ್‌ಸ್ಟೈಲ್... ಅದೇ ತುರುಬು... ಎಂದು ಎಂದೂ ಮೂಗು ಮುರಿಯದಿರಿ. ಕಳೆದ ಹತ್ತಾರು ದಶಕಗಳಿಂದ ತನ್ನದೇ ಆದ ಛಾಪು ಉಳಿಸಿಕೊಂಡು ಬಂದಿರುವ ಬನ್, ಮುಂದೆಯೂ ಮದುವೆ ಸಿಂಗಾರದಲ್ಲಿ ತಾನೇ ಹೆಚ್ಚು ಎಂದು ನಿಲ್ಲುವುದರಲ್ಲಿ ಅನುಮಾನವಿಲ್ಲ. ❖

ಜ.18ರಿಂದ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ವತಿಯಿಂದ ನಗರದ ಮುರುಘರಾಜೇಂದ್ರ ಮಠದ ಅನುಭವ ಮಂಟಪದಲ್ಲಿ ಜ.18, 19ರಂದು ಅಖಿಲ ಭಾರತ 13ನೇ ಶರಣ ಸಾಹಿತ್ಯ ಸಮ್ಮೇಳನ ನಡೆಯಲಿದೆ' ಎಂದು ಪರಿಷತ್ ಅಧ್ಯಕ್ಷ ಸಿ.ಸೋಮಶೇಖರ್ ತಿಳಿಸಿದರು.

'ಬಸವಕಲ್ಯಾಣ, ಬಸವ ಮಹಾಮನೆಯ ಬೆಲ್ದಾಳ ಸಿದ್ದರಾಮ ಶರಣರ ಸರ್ವಾಧ್ಯಕ್ಷತೆಯಲ್ಲಿ ಸಮ್ಮೇಳನ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಪರಿಷತ್ ಗೌರವಾಧ್ಯಕ್ಷರಾದ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತೋಂಟದಾರ್ಯ ಮಠದ ತೋಂಟದ ಸಿದ್ದರಾಮ ಸ್ವಾಮೀಜಿ ನೇತೃತ್ವ ವಹಿಸಲಿದ್ದಾರೆ' ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.



ಸಿದ್ದರಾಮ ಶರಣ

'2014ರ ನಂತರ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ ನಡೆದಿಲ್ಲ. 10 ವರ್ಷ ಸಮ್ಮೇಳನ ನಡೆಯದಿದ್ದರೂ ಪರಿಷತ್ ಹಳ್ಳಿಹಳ್ಳಿಗಳಲ್ಲಿ ವಿವಿಧ ಕಾರ್ಯಕ್ರಮ ಆಯೋಜನೆ ಮಾಡಿ ಶರಣ ಸಾಹಿತ್ಯವನ್ನು ಪಸರಿಸುವ ಕೆಲಸ ಮಾಡಿದೆ. ಈ ಬಾರಿ ಕೋಟೆ ನಗರಿಯಲ್ಲಿ ಅರ್ಥಪೂರ್ಣವಾಗಿ ಸಮ್ಮೇಳನ ನಡೆಸಲಾಗುತ್ತಿದ್ದು ಮುರುಘಾ ಮಠದ ಸಹಕಾರ ಇರಲಿದೆ' ಎಂದರು.

'ಸಾಂಸ್ಕೃತಿಕ ನಾಯಕ ಬಸವಣ್ಣ, ಮಹಿಳಾ ಸಂವೇದನೆ, ಶರಣ ಸಾಹಿತ್ಯದತ್ತ ಯುವಜನ, ಶರಣರ ವೈಚಾರಿಕ ಪ್ರಜ್ಞೆ ಮುಂತಾದ ಗೋಷ್ಠಿಗಳನ್ನು ಆಯೋಜಿಸಲಾಗುವುದು. ಬಹಿರಂಗ ಅಧಿವೇಶನ, ಪ್ರಾತಃಸ್ಮರಣೀಯ ಶಿವಶರಣರ ಪುಸ್ತಕ ಪ್ರಕಟಣೆ, ಸಾಧಕರಿಗೆ ಸನ್ಮಾನ ಕಾರ್ಯಕ್ರಮಗಳೂ ಸಮ್ಮೇಳನದಲ್ಲಿ ನಡೆಯಲಿವೆ' ಎಂದರು.

'ರಾಜ್ಯ, ಹೊರರಾಜ್ಯಗಳಿಂದ 30,000ಕ್ಕೂ ಹೆಚ್ಚು ಜನ ಶರಣ– ಶರಣೆಯರು, ಸಾಧು ಸಂತರು, ಜನಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರಸಾದ ವ್ಯವಸ್ಥೆ ಮಾಡಲಾಗುವುದು' ಎಂದು ಎಸ್‌ಜೆಎಂ ವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯ ಬಸವಕುಮಾರ ಸ್ವಾಮೀಜಿ ಹೇಳಿದರು.

ಇನ್ನಿಬ್ಬರು ಅಯ್ಯಪ್ಪ ಮಾಲಾಧಾರಿಗಳ ಸಾವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ತೀವ್ರ ಗಾಯಗೊಂಡು ಇಲ್ಲಿನ ಕೆಎಂಸಿ–ಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಒಂಬತ್ತು ಅಯ್ಯಪ್ಪ ಮಾಲಾಧಾರಿಗಳಲ್ಲಿ ಶುಕ್ರವಾರ ಇನ್ನಿಬ್ಬರು ಮೃತಪಟ್ಟಿದ್ದಾರೆ. ಈವರೆಗೆ ನಾಲ್ವರು ಸಾವನ್ನಪ್ಪಿದ್ದಾರೆ.

'ಸುಭಾನಿನಗರದ ರಾಜು ಮುಗೇರಿ (16) ಮತ್ತು ಸಾಯಿನಗರದ ಲಿಂಗರಾಜ ಬಿರನೂರ(19) ಮೃತರು. ಆಸ್ಪತ್ರೆಯಲ್ಲಿ ಸದ್ಯಕ್ಕೆ ವಿನಾಯಕ (12) ಚೇತರಿಸಿಕೊಳ್ಳುತ್ತಿದ್ದು, ಇನ್ನೂ ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ. ಎಲ್ಲರಿಗೂ ಅಗತ್ಯ ಚಿಕಿತ್ಸೆ ಮುಂದುವರಿದಿದೆ' ಎಂದು ಆಸ್ಪತ್ರೆಯ ನಿರ್ದೇಶಕ ಡಾ. ಎಸ್.ಎಫ್. ಕಮ್ಮಾರ್ ತಿಳಿಸಿದರು.

ವಿಮೆ ಹಣದಾಸೆಗೆ ತಂದೆಯನ್ನೇ ಕೊಂದ ಮಗ

ಪ್ರಜಾವಾಣಿ ವಾರ್ತೆ

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): ಜೀವವಿಮೆಯ ಹಣ ಪಡೆಯಲು, ತಂದೆಯನ್ನೇ ಕೊಲೆ ಮಾಡಿದ ಆರೋಪದ ಮೇರೆಗೆ ಮಗನನ್ನು ಪೊಲೀಸರು ಶುಕ್ರವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.



ಅಣ್ಣಪ್ಪ

ಪಾಂಡು

ತಾಲ್ಲೂಕಿನ ಕೊಪ್ಪ ಗ್ರಾಮದ ಡೋಂಗ್ರಿ ಗೇರಾಸಿ ಕಾಲೊನಿ ನಿವಾಸಿ ಅಣ್ಣಪ್ಪ (55) ಕೊಲೆಯಾದವರು. ಅವರ ಪುತ್ರ ಪಾಂಡು ಆರೋಪಿ.

'ಡಿ.25ರಂದು ಆರೋಪಿಯು ಕರೆ ಮಾಡಿ, ತಂದೆಗೆ ವಾಹನ ಡಿಕ್ಕಿಯಾಗಿ ಮೃತಪಟ್ಟಿದ್ದಾರೆ ಎಂದು ತಿಳಿಸಿದ್ದ. ಸ್ಥಳಕ್ಕೆ ತೆರಳಿದಾಗ ಬೈಲಕುಪ್ಪೆ ಸಮೀಪದ ಗುಳ್ಳೆದಳ್ಳ ಅರಣ್ಯ ಪ್ರದೇಶ ಪಕ್ಕದ ರಸ್ತೆಯಲ್ಲಿ ಮೃತದೇಹ ಪತ್ತೆಯಾಗಿತ್ತು. ಪ್ರಕರಣ ದಾಖಲಿಸಿಕೊಂಡು, ಮರಣೋತ್ತರ ಪರೀಕ್ಷೆ ನಡೆಸಿದಾಗ ಕೊಲೆ ಎಂದು ಗೊತ್ತಾಯಿತು. ಅನುಮಾನಾಸ್ಪದವಾಗಿ ವರ್ತಿಸುತ್ತಿದ್ದ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡ' ಎಂದು ಬೈಲುಕುಪ್ಪೆ ಠಾಣೆಯ ಪೊಲೀಸರು ತಿಳಿಸಿದರು.

'ತಂದೆಯ ಹೆಸರಿನಲ್ಲಿ ಎಲ್‌ಐಸಿಯಲ್ಲಿ ₹30 ಲಕ್ಷ ಪಾಲಿಸಿ ಮಾಡಿಸಿದ್ದೆ. ಅವರು ಮೃತಪಟ್ಟರೆ ಹಣ ಬರುತ್ತದೆಂಬ ಆಸೆಯಿಂದ, ಹೊಲಕ್ಕೆ ಕರೆದೊಯ್ದು ಕೋಲಿನಿಂದ ತಲೆಗೆ ಹೊಡೆದೆ ಎಂದು ಆರೋಪಿ ತಿಳಿಸಿದ್ದಾನೆ' ಎಂದು ಮಾಹಿತಿ ನೀಡಿದರು.

ಸುಧಾ, ಮಯೂರ ಓದಿರಿ

ಕರ್ನಾಟಕ ಸರಕಾರ

ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ – 581 301

DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301

ದೂರವಾಣಿ: 08382 221170 Email: ka.uttarakannada.dudc@gmail.com

No: UK/DUDC/AmrutNagarothanaPhase-4/CR/2024-25 Dated: 24-12-2024

ಟೆಂಡರು ಪ್ರಕಟಣೆ

ಕೆಟಿಪಿಪಿ ಕಾಯ್ದೆ 1999 ನಿಯಮ 2000 ರಂತೆ, ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕಾರವಾರರವರು ಅಮೃತ ನಗರೋತ್ಥಾನ ಹಂತ–4 ಯೋಜನೆಯಡಿ ಈ ಕೆಳಗೆ ವಿವರಿಸಿದ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **KPWD** ಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರು ಎಲ್ಲಾ ದಾಖಲಾತಿಗಳೊಂದಿಗೆ **KPPP** ಪೋರ್ಟಲ್ **(http:/kppp.karnataka.gov.in)** ಮೂಲಕ ತಮ್ಮ ದರವನ್ನು ಸಲ್ಲಿಸಬಹುದಾಗಿದೆ. ಟೆಂಡರ್ ವಿವರ ಹಾಗೂ ವೇಳಾ ಪಟ್ಟಿ ಈ ಕೆಳಗಿನಂತಿರುತ್ತದೆ.

ಟೆಂಡರ್‌ನ್ನು ಸಲ್ಲಿಸಲು ಪ್ರಾರಂಭದ **ದಿನಾಂಕ: 24–12–2024 ಸಮಯ 16.00 ಗಂಟೆ** (1) ಗುತ್ತಿಗೆದಾರರೊಂದಿಗೆ ಪೂರ್ವಭಾವಿ ಸಭೆ/ಸ್ಪಷ್ಟೀಕರಣ **ದಿನಾಂಕ: 03–01–2025 ಸಮಯ 11.00 ಗಂಟೆ** ಜಿಲ್ಲಾ ನಗರಾಭಿವೃದ್ಧಿ ಕೋಶ ಕಚೇರಿ ಮಾಡುವುದು (2) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 10–01–2025 ಸಮಯ 17.00 ಗಂಟೆ** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 13–01–2025 ಸಮಯ 17.30 ಗಂಟೆ** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 15–01–2025 ಸಮಯ 16.00 ಗಂಟೆ.**

ನಗರ ಸ್ಥಳೀಯ ಸಂಸ್ಥೆ ಹೆಸರು	ಇಂಡೆಂಟ್ ನಂ ಹಾಗೂ ಮೀಸಲಾತಿ
ನಗರಸಭೆ ಶಿರಸಿ	Indent No.DMA/2024-25/BD/ WORK_INDENT 32128/ Call-2
ಪುರಸಭೆ ಅಂಕೋಲಾ	Indent No. DMA/2024-25/RD/WORK_INDENT 33393
ನಗರಸಭೆ ದಾಂಡೇಲಿ	Indent No. DMA/2024-25/WS/ WORK_INDENT33366
	Indent No.DMA/2024-25/BD/ WORK_INDENT 32507
ಪುರಸಭೆ ಹಳಿಯಾಳ	Indent No. DMA/2024-25/ OW/ WORK_INDENT27820/ Call-3

ಟೆಂಡರ್ ಕುರಿತು ಹೆಚ್ಚಿನ ಮಾಹಿತಿಗಾಗಿ **http:/kppp.karnataka.gov.in. &**
http://www.uttarakannadadudc.mrc.gov.in/ ಅಥವಾ ಈ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ

DIPR/ADK/MCA/673/24-25 dt. 26.12.2024

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಯಿಂದ ದ್ವಿ–ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560 009.

ಕ್ರ ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
	ಐಎಫ್‌ಟಿ ಸಂ: ಬೆಂಜಮಂ/ಮುಅ(ಪೂ)/ಅಮುಅ(ಪೂ) /ಉಮುಅ(ನಿ)–I/ತಾಂಸ(ಪೂ)/9809/2024–25	ದಿನಾಂಕ: 26.12.2024
1.	ಸಕಾನಿಅ (ಪೂ–2–2) ಉಪ ವಿಭಾಗದ ಓಎಂಬಿಆರ್ ಸೇವಾಠಾಣೆಗೆ ಸಂಬಂಧಿಸಿದ ಓಎಂಬಿಆರ್ ಬಡಾವಣೆಯಲ್ಲಿ ಬಿಎಸ್‌ಎನ್‌ಎಲ್ ಕಚೇರಿಯಿಂದ 3ನೇ ಮುಖ್ಯರಸ್ತೆಯವರೆಗೆ ಜಿಎಲ್‌ಆರ್ ತನಕ 300ಮಿಮೀ ವ್ಯಾಸದ ಎಂಎಸ್ ನೀರಿನ ಕೊಳವೆಮಾರ್ಗಗಳನ್ನು ಒದಗಿಸುವುದು ಮತ್ತು ಅಳವಡಿಸುವುದು. **(2ನೇ ಕರೆ) ಇಂಡೆಂಟ್ ಸಂ:1804**	₹ 215.02 ಲಕ್ಷಗಳು / ₹ 3,23,000/-
2.	ಸಕಾನಿಅ (ಪೂ–2–2) ಉಪ ವಿಭಾಗದ ಓಎಂಬಿಆರ್ ಸೇವಾಠಾಣೆಗೆ ಸಂಬಂಧಿಸಿದ ಎನ್‌ಜಿಇಎಫ್ ಬಡಾವಣೆ ಪೂರ್ವ ಕಸ್ತೂರಿನಗರದಲ್ಲಿ 2ನೇ ಮುಖ್ಯರಸ್ತೆ ನಂದಗೋಕುಲ ಹೋಟೆಲ್‌ನಿಂದ ಬೃ.ಬೆಂ.ಮ.ಪಾಲಿಕೆ ಕಚೇರಿವರೆಗೆ 300ಮಿಮೀ ವ್ಯಾಸದ ಎಂಎಸ್ ನೀರಿನ ಕೊಳವೆಮಾರ್ಗಗಳನ್ನು ಒದಗಿಸುವುದು ಮತ್ತು ಅಳವಡಿಸುವುದು. **(2ನೇ ಕರೆ) ಇಂಡೆಂಟ್ ಸಂ:1790**	₹ 216.10 ಲಕ್ಷಗಳು / ₹ 3,25,000/-
3.	ಸಕಾನಿಅ (ದಪೂ–5) ಉಪ ವಿಭಾಗದ ಕೋರಮಂಗಲ–1 ಸೇವಾಠಾಣೆಯಡಿಯಲ್ಲಿ ಬರುವ ಕೋರಮಂಗಲ 7ನೇ ಬ್ಲಾಕ್‌ನಲ್ಲಿ 150ಮಿಮೀ ವ್ಯಾಸ ಮತ್ತು 100ಮಿಮೀ ವ್ಯಾಸದ ಡಿಐ ನೀರು ಸರಬರಾಜು ಕೊಳವೆಮಾರ್ಗಗಳನ್ನು ಒದಗಿಸುವುದು ಮತ್ತು ಅಳವಡಿಸುವುದು. **(3ನೇ ಕರೆ) ಇಂಡೆಂಟ್ ಸಂ:1398**	₹ 157.60 ಲಕ್ಷಗಳು / ₹ 2,36,000/-
4.	ಸಕಾನಿಅ (ದಪೂ–1) ಉಪ ವಿಭಾಗದ ಜಾನ್ಸನ್ ಮಾರುಕಟ್ಟೆ ಸೇವಾಠಾಣೆಯಡಿಯಲ್ಲಿ ಬರುವ ನೀಲಸಂದ್ರ ಪ್ರದೇಶದ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಪ್ರಸ್ತುತವಿರುವ ಒಳಚರಂಡಿ ಮಾರ್ಗಕ್ಕೆ 300ಮಿಮೀ ವ್ಯಾಸದ ಆರ್‌ಸಿಸಿ ಮಾರ್ಗ ಎನ್‌ಪಿ3 ದರ್ಜೆ ಮತ್ತು 230ಮಿಮೀ ವ್ಯಾಸದ ಒಳಚರಂಡಿ ಮತ್ತು 300ಮಿಮೀ ವ್ಯಾಸದ ಡಿಡಬ್ಲ್ಯೂಸಿ ಕೊಳವೆಯನ್ನು ಒದಗಿಸುವುದು, ಅಳವಡಿಸುವುದು ಮತ್ತು ಉನ್ನತೀಕರಿಸುವುದು **(3ನೇ ಕರೆ) ಇಂಡೆಂಟ್ ಸಂ:1673**	₹ 229.68 ಲಕ್ಷಗಳು / ₹ 3,45,000/-
5.	ಸಕಾನಿಅ (ದಪೂ–1) ಉಪ ವಿಭಾಗದ ಜಾನ್ಸನ್ ಮಾರುಕಟ್ಟೆ ಸೇವಾಠಾಣೆಯಡಿಯಲ್ಲಿ ಬರುವ ಆನೇಪಾಳ್ಯ ಪ್ರದೇಶದ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಪ್ರಸ್ತುತವಿರುವ ಒಳಚರಂಡಿ ಮಾರ್ಗಕ್ಕೆ 300ಮಿಮೀ ವ್ಯಾಸದ ಆರ್‌ಸಿಸಿ ಮಾರ್ಗ ಎನ್‌ಪಿ3 ದರ್ಜೆ ಮತ್ತು 230ಮಿಮೀ ವ್ಯಾಸದ ಒಳಚರಂಡಿ ಮತ್ತು 300ಮಿಮೀ ವ್ಯಾಸದ ಡಿಡಬ್ಲ್ಯೂಸಿ ಕೊಳವೆಯನ್ನು ಒದಗಿಸುವುದು, ಅಳವಡಿಸುವುದು ಮತ್ತು ಉನ್ನತೀಕರಿಸುವುದು **(3ನೇ ಕರೆ) ಇಂಡೆಂಟ್ ಸಂ:1674**	₹ 175.17 ಲಕ್ಷಗಳು / ₹ 2,63,000/-

ಈ ಮೇಲ್ಕಂಡ ಕಾಮಗಾರಿಗಳಿಗೆ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸುವ ದಿನಾಂಕ **10.01.2025**ರ ಸಂಜೆ **4:00** ಗಂಟೆಯವರೆಗೆ. ಟೆಂಡರ್‌ಗಳನ್ನು ದಿನಾಂಕ **13.01.2025**ರ ಸಂಜೆ **4:00** ಗಂಟೆಯ ನಂತರ ತೆರೆಯಲಾಗುವುದು.

ಸಹಿ/– ಮುಖ್ಯ ಅಭಿಯಂತರರು (ಪೂರ್ವ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲೆ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಡಿ.ಐ.ಪಿ.ಆರ್/ಎಸ್‌ಐ/3989/2024–25

ಸಾರ್ವಜನಿಕ ಪ್ರಕಟಣೆ

ಈ **ಪ್ರಕಟಣೆಯ** ಮೂಲಕ ತಿಳಿಸುವುದು ಏನೆಂದರೆ, ಕೆಳಗಿನ ಷೆಡ್ಯೂಲ್‌ನಲ್ಲಿ ಸಂಪೂರ್ಣವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ **"ಷೆಡ್ಯೂಲ್ ಪ್ರಾಪರ್ಟಿ"** ಎನ್ನಲಾಗುವ, ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರ 2 ಹೋಬಳಿ, ಚಿಕ್ಕಕನ್ನೆಲ್ಲಿ ಗ್ರಾಮದಲ್ಲಿ ಸ್ಥಿತಗೊಂಡಿರುವ, ಹಿಂದಿನ ಸರ್ವೆ ನಂ. 31/1 ರ ಭಾಗವಾಗಿರುವ, ಒಟ್ಟಾರೆ ಸುಮಾರು 1,10,260.99 ಚದರ ಅಡಿ ವಿಸ್ತೀರ್ಣವುಳ್ಳ, ವಾಣಿಜ್ಯ ಬಳಕೆ ಉದ್ದೇಶಕ್ಕೆ ಪರಿವರ್ತನೆ ಆಗಿರುವ ಸ್ವತ್ತನ್ನು ಖರೀದಿಸಲು ನಮ್ಮ ಕಕ್ಷಿದಾರರು ಉದ್ದೇಶಿಸಿರುತ್ತಾರೆ.

ಸದರಿ ಷೆಡ್ಯೂಲ್ ಪ್ರಾಪರ್ಟಿ ಅಥವಾ ಅದರ ಯಾವುದೇ ಭಾಗದ ಮೇಲೆ, ಯಾವುದೇ ವ್ಯಕ್ತಿಗೆ ಈಸ್‌ಮೆಂಟ್, ಫಲಾನುಭವಿ ಹಿತಾಸಕ್ತಿ ಅಥವಾ ಪ್ರಿಯಾಂಪ್ಷನ್ ಅಥವಾ ಯಾವುದೇ ಒಪ್ಪಂದ ಅಥವಾ ಇನ್ನಿತರೆ ಡಿಸ್ಪೊಸಿಷನ್ ಅಡಿಯಲ್ಲಿ ಅಥವಾ ಯಾವುದೇ ತಗಾದೆ ಅಥವಾ ನ್ಯಾಯಾಲಯ ಅಥವಾ ತೀರ್ಪು ಪ್ರಾಧಿಕಾರ ನೀಡಿರುವ ಅವಾರ್ಡ್, ಲಿಸ್ಪೆಂಡೆನ್ಸ್, ಪವರ್ ಆಫ್ ಅಟಾರ್ನಿ, ಬಿಕ್ವೆಸ್ಟ್, ಎಫ್‌ಎಸ್‌ಐ, ಅಭಿವೃದ್ಧಿ ಹಕ್ಕುಗಳು, ಪಾಲುದಾರಿಕೆ, ಕುಟುಂಬ ವ್ಯವಸ್ಥೆ ಅಥವಾ ಇತ್ಯರ್ಥ ಅಥವಾ ಇನ್ನಿತರೆ ಯಾವುದೇ ಋಣಭಾರ (**"ಕ್ಲೇಮ್"**) ರೀತಿಯಲ್ಲಿ ಯಾವುದೇ ಸ್ವರೂಪದ ಕ್ಲೇಮ್, ಹಕ್ಕು, ಅಧಿಕಾರ ಅಥವಾ ಹಿತಾಸಕ್ತಿ ಹೊಂದಿದ್ದರೆ, ಅಂತಹವರು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 15 (ಹದಿನೈದು) ದಿನಗಳೊಳಗೆ, ಕೆಳಕಂಡ ಸಹಿದಾರರಿಗೆ ದಾಖಲಾತಿ ಪುರಾವೆಗಳ ಸಮೇತ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬೇಕು, ಇಲ್ಲವಾದಲ್ಲಿ, ಅಂತಹ ಯಾವುದೇ ಕ್ಲೇಮ್‌ಗಳು ಲಭ್ಯವಿರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ ಮತ್ತು ಒಂದು ವೇಳೆ ಕ್ಲೇಮ್‌ಗಳಿದ್ದರೂ ಕೂಡ, ಕ್ಲೇಮುದಾರರ ಅಂತಹ ಕ್ಲೇಮ್ ಹಕ್ಕನ್ನು ಕಳೆದುಕೊಳ್ಳುತ್ತಾರೆ ಮತ್ತು/ಅಥವಾ ಅಂತಹ ಕ್ಲೇಮ್ ಚಲಾಯಿಸುವ ಹಕ್ಕನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಜಮೀನು ಮಾಲೀಕರ ಹೆಸರು	ಖಾತಾ ನಂ.	ಇ ಖಾತಾ ನಂ.	ವಿಸ್ತಾರ (ಚದರ ಅಡಿಗಳಲ್ಲಿ)	ಗಡಿಗಳು: ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
1.	ಮೆ॥ ಪೂಜಾ ಮಾರ್ಬಲ್ಸ್	4/31/1	150200402300200003	43,560	ಶ್ರೀ ಪ್ರಕಾಶ್ ಚಂದ್ರ ರಾಠಿ ಅವರಿಗೆ ಸೇರಿದ ಆಸ್ತಿ	ಕಲಾಧರ್ ಗ್ರಾನೈಟ್ಸ್‌ಗೆ ಸೇರಿದ ಜಮೀನು/ ದಿನೇಶ್ ಕುಮಾರ್ ಎಂ.ಎಸ್.	ಬೆಂಗಳೂರು – ಸರ್ಜಾಪುರ ರಸ್ತೆ	ಕಾನ್ಫಿಡೆಂಟ್ ಲಿಯೋನ ಅಪಾರ್ಟ್‌ಮೆಂಟ್
2.	ಮೆ॥ ಪೂಜಾ ಮಾರ್ಬಲ್ಸ್	4/31/1	150200402300200004	8,712				
3.	ಶ್ರೀ ಮಧುಗಿರಿ ಶಾಮಸುಂದರ್ ದಿನೇಶ್ ಕುಮಾರ್	7/31/1	150200402300200007	43,559.97	ಪೂಜಾ ಮಾರ್ಬಲ್ಸ್ / ಮಹಾಬೀರ್ ಮಾರ್ಬಲ್ಸ್‌ಗೆ ಸೇರಿದ ಭೂಮಿ	ಕಾನ್ಫಿಡೆಂಟ್ ಲಿಯೋನ ಅಪಾರ್ಟ್‌ಮೆಂಟ್	ಬೆಂಗಳೂರು – ಸರ್ಜಾಪುರ ರಸ್ತೆ	ಕಾನ್ಫಿಡೆಂಟ್ ಲಿಯೋನ ಅಪಾರ್ಟ್‌ಮೆಂಟ್
4.	ಶ್ರೀ ಪ್ರಕಾಶ್ ಚಂದ್ರ ರಾಠಿ	100/31 /1	150200402300222040	14,429.02	ಮನ ಬಿಲ್ಡರ್ಸ್ ಯೋಜನೆ	ಪೂಜಾ ಮಾರ್ಬಲ್ಸ್ / ಮಹಾಬೀರ್ ಮಾರ್ಬಲ್ಸ್‌ಗೆ ಸೇರಿದ ಭೂಮಿ	ಬೆಂಗಳೂರು – ಸರ್ಜಾಪುರ ರಸ್ತೆ	ಮನ ಬಿಲ್ಡರ್ಸ್ ಯೋಜನೆ

ದಿನಾಂಕ: 28.12.2024
ಸ್ಥಳ: ಬೆಂಗಳೂರು

ಸುದೀರ್ ಹೆಚ್ ಮದಮ್ಮೆಯ
ಪಾಲುದಾರರು
ಖೇತಾನ್ & ಕೋ. ಎಲ್‌ಎಲ್‌ಪಿ
ಎಂಬೆಸ್ಸಿ ಕ್ವೆಸ್ಟ್, 3ನೇ ಮಹಡಿ, 45/1, ಮ್ಯಾಗ್ರಾಥ್ ರೋಡ್, ಬೆಂಗಳೂರು – 560 025, ಫೋನ್: +91 80 4339 7000

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು–1 ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052.

ಸಂಖ್ಯೆ: ಉಪ್ರವ್ಯ–1/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/10/2024–25 ದಿನಾಂಕ: 26.12.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕರು–1, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ ನಿಯಮಿತವು ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು ಇವರ ಪರವಾಗಿ ಅರ್ಹ ಬಿಡ್‌ದಾರರಿಂದ ಸೇವೆಗಳಿಗೆ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಅಲ್ಪಾವಧಿ ಟೆಂಡರ್‌ನ ವಿವರಗಳು ಕೆಳಕಂಡಂತಿವೆ.

ಕ್ರಮ ಸಂಖ್ಯೆ	ಸೇವೆಯ ಹೆಸರು	ಪ್ರತಿ ವರ್ಷಕ್ಕೆ ಬಿಡ್‌ಗಿಟ್ಟಿರುವ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) (ಜಿಎಸ್‌ಟಿ ಹೊರತುಪಡಿಸಿ)
1.	ಘನತ್ಯಾಜ್ಯ ನಿರ್ವಹಣೆ ಚಟುವಟಿಕೆಗಳ ಮೇಲ್ವಿಚಾರಣೆಗಾಗಿ ಮಾರ್ಷಲ್ಸ್ & ಮಾರ್ಷಲ್ ಮೇಲ್ವಿಚಾರಕರ ಸೇವೆಗಳನ್ನು ಒದಗಿಸುವುದು ಮತ್ತು 36 ತಿಂಗಳು ಅವಧಿಗಾಗಿ ಬೃಬೆಂಮಪಾಯ ಮಿತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಜಾರಿಗೊಳಿಸುವುದು.	3062.00

ಟೆಂಡರ್‌ನ ಬಿಡ್ ಪೂರ್ವ ಸಭೆ	04.01.2025 ರಂದು 15:00 ಗಂಟೆಗೆ ಮೇಲೆ ತಿಳಿಸಿರುವ ಕಛೇರಿಯಲ್ಲಿ
ಟೆಂಡರನ್ನು ಸ್ವೀಕರಿಸಲು ಕೊನೆಯ ದಿನಾಂಕ	13.01.2025 ರ 16:00 ಗಂಟೆಗೆ ಮುಂಚಿತವಾಗಿ
ತಾಂತ್ರಿಕ ಬಿಡ್ ತೆರೆಯುವುದು	15.01.2025 ರ 16:30 ಗಂಟೆಯ ನಂತರ

ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://.kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–1
ಬೆಂಘತ್ಯಾನಿಕಂನಿ

ವಾಸಾಸಂಇ/ವಾಪ್ರ/3992/ಆಕಾರ್/2024–25

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560010. ಫೋನ್: 080–2340 7911 ಇಂದ 25, ಫ್ಯಾಕ್ಸ್ : 080–2314 3566/ 2338 9070, ಇ–ಮೇಲ್: kssidcho@karnataka.gov.in
www.kssidc.co.in

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ಕೇಂದ್ರ ಕಛೇರಿಗೆ ದಿನ ನಿತ್ಯದ ಬಳಕೆಗಾಗಿ ಉತ್ತಮ ಗುಣಮಟ್ಟದ (ಬ್ರ್ಯಾಂಡೆಡ್ ಕಂಪನಿ) ಲೇಖನಿ ಹಾಗೂ ಸ್ಟೇಷನರಿ ಸಾಮಗ್ರಿಗಳನ್ನು ಒಂದು ವರ್ಷದವರೆಗೆ (ದಿನಾಂಕ: 16.01.2025 ರಿಂದ 15.01.2026) ಪೂರೈಸುವ ಕುರಿತು ಟೆಂಡರ್ ಮೂಲಕ ಖರೀದಿಸುವ ಸಲುವಾಗಿ ಅಧಿಕೃತ ಏಜೆನ್ಸಿಯವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಅಧಿಕೃತ ಏಜೆನ್ಸಿಯವರು ಸೀಲ್ ಮಾಡಿದ ಲಕೋಟೆಯಲ್ಲಿ ಟೆಂಡರ್‌ನ್ನು ಸಲ್ಲಿಸಬಹುದಾಗಿದೆ. ಟೆಂಡರ್‌ನಲ್ಲಿ ಭಾಗವಹಿಸುವವರು ಮುಂಗಡ ಹಣವಾಗಿ **ರೂ.10,000/–ಗಳನ್ನು** ಮೆ॥ ಕೆಎಸ್‌ಎಸ್‌ಐಡಿಸಿ ಹೆಸರಿಗೆ ಪಾವತಿಯಾಗುವಂತೆ ಡಿ.ಡಿ.ಯನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಅರ್ಜಿಯೊಂದಿಗೆ ಪಾವತಿಸುವುದು. ಟೆಂಡರ್ ನಲ್ಲಿ ಸಫಲರಾದವರ ಇಎಂಡಿ ಮೊತ್ತವನ್ನು ಟೆಂಡರ್ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತದೆ. ಜಿಎಸ್‌ಟಿ ನೋಂದಣಿ ಹೊಂದಿರುವವರು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಕಛೇರಿ ವೇಳೆ ಬೆಳಗ್ಗೆ 10.30 ರಿಂದ ಸಂಜೆ 5.00 ಗಂಟೆಯೊಳಗೆ ಖುದ್ದಾಗಿ ಬಂದು ಲೇಖನ ಸಾಮಗ್ರಿಗಳ ವಿವರಗಳನ್ನು ಪಡೆದುಕೊಳ್ಳಬಹುದು. ಯಾವುದೇ ಕಾರಣ ನೀಡದೆ ಅಂತಿಮ ಟೆಂಡರ್‌ಅನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಾಗೂ ಟೆಂಡರ್ ಕರೆಯುವ ಅಥವಾ ಮುಂದೂಡುವ ಹಕ್ಕನ್ನು ನಿಗಮದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ಹೊಂದಿರುತ್ತಾರೆ. ಇವರ ತೀರ್ಮಾನವೇ ಅಂತಿಮ ತೀರ್ಮಾನವಾಗಿದ್ದು, ಇದಕ್ಕೆ ಭಾಗವಹಿಸುವ ಎಲ್ಲಾ ಬಿಡ್‌ದಾರರು ಬದ್ಧರಾಗಿರಬೇಕು. ಭರ್ತಿ ಮಾಡಿದ ಟೆಂಡರ್ ಲಕೋಟೆಯನ್ನು ಇಎಂಡಿ ಮೊತ್ತದೊಂದಿಗೆ **ದಿನಾಂಕ: 06.01.2025 ರಂದು ಸಂಜೆ 5.00 ಗಂಟೆಯೊಳಗೆ** ಸಲ್ಲಿಸಬಹುದು. ಬಿಡ್ಡನ್ನು ಮರುದಿನ 11.00ಕ್ಕೆ ಟೆಂಡರ್‌ಅನ್ನು ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ನಿಗಮದ ವೆಬ್‌ಸೈಟ್ **www.kssidc.co.in** ನಲ್ಲಿ ಹಾಗೂ ನಿಗಮದ ಕಛೇರಿ ಸೂಚನಾ ಫಲಕದಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಡಳಿತ) ರವರನ್ನು ಆಡಳಿತ ಕಛೇರಿಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ : 8884415844).

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ವಾ.ಪ್ರ/3991/ಶಿರಡಿ ಸಾಯಿ/2024–25

ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ #16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560052 ಇವರ ಮುಂದೆ

ಕೆಳಕಂಡ ವಿಷಯದಲ್ಲಿ, ವಿದ್ಯುತ್ ಕಾಯಿದೆ 2003ರ ಪರಿಚ್ಛೇದ 62 ಮತ್ತು 64ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ದರ) ವಿನಿಮಯಗಳು, 2000 ಹಾಗೂ ತಿದ್ದುಪಡಿಗಳು ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿಗಳು, 2006 ಮತ್ತು ತಿದ್ದುಪಡಿಗಳು ಪ್ರಕಾರ ಆರ್ಥಿಕ ವರ್ಷ 2023–24ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ (ಎ.ಪಿ.ಆರ್) ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮಲ್ಟಿ ಇಯರ್ ಟ್ರಾನ್ಸ್‌ಮಿಷನ್, ಡಿಸ್ಟ್ರಿಬ್ಯೂಷನ್ ಮತ್ತು ರೀಟೇಲ್ ಸಪ್ಲೈ ಟ್ಯಾರೀಫ್) ನಿಯಮಾವಳಿಗಳು, 2024ರ ಪ್ರಕಾರ 2025–26, 2026–27 ಮತ್ತು 2027–28ರ ಆರ್ಥಿಕ ವರ್ಷಗಳಿಗೆ ವಾರ್ಷಿಕ ಆದಾಯದ ಅಗತ್ಯತೆ (ಎ.ಆರ್.ಆರ್) ಮತ್ತು ಪ್ರಸರಣ ಜಕಾತಿಯ ಅರ್ಜಿಯನ್ನು ಅನುಮೋದನೆಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಸಲ್ಲಿಸಿರುವ ಅರ್ಜಿಯ ಬಗ್ಗೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,
ಕಾವೇರಿ ಭವನ, ಬೆಂಗಳೂರು–560 009. ..... **ಅರ್ಜಿದಾರರು**

ಅಧಿಸೂಚನೆ

ಕವಿಪ್ರನಿನಿಯ ಎಪಿಆರ್ 2023–24 ಮತ್ತು ಎ.ಆರ್.ಆರ್ 2025–26, 2026–27 ಮತ್ತು 2027–28ರ ಅಧಿಸೂಚನೆ.

1.0 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿ 2006ರ ಮತ್ತು ಕಾಲಕಾಲಕ್ಕೆ ಆದ ಅದರ ತಿದ್ದುಪಡಿಗಳ ಪ್ರಕಾರ, ಆರ್ಥಿಕ ವರ್ಷ 2023–24ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮಲ್ಟಿ ಇಯರ್ ಟ್ರಾನ್ಸ್‌ಮಿಷನ್, ಡಿಸ್ಟ್ರಿಬ್ಯೂಷನ್ ಮತ್ತು ರೀಟೇಲ್ ಸಪ್ಲೈ ಟ್ಯಾರೀಫ್) ನಿಯಮಾವಳಿಗಳು, 2024ರ ಪ್ರಕಾರ 2025–26, 2026–27 ಮತ್ತು 2027–28ರ ಆರ್ಥಿಕ ವರ್ಷಗಳಿಗೆ ವಾರ್ಷಿಕ ಆದಾಯದ ಅಗತ್ಯತೆ (ಎ.ಆರ್.ಆರ್) ಹಾಗೂ ತತ್ಸಂಬಂಧಿ ವಿದ್ಯುತ್ ಪ್ರಸರಣ ದರದ ಪರಿಷ್ಕರಣೆಯ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿರುತ್ತದೆ. ಕವಿಪ್ರನಿನಿಯ ಅರ್ಜಿಗಳು ಗೌರವಾನ್ವಿತ ಆಯೋಗದ ಪರಿಗಣನೆಯಲ್ಲಿರುತ್ತದೆ.

2.0 ಆರ್ಥಿಕ ವರ್ಷ 2023–24ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಅರ್ಜಿಯಲ್ಲಿ, ಕವಿಪ್ರನಿನಿಯು ಪರಿಷ್ಕೃತ ವಾರ್ಷಿಕ ಆದಾಯದ ಅಗತ್ಯತೆ ರೂ. 5849.45 ಕೋಟಿಯಾಗಿರುತ್ತದೆ. ಆದಾಯದ ಕೊರತೆಯು ರೂ. 254.85 ಕೋಟಿಗಳಾಗಿರುತ್ತದೆ. ಈ ಕೊರತೆಯನ್ನು ಆರ್ಥಿಕ ವರ್ಷ 2025–26ರ ಅವಧಿಯಲ್ಲಿ ವಸೂಲಾತಿ ಮಾಡಲು ಅನುಮೋದನೆ ನೀಡಬೇಕಾಗಿ ಕೋರಲಾಗಿದೆ.

3.0 ಆರ್ಥಿಕ ವರ್ಷ 2025–26, 2026–27 ಮತ್ತು 2027–28ರ ಆರ್ಥಿಕ ವಾರ್ಷಿಕ ಆದಾಯದ ಅಗತ್ಯತೆಯಾದ ರೂ. 10,522.91 ಕೋಟಿ, ರೂ. 10,954.71 ಕೋಟಿ ಮತ್ತು ರೂ. 12,158.05 ಕೋಟಿಗಳನ್ನು ಪ್ರಸ್ತಾವಿತ ಪ್ರಸರಣ ದರ ಪ್ರತಿ ಮೆಗಾವ್ಯಾಟ್‌ಗೆ, ಪ್ರತಿ ತಿಂಗಳಿಗೆ, ಕ್ರಮವಾಗಿ ರೂ. 2,62,254/–, ರೂ. 2,54,270/–, ರೂ. 2,71,283/–ರಂತೆ ವಸೂಲಿ ಮಾಡಲು ಪ್ರಸ್ತಾಪಿಸಿದೆ.

ಪ್ರಸ್ತಾವಿತ ಪ್ರಸರಣ ಶುಲ್ಕಗಳು–ಲೆಕ್ಕಾಚಾರ

(ಮೊತ್ತ ರೂ. ಕೋಟಿಗಳಲ್ಲಿ)

Particulars	FY2025-26	FY2026-27	FY2027-28
A. Estimated Annual Revenue Requirement			
(a) O&M Charges	2697.12	2898.75	3399.67
(b) Depreciation	1914.23	2143.93	2401.21
(c) Interest & Finance Charges	1424.79	1628.23	1808.03
(d) Return on Equity	1627.17	1903.21	2226.06
(e) Other Charges	87.53	89.28	91.06
(f) Less: Other Income	180.97	206.30	235.19
(g) Government Portion of Contribution to P&G Trust payable by consumers, as per the decision of the Government.	2812.83	2845.75	2860.97
(h) Interest, Finance Charges and Other Expenses Capitalised	-307.96	-348.14	-393.76
(I) Amortized regulatory Asset as per KERC order dated 09.10.2020	193.32	-	-
(j) Revenue Gap for FY24	254.85	-	-
Annual Revenue Requirement:	**10522.91**	**10954.71**	**12158.05**
B. Estimated Expected Revenue from Charges @ existing tariff rates			
(a) Transmission Charges (in Rs/MW/Month)	262254	254270	271283
(b) Miscellaneous Charges	-	-	-
Total:	**262254**	**254270**	**271283**
Revenue Deficit: Government Portion of Contribution to P&G Trust payable by consumers, as per the decision of the Government.	2812.83	2845.75	2860.97
Revenue Deficit: Due to other components of estimated Annual Revenue Requirement	7710.08	8108.96	9297.08
Total:	**10522.91**	**10954.71**	**12158.05**

C. Transmission Tariff / MW /Month:

Particulars	As Existing for FY2024-25	As Proposed for FY2025-26	As Proposed for FY2026-27	As Proposed for FY2027-28
Government Portion of Contribution to P&G Trust payable by consumers, as per the decision of the Government.	-	70,102	66,053	63,837
Other components of estimated Annual Revenue Requirement	1,63,760	1,92,152	1,88,217	2,07,446
Total:	**1,63,760**	**2,62,254**	**2,54,270**	**2,71,283**

4.0 ವಿದ್ಯುಚ್ಛಕ್ತಿ ಕಾಯಿದೆ 2003ರ ನಿಬಂಧನೆಗಳಿಗೆ ಅನುಸಾರವಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ದರ) ನಿಯಮಾವಳಿಗಳು 2000ರ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿಗಳು 2006 ಮತ್ತು ತಿದ್ದುಪಡಿ ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮಲ್ಟಿ ಇಯರ್ ಟ್ರಾನ್ಸ್‌ಮಿಷನ್, ಡಿಸ್ಟ್ರಿಬ್ಯೂಷನ್ ಮತ್ತು ರೀಟೇಲ್ ಸಪ್ಲೈ ಟ್ಯಾರೀಫ್) ನಿಯಮಾವಳಿಗಳು, 2024ರ ಪ್ರಕಾರ, ಮೇಲಿನ ಅರ್ಜಿಗಳಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಆಸಕ್ತಿ ಹೊಂದಿರುವ ವ್ಯಕ್ತಿಗಳು ತಮ್ಮ ಆಕ್ಷೇಪಣೆಗಳನ್ನು ತಾವು ಆಧರಿಸುವ ದಾಖಲೆಗಳ ಆರು ಸೆಟ್‌ಗಳೊಂದಿಗೆ ಪ್ರಮಾಣ ಪತ್ರದ (ಅಫಿಡವಿಟ್) ಜೊತೆಗೆ ಈ ಪ್ರಕಟಣೆ ಪ್ರಥಮವಾಗಿ ಪ್ರಕಟವಾದ ದಿನಾಂಕದಿಂದ **ಮೂವತ್ತು ದಿನಗಳ ಒಳಗಾಗಿ ಸ್ವೀಕರಣಾಧಿಕಾರಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560 052 ಅವರಿಗೆ ಸಲ್ಲಿಸಬಹುದು.**

5.0 ಆಸಕ್ತಿಯುಳ್ಳವರು ಕವಿಪ್ರನಿನಿಯ ಎ.ಪಿ.ಆರ್. ಮತ್ತು ಎ.ಆರ್.ಆರ್. ಅರ್ಜಿಗಳ ಪ್ರತಿಗಳನ್ನು ಪರಾಮರ್ಶಿಸಲು ಅಥವಾ ಖರೀದಿಸಲು ಈ ಕೆಳಗೆ ತಿಳಿಸಿದ ಕಛೇರಿಗಳಲ್ಲಿ ಲಭ್ಯವಿರುತ್ತದೆ.

1. **ಎಲ್ಲಾ ಮುಖ್ಯ ಇಂಜಿನಿಯರ್ (ವಿದ್ಯುಚ್ಛಕ್ತಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು, ತುಮಕೂರು, ಹಾಸನ, ಮೈಸೂರು, ಬಾಗಲಕೋಟೆ ಮತ್ತು ಕಲಬುರಗಿ.**
2. **ಲೆಕ್ಕಾಧಿಕಾರಿ (ಸಾರ್ವಜನಿಕ ಸಂಪರ್ಕ), ನಿಗಮ ಕಾರ್ಯಾಲಯ, ಕವಿಪ್ರನಿನಿ, ನೆಲಮಹಡಿ, ಕಾವೇರಿ ಭವನ, ಬೆಂಗಳೂರು.**
3. **ವಿದ್ಯುತ್ ಸರಬರಾಜು ಕಂಪನಿಗಳ ಕಂಪನಿ ಕಾರ್ಯಾಲಯಗಳು, ಬೆಂಗಳೂರು, ಮಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಕಲಬುರಗಿ.**

6.0 ಎ.ಪಿ.ಆರ್./ಎ.ಆರ್.ಆರ್. ಪ್ರತಿಗಳನ್ನು ಖರೀದಿಸಲು ಇಚ್ಛಿಸುವವರು ಎ.ಪಿ.ಆರ್.ನ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿ ಪುಸ್ತಕಕ್ಕೆ **ರೂ. 116/–** ರಂತೆ ಮತ್ತು ಎ.ಆರ್.ಆರ್. ನ ಕನ್ನಡ ಭಾಷೆಯ ಪ್ರತಿ ಪುಸ್ತಕಕ್ಕೆ **ರೂ. 213/–** ಹಾಗೂ ಆಂಗ್ಲ ಭಾಷೆಯ ಪ್ರತಿ ಪುಸ್ತಕಕ್ಕೆ **ರೂ. 214/–** ರಂತೆ ನಗದು / ಡಿಡಿ ಮೂಲಕ ಪಾವತಿಸಿ ಪೂರ್ಣ ಪ್ರತಿಯನ್ನು ಅಥವಾ ಪ್ರತಿ ಪುಟಕ್ಕೆ **ರೂ. 1/–** ರಂತೆ ಜೆರಾಕ್ಸ್ ವೆಚ್ಚಗಳನ್ನು ಪಾವತಿ ಮಾಡಿ ಪುಸ್ತಕಗಳ ಅಪೇಕ್ಷಿತ ಭಾಗಗಳ ಪ್ರತಿಗಳನ್ನು ಪ್ರಥಮ ಪ್ರಕಟಣೆಯ ದಿನಾಂಕದ **ಹತ್ತು ಕೆಲಸದ ದಿನಗಳೊಳಗಾಗಿ** ಪಡೆಯಲು ಅವಕಾಶವಿರುತ್ತದೆ. ಈ ದಾಖಲೆಗಳು ಕವಿಪ್ರನಿನಿ ವೆಬ್‌ಸೈಟ್: **https://kptcl.karnataka.gov.in** ನಲ್ಲಿ ಸಹ ಲಭ್ಯವಿರುತ್ತದೆ.

7.0 ಆಕ್ಷೇಪಣೆಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಮಾತ್ರ ಸಲ್ಲಿಸಬೇಕು. ಆದರೆ, ಕವಿನಿ ಆಯೋಗದ ನಿರ್ದೇಶನದಂತೆ, ಆಕ್ಷೇಪಣೆ ಸಲ್ಲಿಕೆ ಮತ್ತು ಅದಕ್ಕೆ ಪ್ರತ್ಯುತ್ತರ ಸಲ್ಲಿಸುವ ಪ್ರಕ್ರಿಯೆಯನ್ನು ತ್ವರಿತಗೊಳಿಸಲು, ಆಕ್ಷೇಪಣಾದಾರರು ಏಕಕಾಲದಲ್ಲಿ ತಮ್ಮ ಆಕ್ಷೇಪಣೆಯ ಪ್ರತಿಯನ್ನು ನೇರವಾಗಿ **ವ್ಯವಸ್ಥಾಪಕ ನಿರ್ದೇಶಕರು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560 009** ಇವರಿಗೂ ಕಳುಹಿಸಲು ಕೋರಲಾಗಿದೆ. ಸಾರ್ವಜನಿಕ ಆಕ್ಷೇಪಣೆಗಳನ್ನು ಮೊದಲ ಪ್ರಕಟಣೆಯನ್ನು ಹೊರಡಿಸಿದ ದಿನಾಂಕದಿಂದ **30 ದಿನದೊಳಗೆ** ಸ್ವೀಕರಿಸಲಾಗುವುದು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಪರವಾಗಿ
ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560 009.

ಸುಭಾಷಿತ

ಮೂರ್ಖರ ಜಗತ್ತಿನಲ್ಲಿ ಜಾಣನೇ ಹುಚ್ಚ.

-ಬೀಚಿ

ಆರ್ಥಿಕ ಸುಧಾರಣೆಗಳ ಪ್ರಯೋಜನಕ್ಕೆ ಮಾನವೀಯ ರೂಪ ನೀಡಿದ ಧೀಮಂತ

ಪ್ರಧಾನಿಯಾಗಿ ದೇಶವನ್ನು ಎರಡು ಅವಧಿಗೆ ಮುನ್ನಡೆಸಿದ ಮನಮೋಹನ ಸಿಂಗ್ ಅವರು ಆಧುನಿಕ ಭಾರತದ ಶಿಲ್ಪಿಗಳಲ್ಲಿ ಒಬ್ಬರು. ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟವನ್ನು ಮುನ್ನಡೆಸಿ, ಹೊಸದಾಗಿ ಜನ್ಮತಾಳಿದ ಗಣರಾಜ್ಯದ ನೀತಿಗಳನ್ನು ರೂಪಿಸಿ, ಹೊಸ ರಾಷ್ಟ್ರವನ್ನು ಕಟ್ಟಲು ಬೆವರು ಸುರಿಸಿದ ಉನ್ನತ ನಾಯಕರ ಸಾಲಿಗೆ ಸೇರುವಂತಹ ವ್ಯಕ್ತಿತ್ವ ಸಿಂಗ್ ಅವರದ್ದು. ದೇಶದಲ್ಲಿ 1991ರಲ್ಲಿ ಆರ್ಥಿಕ ಸುಧಾರಣೆಗಳಿಗೆ ಚಾಲನೆ ನೀಡಿದ ಹಣಕಾಸು ಸಚಿವರಾಗಿ ಸಿಂಗ್ ಅವರು ನೆನಪಿನಲ್ಲಿ ಇರುತ್ತಾರೆ. ಈ ಸುಧಾರಣಾ ಕ್ರಮಗಳು ದೇಶವನ್ನು ವೇಗದ ಆರ್ಥಿಕ ಅಭಿವೃದ್ಧಿಯ ಹಳಿಗೆ ತಂದಿರಿಸಿದವು, ದೇಶಕ್ಕೆ ಹೊಸ ಚಿತ್ರಣ ಒದಗಿಸಿದವು. ದೇಶವನ್ನು ಕಟ್ಟಿದ ಹತ್ತು ಹಲವು ನಾಯಕರ ರೀತಿಯಲ್ಲೇ ಸಿಂಗ್ ಅವರು ಕೂಡ ಬಹುಮುಖಿ ವ್ಯಕ್ತಿತ್ವ ಹೊಂದಿದ್ದರು, ಬೌದ್ಧಿಕವಾಗಿ ಬಹಳ ಉನ್ನತವಾದ ಸ್ಥಾನವನ್ನು ಸಂಪಾದಿಸಿದ್ದರು, ವೈವಿಧ್ಯಮಯವಾದ ಆಸಕ್ತಿಗಳನ್ನು ರೂಪಿಸಿಕೊಂಡಿದ್ದರು, ಹಲವು ಜವಾಬ್ದಾರಿಗಳನ್ನು ನಿಭಾಯಿಸಿದ್ದರು ಹಾಗೂ ತಾವು ನಿಭಾಯಿಸಿದ ಪ್ರತಿ ಹುದ್ದೆಯಲ್ಲೂ ತಮ್ಮದೇ ಆದ ಛಾಪು ಮೂಡಿಸಿದ್ದರು. ಅವರು ಅಕಡೆಮಿಕ್ ವಲಯದ ವಿದ್ವಾಂಸರಾಗಿದ್ದರು, ಅರ್ಥಶಾಸ್ತ್ರಜ್ಞ ಆಗಿದ್ದರು, ಅಧಿಕಾರಿಯೂ ಆಗಿದ್ದರು. ಇವೆಲ್ಲಕ್ಕಿಂತ ಹೆಚ್ಚಾಗಿ ಅವರು ಜೀವನದಲ್ಲಿ ಅತ್ಯುನ್ನತವಾದ ಮೌಲ್ಯಗಳನ್ನು ಪಾಲಿಸಿದ ಒಳ್ಳೆಯ ಮನುಷ್ಯ ಆಗಿದ್ದರು. ಅವರ ಜೊತೆ ಭಿನ್ನಾಭಿಪ್ರಾಯ ಇದ್ದರೂ ಸದಭಿಪ್ರಾಯಕ್ಕೆ ಚ್ಯುತಿ ಬರುತ್ತಿರಲಿಲ್ಲ. ಈ ಒಂದು ಗುಣವು ವಿವಾದಗಳಿಂದಲೇ ತುಂಬಿರುವ ಇಂದಿನ ರಾಜಕಾರಣದಲ್ಲಿ ಬಹಳ ಅಪರೂಪದ್ದು.

ಜೀವನದಲ್ಲಿ ಅತ್ಯುನ್ನತವಾದ ಮೌಲ್ಯಗಳನ್ನು ಪಾಲಿಸಿದ ಮನಮೋಹನ ಸಿಂಗ್, ದೇಶ ಕಂಡ ಮಹಾನ್ ಪ್ರಧಾನಿಗಳಲ್ಲಿ ಒಬ್ಬರು ಎಂಬ ಮಾತನ್ನು ಇತಿಹಾಸವು ಹೇಳುತ್ತದೆ

ಪ್ರಧಾನಿಯಾಗಿ ದೀರ್ಘ ಅವಧಿಗೆ ಅಧಿಕಾರ ನಡೆಸಿದವರಲ್ಲಿ ಸಿಂಗ್ ಅವರೂ ಒಬ್ಬರು. ಹಾಗೆಯೇ, ಸತತವಾಗಿ ಎರಡನೆಯ ಅವಧಿಗೆ ಮರು ಆಯ್ಕೆ ಆದ ಪ್ರಧಾನಿಗಳಲ್ಲಿ ಒಬ್ಬರು. ದೇಶದ ಪ್ರಧಾನಿ ಹುದ್ದೆಗೆ ಏರಿದ ಅಲ್ಪಸಂಖ್ಯಾತ ಸಮುದಾಯವೊಂದಕ್ಕೆ ಸೇರಿದ ಮೊದಲ ವ್ಯಕ್ತಿ ಸಿಂಗ್ ಅವರು. ಇದು ಸಾಂಕೇತಿಕ ಮಾತ್ರವೇ ಆಗಿರಬಹುದು. ಆದರೆ ರಾಜಕಾರಣದಲ್ಲಿ ಹಾಗೂ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಾಂಕೇತಿಕ ನಡೆಗಳಿಗೆ ಬಹಳ ಶಕ್ತಿಶಾಲಿಯಾದ ಸಂದೇಶವನ್ನು ರವಾನಿಸುವ ಸಾಮರ್ಥ್ಯ ಇರುತ್ತದೆ. ರಾಜಕಾರಣದಲ್ಲಿ ಸಹಜವಾಗಿ ಪ್ರಧಾನಿ ಹುದ್ದೆಗೆ ಏರಿದ ವ್ಯಕ್ತಿ ಅಲ್ಲ ಸಿಂಗ್. ಅವರು ಪ್ರಧಾನಿ ಹುದ್ದೆಗೆ ಏರಿದ್ದು ತೀರಾ ಆಕಸ್ಮಿಕ. ಸಿಂಗ್ ಅವರನ್ನು ಕೇಂದ್ರದ ಹಣಕಾಸು ಸಚಿವರನ್ನಾಗಿ ನೇಮಕ ಮಾಡಿದ ಪಿ.ವಿ. ನರಸಿಂಹ ರಾವ್ ಅವರು ಪ್ರಧಾನಿ ಆಗಿದ್ದುದು ಕೂಡ ಆಕಸ್ಮಿಕವೇ. ಆದರೆ, ಆಕಸ್ಮಿಕಗಳು ಸಹ ಬದಲಾವಣೆಗೆ ಒಂದು ಅವಕಾಶ ಎಂಬುದನ್ನು ಇಬ್ಬರೂ ಸಾಧಿಸಿ ತೋರಿಸಿದರು. ಇಬ್ಬರೂ ಈ ದೇಶವನ್ನು ಹೊಸ ದಿಕ್ಕಿನತ್ತ ಒಯ್ದರು. ಹಣಕಾಸು ಸಚಿವರಾಗಿದ್ದಾಗ ಸಿಂಗ್ ಅವರು, ದೇಶದ ಅರ್ಥವ್ಯವಸ್ಥೆಯಲ್ಲಿ ಸುಪ್ತವಾಗಿದ್ದ ಚೈತನ್ಯ ಹೊರಹೊಮ್ಮಲು ನೆರವಾದರು. ಆರ್ಥಿಕ ಸುಧಾರಣೆಗಳಿಂದ ದೊರೆತ ಪ್ರಯೋಜನವನ್ನು ಒಗ್ಗೂಡಿಸಿ, ಅದಕ್ಕೆ ಒಂದು ಸಾಮಾಜಿಕ ತಳಹದಿಯನ್ನು ಮುಂದೆ ರೂಪಿಸಿಕೊಟ್ಟರು. ಪ್ರಧಾನಿಯಾಗಿ ತಮ್ಮ ಮೊದಲ ಅವಧಿಯಲ್ಲಿ ಸಿಂಗ್ ಅವರು, ಹಿಂದೆ ತಂದ ಆರ್ಥಿಕ ಸುಧಾರಣೆಗಳಿಂದ ಸಿಕ್ಕ ಪ್ರಯೋಜನಗಳಿಗೆ ಮಾನವೀಯ ರೂಪ ನೀಡಿದರು. ಆದರೆ, ಸಿಂಗ್ ಅವರು ಪ್ರಧಾನಿಯಾಗಿದ್ದ ಎರಡನೆಯ ಅವಧಿಯಲ್ಲಿ ಒಂದಿಷ್ಟು ಕೊರತೆಗಳು ಕಾಣಲಾರಂಭಿಸಿದವು. ಯುಪಿಎ ಮೈತ್ರಿಕೂಟದ ಆಡಳಿತದ ಎರಡನೆಯ ಅವಧಿಯಲ್ಲಿ ರಾಜಕೀಯ ಹಾಗೂ ವೈಯಕ್ತಿಕ ನೆಲೆಯಲ್ಲಿ ವೈಫಲ್ಯಗಳು ಉಂಟಾದವು. ಇವುಗಳ ಪರಿಣಾಮವು ರಾಜಕಾರಣದ ಗತಿಯನ್ನು ಬದಲಿಸಿತು. ಆ ಅವಧಿಯಲ್ಲಿ ಆಗಿದ್ದುದರ ಬಗ್ಗೆ ಸರಿಯಾದ ಅಂದಾಜು ಇನ್ನಷ್ಟೇ ಆಗಬೇಕಿದೆ.

ಇಂದಿನ ಪಾಕಿಸ್ತಾನದ ಸಣ್ಣ ಗ್ರಾಮವೊಂದರಲ್ಲಿ ಜನಿಸಿದ ಸಿಂಗ್ ಅವರು ದೇಶ ವಿಭಜನೆಯ ಅನಿಶ್ಚಿತ ಪರಿಸ್ಥಿತಿಯನ್ನು ಅನುಭವಿಸಿದರು. ಮುಂದೊಂದು ದಿನ ಅವರು ಭಾರತದ ಅತ್ಯುನ್ನತ ಹುದ್ದೆಗೆ ಏರಿದರು. ಸರಿಯಾದ ಸಂದರ್ಭಗಳಲ್ಲಿ, ಸರಿಯಾದ ಸ್ಥಾನಗಳಲ್ಲಿ ಇದ್ದ ಸರಿಯಾದ ವ್ಯಕ್ತಿ ಸಿಂಗ್ ಆಗಿದ್ದಿರಬಹುದು. ಆದರೆ ಎಲ್ಲ ಸಂದರ್ಭಗಳಲ್ಲಿಯೂ ಸರಿಯಾದ ಕೆಲಸಗಳನ್ನೇ ಮಾಡುವುದು ಸುಲಭವಲ್ಲ. ಈಗಿನ ಸಂದರ್ಭಕ್ಕಿಂತ ಹೆಚ್ಚು ಸೌಮ್ಯವಾಗಿದ್ದ ಕಾಲಘಟ್ಟವನ್ನು ಅವರು ಪ್ರತಿನಿಧಿಸಿದ್ದರು. ಅವರ ಹೆಸರು ಒಳ್ಳೆಯ ಸಂಗತಿಗಳನ್ನು, ಘನತೆಯನ್ನು ನೆನಪಿಗೆ ತರುತ್ತದೆ. ಆಶಯಗಳಲ್ಲಿ ಅವರು ನೆಹರೂವಾದಿಯಾಗಿದ್ದರು; ಹೆಚ್ಚು ವಿವೇಕಯುತವಾಗಿದ್ದ ಜಗತ್ತಿನ ಜೊತೆ ಬೆಸೆದುಕೊಂಡಿದ್ದ ಅವರು ಆಧುನಿಕ, ವೈಚಾರಿಕ ಮತ್ತು ಧರ್ಮನಿರಪೇಕ್ಷ ದೃಷ್ಟಿಕೋನ ಹೊಂದಿದ್ದರು. ತಮ್ಮ ಕಾಲದ ಮಾಧ್ಯಮಗಳು ತಮ್ಮ ಬಗ್ಗೆ ಎಷ್ಟು ಅನುಕಂಪ ಹೊಂದಿವೆ ಎಂಬುದಾಗಿ ಅವರು ಭಾವಿಸಿದ್ದರೋ ಅದಕ್ಕಿಂತ ಹೆಚ್ಚು ಅನುಕಂಪವನ್ನು ಇತಿಹಾಸವು ಅವರ ಬಗ್ಗೆ ಹೊಂದಿರುತ್ತದೆ. ದೇಶ ಕಂಡ ಮಹಾನ್ ಪ್ರಧಾನಿಗಳಲ್ಲಿ ಒಬ್ಬರು ಎಂಬ ಮಾತನ್ನು ಇತಿಹಾಸವು ಹೇಳುತ್ತದೆ. ಆ ಮಾತಿಗೆ ಅವರು ಅರ್ಹರೂ ಹೌದು.

ದಿನದ ಟ್ವೀಟ್

ಅನಗತ್ಯ ರಜೆ ಬೇಡ

ಗಣ್ಯ ವ್ಯಕ್ತಿಗಳು ಸತ್ತಾಗ ರಜೆ ನೀಡುವ ಪರಿಪಾಟವನ್ನು ಮೊದಲು ನಿಲ್ಲಿಸಬೇಕು. ಈ ರೀತಿ ಮಾಡಿ ಅವರಿಗೆ ಅವಮಾನ ಮಾಡಬಾರದು. ಅವರೆಲ್ಲರೂ ದೇಶಕ್ಕಾಗಿ ತಮ್ಮ ಜೀವನ, ಸಮಯ, ಜ್ಞಾನವನ್ನು ಧಾರೆಯೆರೆದಿರುತ್ತಾರೆ. ಅವರ ಗೌರವಾರ್ಥ ಜಪಾನ್ ದೇಶದಂತೆ ಇನ್ನೂ ಒಂದು ತಾಸು ಹೆಚ್ಚು ದುಡಿದು ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವತ್ತ ಹೆಜ್ಜೆ ಇಟ್ಟರೆ ಉತ್ತಮ.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಟೋಲ್ ಸಂಗ್ರಹವು ಹಿಂದಿನ ಎರಡು ವರ್ಷಗಳಿಂದ ವಾರ್ಷಿಕ ಶೇಕಡ 35ರಷ್ಟು ಹೆಚ್ಚಾಗುತ್ತಿದೆ. ನಮ್ಮ ಆರ್ಥಿಕತೆಯಾಗಲಿ ಅಥವಾ ವೇತನವಾಗಲಿ ಈ ಪ್ರಮಾಣದಲ್ಲಿ ಬೆಳೆಯುತ್ತಿಲ್ಲ. ಆದರೆ, ಟೋಲ್ ಮತ್ತು ತೆರಿಗೆಗಳು ಮಾತ್ರ ಏರಿಕೆ ಕಾಣುತ್ತಿವೆ.

ಮನೋಜ್ ಅರೋರ, ಲೇಖಕ

25 ವರ್ಷಗಳ ಹಿಂದೆ

ಮಂಗಳವಾರ, 28-12-1999

● ಅಪಹರಣಕಾರರೊಂದಿಗೆ ಮುಖಾಮುಖಿ ಮಾತುಕತೆ ಆರಂಭ

ಕಂದಹಾರ್, ಡಿ. 27 (ರಾಯಿಟರ್ಸ್, ಪಿಟಿಐ)– ವಿಮಾನ ಅಪಹರಣದ ಬಿಕ್ಕಟ್ಟಿನ ಪರಿಹಾರಕ್ಕಾಗಿ ಆಗಮಿಸಿರುವ ಭಾರತದ ಏಳು ಮಂದಿ ಅಧಿಕಾರಿಗಳ ತಂಡದೊಂದಿಗೆ ಅಪಹರಣಕಾರರು ಮಧ್ಯರಾತ್ರಿಯ ಬಳಿಕ ಮುಖಾಮುಖಿ ಮಾತುಕತೆ ಆರಂಭಿಸಿದರು.

ಅಪಹರಣಕಾರನೊಬ್ಬ ವಿಮಾನದಿಂದ ಹೊರಬಂದು ಭಾರತದ ಅಧಿಕಾರಿಯನ್ನು ಭೇಟಿ ಮಾಡಿ ಚರ್ಚೆ ಆರಂಭಿಸಿದ. ಇದರಿಂದ ಬಿಕ್ಕಟ್ಟಿಗೆ ಪರಿಹಾರ ಸಿಗುವುದೆಂಬ ಆಸೆ ಚಿಗುರಿದ್ದರೂ 154 ಮಂದಿ ಒತ್ತೆಯಾಳುಗಳು ಮಾತ್ರ ಪ್ರತಿಕೂಲ ಹವಾಮಾನದಲ್ಲಿ ನಾಲ್ಕನೇ ರಾತ್ರಿಯನ್ನು ವಿಮಾನದಲ್ಲಿ ಕಳೆಯುತ್ತಿದ್ದಾರೆ. ಅವರಿಗೆ ಆಹಾರವನ್ನು ತಾಲಿಬಾನ್ ಅಧಿಕಾರಿಗಳು ಸರಬರಾಜು ಮಾಡಿದ್ದಾರೆ.

● 'ಪ್ರಯಾಣಿಕರನ್ನು ಕೊಂದರೆ ದಾಳಿ'

ಕಂದಹಾರ್, ಡಿ. 27– ಅಪಹರಣಕಾರರು ಪ್ರಯಾಣಿಕರನ್ನು ಕೊಲ್ಲಲಾರಂಭಿಸಿದರೆ, ಕಮಾಂಡೊಗಳು ವಿಮಾನದ ಮೇಲೆ ದಾಳಿ ನಡೆಸಲಿದ್ದಾರೆಂದು ತಾಲಿಬಾನ್ ಸಚಿವ ವಕೀಲ್ ಅಹ್ಮದ್ ಮುತ್ತಾ ವಕೀಲ್ ಅಪಹರಣಕಾರರಿಗೆ ಎಚ್ಚರಿಕೆ ನೀಡಿದ್ದಾರೆ.

'ಒತ್ತೆಯಾಳಾಗಿರುವ ಪ್ರಯಾಣಿಕರ ಪೈಕಿ ಇಬ್ಬರ ಕೈಕಾಲುಗಳನ್ನು ಕಟ್ಟಿಹಾಕಲಾಗಿದೆ. ತಮ್ಮ ಬೇಡಿಕೆಗಳನ್ನು ಈಡೇರಿಸಲು ವಿಳಂಬ ಮಾಡಿದಲ್ಲಿ ಅವರನ್ನು ಕೊಂದು ವಿಮಾನದಿಂದ ಹೊರ ಎಸೆಯಲಾಗುವುದು ಎಂದು ಅಪಹರಣಕಾರರು ಬೆದರಿಕೆ ಸಂದೇಶ ನೀಡಿದ ಕೂಡಲೇ ಸರ್ಕಾರದಿಂದ ಪ್ರತಿಕ್ರಿಯೆ ನೀಡಲಾಗಿದೆ' ಎಂದು ತಿಳಿಸಿದರು.

ಇದರ ಬೆನ್ನಲ್ಲೇ ಸಶಸ್ತ್ರ ಪಡೆಗಳು ವಿಮಾನವನ್ನು ಸುತ್ತುವರಿದವು.

50 ವರ್ಷಗಳ ಹಿಂದೆ

ಶನಿವಾರ, 28-12-1974

● ಭತ್ತ ಅಕ್ಕಿಯಾದಾಗ 4 ಕೆ.ಜಿ. ಮಾಯ

ಬೆಂಗಳೂರು, ಡಿ. 27– 'ಭತ್ತವನ್ನು ಅಕ್ಕಿ ಮಾಡಿಕೊಡುವ ಜವಾಬ್ದಾರಿ ಹೊತ್ತವರು ಪ್ರತಿ ಕ್ವಿಂಟಲ್‌ಗೆ ಮೂರು– ನಾಲ್ಕು ಕೆ.ಜಿ. ಅಕ್ಕಿ ಹೊಡೆಯುತ್ತಿದ್ದಾರೆ'.

ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ಅವರು ಈ ವಿಷಯವನ್ನು ಇಂದು ಇಲ್ಲಿ ತಿಳಿಸಿ 'ಅದರಲ್ಲಿ ಯಾರು ಯಾರು ಪಾಲುದಾರರೆಂಬುದನ್ನು ಹೊರಕ್ಕೆ ಹಾಕಬೇಕು' ಎಂದರು.

ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿ ಪ್ರಕಟಿಸುವ ಮಾಸಪತ್ರಿಕೆ– 'ಕೃಷಿ ಪೇಟೆ'ಯನ್ನು ಬಿಡುಗಡೆ ಮಾಡಿದ ಅರಸು, ಬೆಳೆಗಾರರಿಗೂ ಗ್ರಾಹಕರಿಗೂ ಮಧ್ಯೆ 'ಅಧಿಕ ಲಾಭ' ಪಡೆಯುತ್ತಿರುವ ಮಧ್ಯವರ್ತಿಗಳ ಚಟುವಟಿಕೆಗಳ ಬಗ್ಗೆ ಬೆಳಕು ಚೆಲ್ಲಲು ಕರೆಯಿತ್ತರು.

'ಬೆಲೆಗಳು ಏರಿವೆ. ಅವುಗಳ ಪ್ರಯೋಜನ ಯಾರಿಗೆ ಹೋಗಿದೆ? ಆಳವಾಗಿ ಅಧ್ಯಯನ ಮಾಡಿ ತಿಳಿವಳಿಕೆ ಕೊಡಿ, ಮಧ್ಯವರ್ತಿಗಳು ಯಾರು? ಸರ್ಕಾರದಲ್ಲಿ, ಬ್ಯಾಂಕ್‌ಗಳಲ್ಲಿ ಅವರ ಏಜೆಂಟರುಗಳು ಯಾರು? ಇದನ್ನೆಲ್ಲಾ ಬಹಿರಂಗಪಡಿಸಿದರೆ ನಾನು ಈ ಪತ್ರಿಕೆ ಬಿಡುಗಡೆ ಮಾಡಿದುದಕ್ಕೆ ಸಾರ್ಥಕ' ಎಂದರು.

ಎಲ್ಲ ಸಮಸ್ಯೆಗಳಿಗೂ ಸರ್ಕಾರವನ್ನು ಟೀಕಿಸುವುದನ್ನು ಖಂಡಿಸಿದ ಅವರು 'ನಮ್ಮನ್ನು ಬಯ್ಯುವುದರಿಂದ ಸಮಸ್ಯೆಗಳು ಪರಿಹಾರವಾಗುವುದಾದರೆ ಗಟ್ಟಿಯಾಗಿ ಬಯ್ಯಿರಿ. ಆದರೆ ಪರಿಹಾರ ಅಷ್ಟು ಸುಲಭವಾಗಿ ಸಿಕ್ಕುವುದಿಲ್ಲ. ನಮ್ಮನ್ನು ತೆಗೆದು ಇನ್ನೊಬ್ಬರು ಬಂದರೂ ಪರಿಹಾರವಾಗುವುದಿಲ್ಲ. ಈ ಬಗ್ಗೆ ಶಿಕ್ಷಣ ಅಗತ್ಯ' ಎಂದರು.

ಮಣ್ಣು ಗಣಿಗಾರಿಕೆ ದಂಧೆಯ ವಿರಾಟ್ ಸ್ವರೂಪ ಬೆಟ್ಟಗುಡ್ಡಗಳನ್ನು ನುಂಗುತ್ತಿದೆ

ಮಲೆನಾಡು ಮತ್ತು ಮಣ್ಣು ಮಾಫಿಯಾ

ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಮಲೆನಾಡು ಎಂದರೆ ಗುಡ್ಡ-ಬೆಟ್ಟಗಳಿಂದ ಕೂಡಿದ ಪ್ರದೇಶ. ಮಲೆನಾಡಿನ ಎಷ್ಟೋ ಹಳ್ಳಿಗಳಿಗೆ ಗುಡ್ಡದಿಂದ ಅಬ್ಬಿಯ ಮೂಲಕ ನಿರಂತರವಾಗಿ ಹರಿದುಬರುವ ನೀರೇ ಜೀವನಾಧಾರ. ಮಧ್ಯಪಶ್ಚಿಮಘಟ್ಟದ ವ್ಯಾಪ್ತಿಯಲ್ಲಿರುವ ಸಾಗರ, ಹೊಸನಗರ, ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಮಳೆ ಮಾರುತಗಳನ್ನು ತಡೆಯುವ ಬೆಟ್ಟ ಪ್ರದೇಶಗಳು ಕೆಲವು ದಂಧೆಕೋರರ ದುರಾಸೆಗೆ ಬಲಿಯಾಗುತ್ತಾ ವೇಗವಾಗಿ ಕರಗುತ್ತಿವೆ.

ಸಾಗರದ ತಾಳಗುಪ್ಪ ಬಯಲೆಂದು ಕರೆಯಲಾಗುವ ಸಾವಿರಾರು ಎಕರೆ ವಿಸ್ತಾರದ ಪ್ರದೇಶದಲ್ಲಿ ಭತ್ತ ಬೆಳೆಯುತ್ತಿದ್ದ ಜವುಗು ಗದ್ದೆಗಳು ಈಗ ಸನಿಹದ ಗುಡ್ಡದ ಮಣ್ಣನ್ನು ತುಂಬಿಸಿಕೊಂಡು ಬಡಾವಣೆಗಳಾಗುತ್ತಿವೆ. ಹೆದ್ದಾರಿಯ ಪಕ್ಕದಲ್ಲಿರುವ ಭೂಮಿಗೆ ಚಿನ್ನಕ್ಕಿಂತ ಹೆಚ್ಚು ಬೆಲೆ ಬಂದಿದೆ. ಸಾವಿರಾರು ಜನ ಸೇರಿ ಮಾಡುವಂತಹ ಕೆಲಸವನ್ನು ಯಂತ್ರಗಳು ಈಗ ಸುಲಭ ಮಾಡಿವೆ. ರಾತ್ರಿ ಇದ್ದ ಬೆಟ್ಟ ಬೆಳಗಾಗುವುದರಲ್ಲಿ 'ಕಳವು' ಆಗಿರುತ್ತದೆ. ಗಣಿ ಮಾಫಿಯಾದ ಅಟ್ಟಹಾಸಕ್ಕೆ ನಲುಗಿದ ಬಳ್ಳಾರಿಯ ಸ್ಥಿತಿ ಈಗ ಮಲೆನಾಡಿಗೆ ಬಂದಿದೆ. ನಗರದಂಚಿನ ಕೃಷಿಭೂಮಿಯ ಜೊತೆಯಲ್ಲಿ ಗುಡ್ಡಬೆಟ್ಟಗಳೂ ಭೂಮಾಫಿಯಾ ಪಾಲಾಗುತ್ತಿವೆ. ಮಲೆನಾಡಿನ ಪಾರಂಪರಿಕ ಅಡಿಕೆ ತೋಟಕ್ಕೆ ನಾಲ್ಕೈದು ವರ್ಷಕ್ಕೊಮ್ಮೆ ಮಣ್ಣು ನೀಡುವ ಪದ್ಧತಿ ಇದೆ. ಅಡಿಕೆ ತೋಟಗಳಂಚಿನ ಬೆಟ್ಟಗಳಿಂದ ಕೂಲಿಯಾಳುಗಳ ಸಹಾಯದಿಂದ ಮಣ್ಣನ್ನು ಅಗೆದು ತೋಟಕ್ಕೆ ಹಾಕುವುದು ರೂಢಿ. ಹಲವು ದಶಕಗಳಿಂದ ಈ ರೀತಿಯಲ್ಲಿ ತೆಗೆದ ಮಣ್ಣಿನ ಪ್ರಮಾಣ ಅತ್ಯಲ್ಪ ಹಾಗೂ ಇದು ಸುಸ್ಥಿರ ತೋಟಗಾರಿಕಾ ಪದ್ಧತಿಯೂ ಹೌದು. ಆದರೆ ಈಗ ಪರಿಸ್ಥಿತಿ ಬೇರೆಯೇ ಆಗಿದೆ.

ಸಾಗರದಲ್ಲಿ ಯುವಕರ ತಂಡವೊಂದು ಮಣ್ಣಿನ ವ್ಯವಹಾರದ ಕುರಿತು ಅಧ್ಯಯನ ನಡೆಸಿತು. ಹತ್ತು-ಹನ್ನೆರಡು ಹಳ್ಳಿಗಳಿಗೆ ಭೇಟಿ ನೀಡಿ, ಅಕ್ರಮವಾಗಿ ನಗರಕ್ಕೆ ಸಾಗಣೆಯಾದ ಮಣ್ಣಿನ ಪ್ರಮಾಣ ಹಾಗೂ ಅದರಲ್ಲಿ ಆದ ಹಣದ ವಹಿವಾಟು ಎಷ್ಟು ಎಂದು ಲೆಕ್ಕ ಹಾಕಿತು. ನಗರ-ಪಟ್ಟಣಗಳಿಗೆ ತಾಗಿಕೊಂಡಿರುವ ಹೊಲ-ಗದ್ದೆಗಳು ಈಗ ಬಡಾವಣೆಗಳಾಗಿ ಪರಿವರ್ತನೆಯಾಗುತ್ತಿವೆ. ಅಲ್ಲಿನ ನೆಲ ಸಮತಟ್ಟುಗೊಳಿಸುವ ಕೆಲಸಕ್ಕೆ ಲಕ್ಷಾಂತರ ಲೋಡು ಮಣ್ಣು ರವಾನೆಯಾಗಿದೆ. ಒಂದು ಲೋಡು ಮಣ್ಣಿಗೆ ₹ 1,700ರಿಂದ ₹ 2,000ದವರೆಗೂ ಬೆಲೆ ಇದೆ. ತಾಳಗುಪ್ಪ ಸಮೀಪದ ಕಿಬ್ಬಚ್ಚಲು ಎಂಬ ಹಳ್ಳಿಯ ಸುತ್ತಲಿರುವ ಮೂರು ಗುಡ್ಡಗಳು ಹೇಳಹೆಸರಿಲ್ಲದಂತೆ ಮಾಯವಾಗಿವೆ. ಹೆಗ್ಗೋಡು ಸಮೀಪದ ಹೊನ್ನೆಸರದ ಗುಡ್ಡದಿಂದ ಸಾಗಣೆಯಾದ ಮಣ್ಣಿನ ಬೆಲೆ ಒಂದು ಕೋಟಿ ರೂಪಾಯಿಗೂ ಹೆಚ್ಚು ಎಂಬ ಅಂಶ ಯುವಕರ ಅಧ್ಯಯನದಿಂದ ಗೊತ್ತಾಗಿದೆ.

ಗಣಿ ಇಲಾಖೆಯ ನಿಯಮದ ಪ್ರಕಾರ, ಯಾರೇ ಆಗಲಿ ಮೂರು ಅಡಿ ಆಳಕ್ಕಿಂತ ಹೆಚ್ಚು ಮಣ್ಣು ತೆಗೆಯುವ ಹಾಗಿಲ್ಲ. ಅದಕ್ಕೂ ಇಲಾಖೆಯ ಪರವಾನಗಿ ಬೇಕು. ಸರ್ಕಾರಕ್ಕೆ ರಾಜಧನ ಸಲ್ಲಿಸಬೇಕು. ಹಳ್ಳಿಗಳಲ್ಲಿ ಇದು ಯಾವುದೂ ಪಾಲನೆ ಆಗುತ್ತಿಲ್ಲ. ಗಣಿ ಇಲಾಖೆಯ ಅಧಿಕಾರಿಗಳು ಬಂದು ನೋಡುವುದೂ ಇಲ್ಲ. ಅಂತೆಯೇ ಮಣ್ಣು ತೆಗೆದು ಸಾಗಿಸಲು ಪರವಾನಗಿ ಪಡೆಯುವುದು ಈಗಿನ ಆಡಳಿತ ವ್ಯವಸ್ಥೆಯಲ್ಲಿ ಸುಲಭದ ಕೆಲಸವೂ ಅಲ್ಲ. ಆದಕಾರಣ, ತೋಟಕ್ಕೆ ಮಣ್ಣು ಬಳಸಲು ಕಂದಾಯ ಇಲಾಖೆ, ಅರಣ್ಯ ಇಲಾಖೆ ಹಾಗೂ ಗ್ರಾಮ ಪಂಚಾಯಿತಿ ಅಧಿಕಾರಿಗಳು ಅಡ್ಡಿ ಮಾಡುವುದಿಲ್ಲ. ಕೃಷಿಕರ ತೋಟದ ಕೆಲಸಗಳಿಗೆ ತೊಂದರೆಯಾಗಬಾರದು ಎಂಬ ಸದುದ್ದೇಶವೂ ಇದರ ಹಿಂದೆ ಇದ್ದಿರಬಹುದು. ಆದರೆ ಇಂತಹ ಔದಾರ್ಯವನ್ನು ಕೆಲವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಯಂತ್ರಗಳನ್ನು ಬಳಸಿಕೊಂಡು ತೋಟಕ್ಕೆ ಮಣ್ಣು ಹಾಕುವುದು ಕಡಿಮೆ ಖರ್ಚಿನ ಬಾಬತ್ತು ಎಂದು ಹಲವು ಕೃಷಿಕರು ಯಂತ್ರಗಳನ್ನು ಬಳಸಲು ಪ್ರಾರಂಭಿಸಿದರು. ಇದೇ ಹೊತ್ತಿನಲ್ಲಿ ನಗರದ ಬಡಾವಣೆಗಳಿಗೆ ಮಣ್ಣಿನ ಅಗತ್ಯ ಕಂಡುಬಂತು. ಒಂದಿಷ್ಟು ಮಣ್ಣನ್ನು ತೋಟಕ್ಕೆ ಹಾಕುವುದು, ಬಹಳಷ್ಟು ಮಣ್ಣನ್ನು ಬಡಾವಣೆ ನಿರ್ಮಿಸುವ ರಿಯಲ್ ಎಸ್ಟೇಟ್ ಕುಳಗಳಿಗೆ ಮಾರುವಂತಹ ದಂಧೆ ಪ್ರಾರಂಭವಾಯಿತು ಮತ್ತು ಅದು ಲಾಭದಾಯಕ ಅಂತ ಅನ್ನಿಸಿತು. ಬಡಾವಣೆಗೆ ಸಾಗಿಸುವ ಮಣ್ಣನ್ನು ತೋಟಕ್ಕೆ ಸಾಗಿಸುತ್ತಿದ್ದೇವೆ ಎಂದು ಹೇಳಿ ನುಣುಚಿಕೊಳ್ಳುವ ಹೊಸ ಉಪಾಯವನ್ನು ಕಂಡುಕೊಳ್ಳಲಾಯಿತು.

ಬೃಹತ್ ಯಂತ್ರಗಳನ್ನು ಬಳಸಿ ಎರ್ರಾಬಿರ್ರಿಯಾಗಿ ಮಣ್ಣು ತೆಗೆಯುವ ಪ್ರಕ್ರಿಯೆಯಲ್ಲಿ ಅನೇಕ ಅಮೂಲ್ಯವಾದ ಸಸ್ಯಪ್ರಭೇದಗಳ ಜೊತೆಗೆ ಇತರ ಜೀವಿಗಳ ಆವಾಸಸ್ಥಾನ ನಾಶವಾಗುತ್ತದೆ. ಮಳೆಗಾಲದಲ್ಲಿ ಮಣ್ಣಿನ ಸವಕಳಿಯಿಂದಾಗಿ ಕೆರೆಗಳಲ್ಲಿ ಹೂಳು ತುಂಬಿಕೊಳ್ಳುತ್ತದೆ. ಗುಡ್ಡ ಕುಸಿತದ ವಿದ್ಯಮಾನಗಳು ಇನ್ನಷ್ಟು ಹೆಚ್ಚುತ್ತವೆ. ಮಣ್ಣಿನ ಅಕ್ರಮ ಗಣಿಗಾರಿಕೆಯಿಂದ ಇಲ್ಲಿನ ಮಳೆಕಾಡುಗಳ ಪ್ರಮಾಣ ಕ್ಷೀಣಿಸುತ್ತಿದೆ. ಶಿವಮೊಗ್ಗಕ್ಕೆ 'ಮಲೆನಾಡಿನ ಹೆಬ್ಬಾಗಿಲು' ಎಂಬ ಬಿರುದು ಇದೆ. ಈ ಪ್ರಮಾಣದಲ್ಲಿ ಗುಡ್ಡಗಳನ್ನು ಕತ್ತರಿಸುತ್ತಾ ಹೋದಲ್ಲಿ, ಈ ಬಿರುದನ್ನು ಶಿವಮೊಗ್ಗ ಕಳೆದುಕೊಳ್ಳಲು ಬಹಳ ದಿನ ಬೇಕಾಗುವುದಿಲ್ಲ.

ದಿ ಫಾರೆಸ್ಟ್ ಸರ್ವೆ ಆಫ್ ಇಂಡಿಯಾದ ದ್ವೈವಾರ್ಷಿಕ ವರದಿಯಲ್ಲಿ, ಭಾರತದ ಅರಣ್ಯ ಪ್ರಮಾಣವು ಶೇಕಡ 2.91ರಿಂದ ಶೇ 3.41ರಷ್ಟು ಹೆಚ್ಚಾಗಿದೆ ಎಂದು ಹೇಳಿದೆ. ಏಕಜಾತಿಯ ನೆಡುತೋಪುಗಳು, ಅಡಿಕೆ, ತೆಂಗಿನ ಮರಗಳು, ಬಿದಿರು ಮೆಳೆಯಂತಹವನ್ನೂ ಅರಣ್ಯ ಎಂದು ಪರಿಗಣಿಸಲಾಗಿದೆ.

ಈ ವರದಿಯನ್ನು 'ಉತ್ಪ್ರೇಕ್ಷಿತ' ಎಂದು ಪರಿಸರ ಕ್ಷೇತ್ರದ ಪರಿಣತರು ದೂರಿದ್ದಾರೆ. ಅರಣ್ಯದ ವ್ಯಾಖ್ಯಾನ ವನ್ನು ಬದಲಾಯಿಸಿದ್ದರಿಂದ ಉಂಟಾದ ಹೆಚ್ಚಳ ಇದು ಎಂಬುದು ಅವರ ಅಭಿಪ್ರಾಯ.

ಶಿವಮೊಗ್ಗವು ಅತಿಹೆಚ್ಚು ಅರಣ್ಯ ಪ್ರದೇಶ ಒತ್ತುವರಿಯಾದ ಜಿಲ್ಲೆ ಎಂಬ ಕುಖ್ಯಾತಿಗೆ ಪಾತ್ರವಾಗಿದೆ. ಇಲ್ಲಿನ ಜನಪ್ರತಿನಿಧಿಗಳ ಒತ್ತಡಕ್ಕೆ ಮಣಿಯುವ ಅಧಿಕಾರಿಗಳು ಒತ್ತುವರಿ ತೆರವಿಗೆ ಕ್ರಮ ಕೈಗೊಳ್ಳಲು ಹಿಂದೇಟು ಹಾಕುತ್ತಾರೆ. ಕೇಂದ್ರದ ಅರಣ್ಯ ಕಾನೂನುಗಳನ್ನು ಮೀರಿ ಕರ್ನಾಟಕ ಸರ್ಕಾರವು ಮೂರು ಎಕರೆ ಅಥವಾ ಅದಕ್ಕಿಂತ ಕಡಿಮೆ ಅರಣ್ಯ ಒತ್ತುವರಿಯನ್ನು ತೆರವುಗೊಳಿಸುವಂತಿಲ್ಲ ಎಂದು ಆದೇಶಿಸಿದೆ. ಇದರ ಲಾಭ ಪಡೆದುಕೊಳ್ಳುವ ಬಲಾಢ್ಯರು ಬೇರೆ ಬೇರೆ ಹೆಸರಿನಲ್ಲಿ ತಮ್ಮ ಒತ್ತುವರಿಯನ್ನು ಮುಂದುವರಿಸುತ್ತಿದ್ದಾರೆ.

ಸಂವಿಧಾನದ ವಿಧಿ 21ರಲ್ಲಿ, ಪ್ರಜೆಗಳಿಗೆ ಆರೋಗ್ಯವಂತರಾಗಿ ಬದುಕುವ ಹಕ್ಕನ್ನು ಕಲ್ಪಿಸಲಾಗಿದೆ. ಸಾಮೂಹಿಕ ಆರೋಗ್ಯವನ್ನು ಕಾಪಾಡುವುದು, ಸ್ವಚ್ಛವಾದ ಪರಿಸರವನ್ನು ಕೊಡಮಾಡುವುದು ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಆಡಳಿತಗಳ ಹೊಣೆಯಾಗಿದೆ. ಯಾವ ಪ್ರದೇಶದಲ್ಲಿ ಶುದ್ಧವಾದ ಗಾಳಿ, ನೀರು ಲಭ್ಯವಿವೆಯೋ ಅಲ್ಲಿನ ಸಮುದಾಯದ ಆರೋಗ್ಯ ಸುಸ್ಥಿತಿಯಲ್ಲಿ ಇರುತ್ತದೆ ಎಂದು ವೈದ್ಯ ವಿಜ್ಞಾನ ನಿರ್ವಿವಾದವಾಗಿ ಪ್ರತಿಪಾದಿಸಿದೆ.

ಸರ್ಕಾರಿ ಜಾಗಗಳಲ್ಲಿ ನಡೆಯುತ್ತಿರುವ ಅಕ್ರಮ ಮಣ್ಣು ಗಣಿಗಾರಿಕೆಯನ್ನು ತಡೆಯುವುದು ಸಾಧ್ಯವಿಲ್ಲ ಎಂದು ಸ್ಥಳೀಯ ಅಧಿಕಾರಿಗಳು ಕೈಚೆಲ್ಲಿರುವುದು ಈ ದಂಧೆಯ ವಿರಾಟ್ ಸ್ವರೂಪವನ್ನು ಎತ್ತಿ ತೋರಿಸುತ್ತದೆ. ಹಾಗಿದ್ದರೆ ಇದಕ್ಕೆ ಪರಿಹಾರವೇನು?

ಸೊಪ್ಪಿನಬೆಟ್ಟ, ಕಾನು, ಕುಮ್ಕಿ, ಜಾಡಿ, ಹುಲ್ಲುಬನ್ನಿ ಹರಾಜು, ಗೋಮಾಳದಂತಹ ಪ್ರದೇಶಗಳನ್ನು ಕಂದಾಯ ಇಲಾಖೆಯ ಸ್ವತ್ತು ಎಂದು ಪರಿಗಣಿಸಲಾಗುತ್ತದೆ. ಈ ಪ್ರದೇಶಗಳು ಯಾವುದೇ ಕಾರಣಕ್ಕೂ ವೈಯಕ್ತಿಕವಾಗಿ ಯಾರೊಬ್ಬರ ಪಾಲಾಗದಂತೆ ನೋಡಿಕೊಳ್ಳುವ ಹೊಣೆ ಇಲಾಖೆಯದ್ದಾಗಿದೆ. ಸಾರ್ವಜನಿಕರಿಗೆ ಅಥವಾ ಸಮುದಾಯಕ್ಕೆ ಮಾತ್ರ ಈ ಸ್ವತ್ತುಗಳನ್ನು ಮೀಸಲಾಗಿಡಬೇಕು. ವಿಕೇಂದ್ರಿತ ವ್ಯವಸ್ಥೆಯಡಿ ಪ್ರತಿ ತಾಲ್ಲೂಕಿನಲ್ಲೂ ಗ್ರಾಮ ಪಂಚಾಯಿತಿಗಳು ಅಧಿಕಾರವನ್ನು ಹೊಂದಿವೆ. ಸ್ಥಳೀಯರ ಪ್ರತಿನಿಧಿಯಾಗಿ ಪಂಚಾಯಿತಿ ಸದಸ್ಯರಿರುತ್ತಾರೆ. ಸುಗಮ ಆಡಳಿತಕ್ಕೆ ಅನುವಾಗುವಂತೆ ಪಂಚಾಯಿತಿ ಕಚೇರಿ ಸಿಬ್ಬಂದಿ ಇರುತ್ತಾರೆ. ಸಮುದಾಯದ ಸ್ವತ್ತು ಕಬಳಿಕೆ ಆಗದಂತೆ ನೋಡಿಕೊಳ್ಳುವ ಹೊಣೆಯನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಬೇಕು ಎಂಬ ಪರಿಸರ ತಜ್ಞರು ಮತ್ತು ಸಾಮಾಜಿಕ ಕಾರ್ಯಕರ್ತರ ಸಲಹೆ ಯುಕ್ತವಾದುದು.

ಉತ್ತರ ಕನ್ನಡ ಜಿಲ್ಲೆಯ ಕುಮಟಾ ನಗರಕ್ಕೆ ಹೊಂದಿಕೊಂಡಂತೆ ಹಳಕಾರ ಎಂಬ ಹಳ್ಳಿಯಿದೆ. ಸುಮಾರು 200 ಮನೆಗಳಿರುವ ಆ ಹಳ್ಳಿಯ ವಿಶೇಷವೇನು ಗೊತ್ತೇ? ನೂರು ವರ್ಷಗಳಿಂದ ಅವರು ತಮ್ಮ ಹಳ್ಳಿಯ 225 ಎಕರೆ ಪ್ರದೇಶವನ್ನು ಹಳಕಾರ ಗ್ರಾಮ ಅರಣ್ಯ ಪಂಚಾಯಿತಿ ಅಡಿಯಲ್ಲಿ ಕಾಪಿಟ್ಟುಕೊಂಡು ಬಂದಿದ್ದಾರೆ. ಕೊಡಲಿ ಹಿಡಿದು ಕಾಡಿಗೆ ಹೋಗುವ ಹಾಗಿಲ್ಲ. ಒತ್ತುವರಿಯಂತೂ ಇಲ್ಲವೇ ಇಲ್ಲ. ಅಕ್ರಮ ಮಣ್ಣು ಸಾಗಣೆಗೆ ಅವಕಾಶವೇ ಇಲ್ಲ. ನಿಯಮ ಮೀರಿದರೆ ಸಮಿತಿಯವರು ದಂಡ ಹಾಕುತ್ತಾರೆ. ಕಾಡು ಸಂರಕ್ಷಣೆಯಲ್ಲಿ ಇದೊಂದು ಮೇರು ಮಾದರಿ.

ಚುರುಮುರಿ

ಕಸ್ಟಡಿ ಟೂರು!

● ತುರುವೇಕೆರೆ ಪ್ರಸಾದ್

'ಏನ್ರಲಾ, ಯಾರೂ ಎಂಡ್ರು ಮಕ್ಕಳ ಜೊತೆ ಇಯರ್ ಎಂಡ್ ಟೂರ್ ಓದಂಗ್ ಕಾಣಕಿಲ್ಲ, ಪೂರಾ ಕೋರಂ ಐತೆ' ಎಂದು ಗುದ್ಲಿಂಗ ಟವಲ್ ಕೊಡವಿ ಕುಕ್ಕರಿಸಿದ.

'ವರ್ಷದ್ ಕೊನೆಗೆ ಕಾಸು, ರಜಾ ಮಿಕ್ಕಿದ್ದೆಷ್ಟು, ಮಜಕ್ಕೆಷ್ಟು, ಸಾಲದ ವಜಾಗೆಷ್ಟು ಅನ್ನೋದನ್ನ ಹೆಂಡ್ತಿನೇ ಲೆಕ್ಕ ಹಾಕಿ ಬಜೆಟ್ ಮಾಡ್ತಾಳೆ. ನಮ್ದೇನ್ ನಡೀತದೆ?' ಎಂದ ಮಾಲಿಂಗ.

'ಬಜೆಟ್ ಮಾಡಿ ಹೊಸ ಸಾಲ ಪೀಕ್ಬೇಕು! ಮನೇಲಿ ಎಂಡ್ರು ಮಕ್ಳೆಲ್ಲಾ ಮಾಲ್ಡೀವ್ಸ್‌ಗೆ ಓಗಣ, ತೈಪೆಗೆ, ಕುಲುಮನಾಲಿಗೆ ಓಗಣ ಅಂತ ನುಲಿತಾವೆ ಕಣ್ಲಾ' ಎಂದು ಕಷ್ಟ ತೋಡಿಕೊಂಡ ಕಲ್ಲೇಶಿ.

'ಯಾಕಂತೆ? ನಮ್ ಕರ್ನಾಟಕ್ದಾಗೆ ಯಾವ್ದೂ ಟೂರಿಸ್ಟ್ ಪ್ಲೇಸ್ ಇಲ್ವಾ?'

'ನೀನೊಬ್ಬ ಗುಲ್ದು! ಅಲ್ಲಲೇ, ಶಕ್ತಿ ಯೋಜನೆ ಬಂದ್‌ಮ್ಯಾಗೆ ಎಂಗುಸ್ರು ವಾರ ವಾರ ಇಡೀ ಕನ್ನಡನಾಡಿನ ಇಂಚೂ ಇಂಚೂ ಬಿಡ್ದಂಗೆ ಸುತ್ ಬಂದವ್ರೆ. ಅದ್ಕೇ, ಓಗದಾದ್ರೆ ಫಾರಿನ್‌ಗೆ ಓಗಣ, ಇಲ್ಲ ಅಂದ್ರೆ ನಿಮ್ಗೆ ಯೋಗ್ಯತೆ ಇಲ್ಲ ಅಂತ ಒಪ್ಕಳಿ ಅಂತ ಮುಖ್ ಮಂಗಳಾರತಿ ಮಾಡ್ತಾವ್ರೆ'.

'ಸ್ಕೂಲ್ ಉಡುಗ್ರನ್ನ ಸ್ಟಡಿ ಟೂರ್‌ಗೆ ಕರ್ಕಂಡ್ ಓದಂಗಲ್ಲಪ್ಪ ಎಂಡ್ರು ಮಕ್ಳನ್ ಕರ್ಕೊಂಡ್ ಓಗೋದು'.

'ಅಯ್ಯೋ ಅದೂ ಈಗ ಸಲೀಸು ಅಲ್ಲ ಕಣ್ರಲಾ. ಈ ಡ್ಯಾಮ್‌ಸೈಟು, ಕಬ್ಬನ್‌ಪಾರ್ಕು ಎಲ್ಲ ಇದ್ದದ್ದೇ, ನಮ್ಮ ಮುಡಾ ಸೈಟು, ಥೀಂ ಪಾರ್ಕು ತೋರ್ಸಿ ಅಂತವೆ ಉಡುಗ್ರು. ಮೇಷ್ಟ್ರು ಎಚ್ಚಮನಾಯಕನ ತರ 'ನೋಡು ಬಾ ಮಗನೆ ನೋಡು ಬಾ, ಅಂದು ರಾಜವೈಭವದಿಂದ ಮೆರೆಯುತ್ತಿದ್ದ ಮುಡಾ ಇಂದು ಆಗಿದೆ ರಾಜಕೀಯ ಅಖಾಡ' ಅಂತ ಏಕಪಾತ್ರಾಭಿನಯ ಮಾಡ್ಬೇಕು. ಲೋ ಭದ್ರ, ನೀನ್ಯಾಕ್ಲಾ ಬಾಯಿಗೆ ಬೀಗ ಜಡ್ಕಂಡಿದೀಯ?'

'ಅವನು ಗೋವಾಗೆ ಹೋಗ್ಬಂದವ್ನೆ'.

'ಹೌದಾ? ಎಲಾ ಬಡ್ಡಿಮಗ್ನೆ... ಅದ್ಯಾವಾಗ ನಮ್ಮನ್ನೂ ಯಾಮಾರ್ಸಿ ಹೋಗ್ ಬಂದ್ಯೋ?

'ಅವನೆಲ್ಲಿ ಹೋಗಿದ್ದ? ಮೇಲ್ಗಡೆ ಮನೆಯೋರ್ ಜೊತೆ ಜಗಳ ಆಡಿದ್ನಂತೆ. ಆವಮ್ಮ ಪೊಲೀಸ್ ಕಂಪ್ಲೇಂಟ್ ಕೊಟ್ಟಿದ್ರಂತೆ. ಪೊಲೀಸ್ನೋರು ಇವನ್ನ ಎತ್ತಾಕ್ಕೊಂಡ್ ಅಲ್ಲಿ ಇಲ್ಲಿ ಸುತ್ತಾಡ್ಸಿ ಗೋವಾಗಂಟ ಕರ್ಕೊಂಡ್ ಓಗಿ ತಂದ್‌ಬಿಟ್ಟವ್ರೆ! ಮಕ್ಕುದ್ದು ಸ್ಟಡಿ ಟೂರು, ಇವನ್ದು ಕಸ್ಟಡಿ ಟೂರು' ಎಂದ ಪರ್ಮೇಶಿ.

ಎಲ್ಲಾ ಗೊಳ್ಳನೆ ನಕ್ಕರು.

ಸಂಗತ

ಅರಿವಿನ ಬೆಳಕು ಮೂಡಲಿ

ನಿಸರ್ಗ ನಿಯಮದ ಪ್ರಕಾರ ಬರುವ ಸಾವನ್ನು ಸ್ವಾಗತಿಸಬೇಕು. ಆದರೆ ಬದುಕಿಗೆ ತಾವಾಗಿಯೇ ಅಂತ್ಯ ಹಾಡುವ ಅವಿವೇಕತನವನ್ನು ಕೈಬಿಡಬೇಕು

● ಪ.ರಾಮಕೃಷ್ಣ ಶಾಸ್ತ್ರಿ

ಹೊಸ ವರ್ಷದ ಹೊಸಿಲಲ್ಲಿ ನಾವಿದ್ದೇವೆ. 'ಹಳೆಯದನ್ನು ಮರೆತುಬಿಡು ಕಹಿಯ ನೆನಹನು, ಹೊಸ ಮಣೆ ಏರುವಾಗ ನೆನಪಿಡು ಬರುವ ಬದುಕನು' ಎಂಬ ಕವಿವಾಣಿಯ ಹಾಗೆ ಹಳೆಯ ಕಹಿ ನೆನಪುಗಳನ್ನು ಮರೆತುಬಿಡಬೇಕು ನಿಜ. ಆದರೆ ಎಷ್ಟೇ ಪ್ರಯತ್ನಿಸಿದರೂ ಮನವ ಕಾಡುವ ದುರ್ಘಟನೆಗಳು 'ಮುಂದಿನ ಹಾದಿಯಲ್ಲೂ ಮುಳ್ಳುಗಳಿವೆ, ಎಚ್ಚರಿಕೆಯಿಂದ ಹೆಜ್ಜೆಯಿಡಬೇಕು' ಎಂದು ಮತ್ತೆ ಮತ್ತೆ ಎಚ್ಚರಿಸುತ್ತವೆ.

ಎಷ್ಟೊಂದು ನಿಷ್ಪಾಪಿ ಮಕ್ಕಳು ತಂದೆ– ತಾಯಿಯ ಅರೆಕ್ಷಣದ ಮಾನಸಿಕ ಗೋಜಲಿನ ಪರಿಣಾಮವಾಗಿ ಕ್ರೂರ ಸಾವನ್ನು ಪಡೆಯುವಂತಾಯಿತು. ಅರೆಕ್ಷಣ ಮನಸ್ಸನ್ನು ನಿಯಂತ್ರಿಸಿದ್ದರೂ ಆತ್ಮಹತ್ಯೆಯ ನಿರ್ಧಾರ ಬದಲಾಗುತ್ತಿತ್ತು. ಬದುಕಿ ಬಾಳಬೇಕಾದ ಜೀವಗಳು ಅರ್ಧದಲ್ಲೇ ಅಂತ್ಯವಾಗುತ್ತಿರಲಿಲ್ಲ. ಗಂಡನ ಹತ್ಯೆಗೆ ಸಂಚು ಹೂಡಿದ ಪತ್ನಿ, ಸತಿಯನ್ನು ಕೊಲೆಗೈದ ಪತಿ ಇಬ್ಬರೂ ಸೆರೆಮನೆ ಸೇರಿ ಅವರ ಮಕ್ಕಳು ತಬ್ಬಲಿಗಳಾಗುವ ದುಃಸ್ಥಿತಿ ಬೇಕಾಗಿರಲಿಲ್ಲ.

ಮನೆಯಿಂದ ಹೊರಟಾಗ ಪ್ರವಾಸದ ಸಂಭ್ರಮ. ಸವಿನೆನಪಿಗಾಗಿ ಕಾತರಿಸುವ ಮನಸ್ಸು. ಆದರೆ ಆದದ್ದೇನು? ಸೆಲ್ಫಿ ತೆಗೆಯುವ ಹವ್ಯಾಸ ಹರಿವ ನೀರಿಗೆ ನೂಕುವಂತಾಯಿತು. ಕಡಲರಾಜನ ಅಬ್ಬರವನ್ನು ಸನಿಹದಿಂದ ನೋಡಿ ಖುಷಿಪಡುತ್ತೇವೆ ಎಂದು ತೆರೆಗಳೊಂದಿಗೆ ಆಟವಾಡಲು ಹೋದ ವಿದ್ಯಾರ್ಥಿಗಳು ಬೊಬ್ಬಿರಿಯುವ ತೆರೆಗಳ ಅಪ್ಪುಗೆಯಲ್ಲಿ ಮೈಮರೆತರಲ್ಲ! ತಪ್ಪಿಸಬಹುದಿತ್ತು ಎಂದು ಆನಂತರ ಎಷ್ಟೇ ಪರಿತಪಿಸಿದರೂ ಅನಾಹುತಗಳು ನಡೆದೇಹೋದವು.

ಮಳೆಗಾಲದ ಮೇಘಮಾಲೆ ಆಳೆತ್ತರದ ಗುಡ್ಡವನ್ನೇ ಮುಂದೆ ನೂಕಿ, ಹೊಟ್ಟೆಪಾಡಿಗಾಗಿ ದುಡಿಯುತ್ತಿದ್ದ ಜೀವಗಳು ಹಾಗಿರಲಿ ದೇಹಗಳೂ ಸಿಗದೆ ಜಲ ಸಮಾಧಿಯಾಗುವಂತೆ ಮಾಡಿತು. ಪತ್ರಿಕೆಗಳಲ್ಲೋ ವಾಹಿನಿಗಳಲ್ಲೋ ಸುದ್ದಿಯನ್ನು ಓದಿ ಅರೆಕ್ಷಣ ಮರುಕಪಟ್ಟವರು ಇರಬಹುದು. ಆದರೆ ಸಂಬಂಧಿಕರನ್ನು ಕಳೆದುಕೊಂಡು ಬದುಕಿಡೀ ಕಂಬನಿಯ ಗುಟುಕನ್ನು ನುಂಗುತ್ತಿರುವ ಆಪ್ತರಿಗೆ ಜೋರು ಮಳೆ ಎಂದರೆ ಘೋರ ನೆನಪುಗಳ ಬುತ್ತಿಯನ್ನು ಕೆದಕಬಹುದು.

ಹೃದಯಾಘಾತ ಅದೆಷ್ಟೋ ಮಂದಿ ಯುವಕರ ಬದುಕಿಗೆ ಕೊಳ್ಳಿಯಿಟ್ಟಿತು. ಮದುವೆಗೆ ಒಡವೆ– ವಸ್ತ್ರ ಖರೀದಿಸಲು ಹೊರಟಿದ್ದ ಯುವಕ ದಾರಿಯಲ್ಲಿ ಕುಸಿದು ಸಾವು, ಬಸ್ ಚಾಲಕ ಕರ್ತವ್ಯನಿರತನಾಗಿದ್ದಾಗಲೇ ಕುಸಿದು ಸಾವು... ಯಮ ಎಷ್ಟೊಂದು ನಿರ್ದಯಿ ಅನಿಸುವಂತಹ ಪ್ರಕರಣಗಳು. ಬಾಳಿ ಬದುಕಬೇಕಿದ್ದವರು ಎಂದು ನಾವು ತೀರ್ಮಾನಿಸಬಹುದು. ಆದರೆ ಕಾಲಪುರುಷನಿಗೆ ಕರುಣೆ ಇಲ್ಲ. ಯಮ ಕೊಡಲಿ ಹಿಡಿದು ಹೊರಟನೆಂದರೆ ಫಲ ಬರುವ ಮರವನ್ನೇ ಕತ್ತರಿಸಿಯಾನು.

ಅಪಘಾತಗಳೂ ಹಾಗೆಯೇ. ಎದುರಿನ ರಸ್ತೆಯಲ್ಲಿ ಸಾಗುತ್ತಿದ್ದ ಯಮಭಾರದ ಕಂಟೇನರ್, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು, ಚಲಿಸುತ್ತಿದ್ದ ಕಾರೊಂದರ ಮೇಲೆಯೇ ಉರುಳಿ ಇಡೀ ಕುಟುಂಬವನ್ನು ಸರ್ವನಾಶ ಮಾಡಬೇಕಾಗಿರಲಿಲ್ಲ. ಸರಿದು ಹೋದ ಈ ವರ್ಷದ ದಿನಗಳತ್ತ ಕಣ್ಣುಹಾಯಿಸಿದರೆ ಬೇಜವಾಬ್ದಾರಿಯ ವಾಹನ ಚಾಲನೆ ಅನೇಕ ಮನೆಗಳ ಬೆಳಗುವ ಜ್ಯೋತಿಯನ್ನೇ ಆರಿಸಿಬಿಟ್ಟಿರುವುದು ತಿಳಿಯುತ್ತದೆ. ಸೌಲಭ್ಯಗಳು ಹೆಚ್ಚಿದಷ್ಟೂ ಜನಸಂಖ್ಯಾ ನಿಯಂತ್ರಣಕ್ಕೆ ಅದುವೇ ಮೂಲವಾಗುತ್ತಿದೆ. ವಿದ್ಯುತ್ ತಂತಿ ತುಳಿದು ಪ್ರವಹಿಸುತ್ತಿರುವ ವಿದ್ಯುತ್‌ಗೆ ಬಲಿಯಾದವರಿದ್ದಾರೆ. ಮರಣಮೃದಂಗ ಬಾರಿಸಿದಾಗ, ಬೆಳಗುವ ವಿದ್ಯುತ್ತೇ ಹಲವು ಮನೆಗಳನ್ನು ಶಾಶ್ವತವಾಗಿ ಕತ್ತಲಿಗೆ ದೂಡಿಬಿಟ್ಟಿದೆ.

ಸಾವು ಗೆಲ್ಲಲಾಗದ್ದು ಎಂಬುದು ನಿಜ. ಆದರೆ ಮಾನವಕೃತ ತಪ್ಪುಗಳೇ ನಿರಪರಾಧಿಗಳ ಬದುಕನ್ನು ಕಮರಿಸುವಂತಹ ಪ್ರಕರಣಗಳು ನಡೆಯಬಾರದಿತ್ತು ಎಂದು ಅನ್ನಿಸಿದರೆ ಖಂಡಿತ ತಪ್ಪಲ್ಲ.



ನಿಸರ್ಗ ನಿಯಮದ ಪ್ರಕಾರ ಬರುವ ಸಾವನ್ನು ಸ್ವಾಗತಿಸಬೇಕು. ಆದರೆ ಕೈಯ್ಯಾರೆ ಬದುಕಿಗೆ ಅಂತ್ಯ ಹಾಡುವ ಅವಿವೇಕತನವನ್ನು ಕೈಬಿಡಬೇಕು. ಬದುಕಿ ಸಾಧಿಸಬೇಕು. ಇದ್ದು ಗೆಲ್ಲಬೇಕು. 'ಕತ್ತಲು ಕಂಡು ಭಯಪಡುವುದೇತಕೆ, ಕತ್ತಲ ಹಿಂದೆ ಬೆಳಕಿಹುದು, ಕಾಯುವ ತಾಳ್ಮೆಯ ಸಾಧಿಸಿಕೊಂಡರೆ ಅಂತಿಮ ಗೆಲುವು ನಿನಗಿಹುದು' ಎನ್ನುವ ಕವಿವಾಣಿಯ ಹಾಗೆ ನಮಗೆ ನಾವೇ ಅರಿವಿನ ಬೆಳಕು ಮೂಡಿಸಿಕೊಳ್ಳಬೇಕು. ಎಷ್ಟೋ ಮಂದಿಯ ಆತ್ಮಹತ್ಯೆಗೆ ಹೇಡಿತನ ಬಿಟ್ಟರೆ ಅನ್ಯ ಕಾರಣವಿರುವುದಿಲ್ಲ. ಸಾಯುವ ಮೊದಲು ಹೇಳಿಕೆಯನ್ನು ಧ್ವನಿಮುದ್ರಣ ಮಾಡಿ ಬಳಿಕ ಸಾವಿಗೆ ಶರಣಾಗುವವರು ಸಾಧಿಸುವುದಾದರೂ ಏನಿದೆ? ಬದುಕಿ ತೋರಿಸಬೇಕು. ಸಾವನ್ನು ಸೋಲಿಸಬೇಕು.

ಹೊಸ ವರ್ಷ ಸಾವು ಗೆಲ್ಲುವ ದಿನಗಳನ್ನು ತರುವಂತಾಗಬೇಕು. ಆತ್ಮಹತ್ಯೆ ಮತ್ತು ಕೊಲೆ ಎರಡೂ ಸ್ವಯಂಕೃತ ಅಪರಾಧಗಳು. ಅದಕ್ಕೆ ಎಡೆ ನೀಡಬಾರದು. ಒಂದೇ ಒಂದು ಆಸೆಯ ಎಳೆ ವಿವೇಕವಾಗಿ ನಮ್ಮನ್ನು ಎಚ್ಚರಿಸಬೇಕು. ಕೊಂದವ ಜೈಲು ಸೇರಿ, ಬಳಿಕ ಬಿಡುಗಡೆಯಾಗಿ ಹೊರಬರಬಹುದು. ಆದರೆ ಒಂದು ಸ್ನೇಹದ ಅನುಬಂಧದಲ್ಲಿ, ಪ್ರೀತಿಯ ಮಾತಿನಲ್ಲಿ, ಶಾಂತಿ, ಸಮಾಧಾನದಿಂದ ನಡೆಸುವ ಬದುಕಿನಲ್ಲಿ ಇರುವ ಸುಖ, ಜೀವಹರಣದಲ್ಲಿ ಯಾವತ್ತಿಗೂ ಲಭಿಸಲಾರದು. ಯಾರದೋ ಬದುಕನ್ನು ಕಿತ್ತುಕೊಂಡು ಹಗೆ ತೀರಿಸುವ ಮನೋವೃತ್ತಿ ಶಾಶ್ವತ ಸಮಾಧಾನದ ಬುತ್ತಿಯನ್ನು ಕಟ್ಟಿಕೊಡಲಾರದು.

ಬರುವ ವರ್ಷ ಸಾವನ್ನು ಗೆಲ್ಲುವ ಸಂವತ್ಸರವಾಗಲಿ. ಸಾವಿನ ಮನೆಯ ಕದ ತಟ್ಟದ, ಬದುಕಿನ ಚಿಗುರು ನಳನಳಿಸುವ ನವ ವಸಂತದ ಹರುಷ ತರಲಿ.

ವಾಚಕರ ವಾಣಿ

ನಿಜವಾಯಿತೇ ಮಾಧ್ಯಮಗೋಷ್ಠಿಯ ಹೇಳಿಕೆ?

ನರೇಗಾ, ಆಹಾರ ಭದ್ರತೆ ಯೋಜನೆ, ಆರ್‌ಟಿಐ, ಆರ್‌ಟಿಇ ಯೋಜನೆಗಳು ಮಾತ್ರವಲ್ಲದೆ ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳನ್ನು ಸಹ ಮನಮೋಹನ ಸಿಂಗ್ ಪ್ರಧಾನಿಯಾಗಿದ್ದ ಅವಧಿಯಲ್ಲಿ ಪ್ರಾರಂಭಿಸಲಾಯಿತು ಎಂಬ ವಿಷಯ ಬಹಳ ಜನಕ್ಕೆ ತಿಳಿದಿಲ್ಲ. ವೈ.ವಿ.ರೆಡ್ಡಿ ಅವರು ಮನಮೋಹನ ಸಿಂಗ್ ಅವರ ಅಧಿಕಾರಾವಧಿಯಲ್ಲಿ ರಿಸರ್ವ್ ಬ್ಯಾಂಕಿನ ಗವರ್ನರ್ ಹಾಗೂ ಹಣಕಾಸು ಆಯೋಗದ ಅಧ್ಯಕ್ಷರಾಗಿದ್ದರು. ಆಗ ಸಿಂಗ್ ಅವರು ಯಾವುದೇ ಕಾರಣಕ್ಕೂ ಐಎಂಎಫ್‌ನಿಂದ ಸಹಾಯ ಪಡೆಯದೇ ಆರ್ಥಿಕತೆಯನ್ನು ನಿಭಾಯಿಸಲು ರೆಡ್ಡಿಯವರಿಗೆ ಸೂಚಿಸಿದ್ದರಂತೆ. ಭಾರತದಂತಹ ದೇಶದಲ್ಲಿ ಹಣಕಾಸು ಆಯೋಗದ ಅಧ್ಯಕ್ಷರಂತಹ ಪ್ರಮುಖ ಹುದ್ದೆಗಳಿಗೆ ನೇಮಕವಾಗುವವರು ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಒಪ್ಪುವ ಹಾಗೂ ಗೌರವಿಸುವ ವ್ಯಕ್ತಿಗಳಾಗಿರಬೇಕು ಎಂದು ತಿಳಿಸಿದ್ದರಂತೆ. ಎಂ.ಎಸ್.ಶ್ರೀರಾಮ್ ಅವರು ಕನ್ನಡದಲ್ಲಿ ನಿರೂಪಿಸಿರುವ ವೈ.ವಿ.ರೆಡ್ಡಿ ಅವರ ಆತ್ಮಕಥೆ 'ಭಿನ್ನ ಅಭಿಪ್ರಾಯ' ಎಂಬ ಪುಸ್ತಕದಲ್ಲಿ ಈ ಪ್ರಸಂಗವನ್ನು ವಿವರಿಸಲಾಗಿದೆ.

ಮನಮೋಹನ ಸಿಂಗ್ ಅವರ ನಿಧನಕ್ಕೆ ದೇಶದ ಪ್ರಮುಖರ ಸಂತಾಪ ಸೂಚಕ ಸಂದೇಶಗಳನ್ನು ನೋಡಿದಾಗ, ಅವರು ಕೊನೆಯ ಮಾಧ್ಯಮಗೋಷ್ಠಿಯಲ್ಲಿ ಹೇಳಿದ್ದ 'ಚರಿತ್ರೆ ನನಗೆ ನ್ಯಾಯ ಒದಗಿಸೀತು' ಎಂಬ ಮಾತು ಸತ್ಯವಾಗಿದೆ ಎನಿಸುತ್ತದೆ.

ಟಿ.ಜಯರಾಂ, ಕೋಲಾರ

ಸಾಧನೆಯ ಸ್ಮರಣೆಗೆ ಸಿಗಲಿ ಆದ್ಯತೆ

ರಾಷ್ಟ್ರೀಯ ನಾಯಕರು ತೀರಿಕೊಂಡಾಗ ಸಂತಾಪ ಸೂಚಿಸಿ ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯ. ಹಾಗೆಂದ ಮಾತ್ರಕ್ಕೆ ಶಾಲೆ-ಕಾಲೇಜು, ಕಚೇರಿಗಳಿಗೆ ರಜೆ ಘೋಷಿಸುವುದು ತರವಲ್ಲ. ಅದರ ಬದಲಾಗಿ ಆ ವ್ಯಕ್ತಿಯ ಸಾಧನೆಗಳನ್ನು ಮಕ್ಕಳಿಗೆ, ಜನಸಾಮಾನ್ಯರಿಗೆ ಮನದಟ್ಟು ಮಾಡಿಸುವ ಕೆಲಸ ಆಗಬೇಕು. ಆ ಮೂಲಕ ದಿವಂಗತರ ವ್ಯಕ್ತಿತ್ವ ಅನಾವರಣಗೊಳ್ಳಬೇಕು, ಅವರು ದೇಶಕ್ಕೆ ಸಲ್ಲಿಸಿದ ಸೇವೆ ಸ್ಮರಣೆಗೆ ಒಳಗಾಗಬೇಕು.

ರಜೆ ಘೋಷಿಸುವುದರಿಂದ ಜನಸಾಮಾನ್ಯರ ಕೆಲಸಗಳಿಗೆ ಮತ್ತಷ್ಟು ತೊಡರು ಉಂಟಾಗುತ್ತದೆ. ಆಡಳಿತ ಯಂತ್ರಕ್ಕೆ ಕೆಲಸದ ಭಾರ ಇನ್ನಷ್ಟು ಹೆಚ್ಚುತ್ತದೆ. ಅಬ್ದುಲ್ ಕಲಾಂ ಅವರು ತೀರಿಕೊಂಡಾಗ ಯಾವುದೇ ರೀತಿಯ ರಜೆಯನ್ನು ಘೋಷಣೆ ಮಾಡಿರಲಿಲ್ಲ. ಏಕೆಂದರೆ ತಾವು ತೀರಿಕೊಂಡಾಗ ರಜೆ ಘೋಷಿಸಬಾರದೆಂದು ಕಲಾಂ ತಿಳಿಸಿದ್ದರು. ಅವರೊಬ್ಬ ವಿಜ್ಞಾನಿಯಾಗಿ ಸಮಯದ ಮಹತ್ವವನ್ನು ಅರಿತಿದ್ದರು. ಅವರು ತೀರಿಕೊಂಡ ದಿನ ನಮ್ಮಲ್ಲಿ, ಶಿಕ್ಷಕರಾಗಿ ಆಯ್ಕೆಗೊಂಡವರ ಪ್ರಮಾಣಪತ್ರಗಳ ಪರಿಶೀಲನೆ ನಡೆಯುತ್ತಿತ್ತು. ಅಂದು ರಜೆ ಘೋಷಣೆಯಾಗಿದ್ದರೆ ಆ ಕಾರ್ಯ ಸ್ಥಗಿತಗೊಳ್ಳುತ್ತಿತ್ತು. ದೂರದ ಊರಿನಿಂದ ಬಂದವರಿಗೆ ಆರ್ಥಿಕ ಹೊರೆ ಆಗುತ್ತಿತ್ತು. ಕಲಾಂ ಭಾವಚಿತ್ರಕ್ಕೆ ಪುಷ್ಪ ನಮನ ಅರ್ಪಿಸಿ ಧನ್ಯರಾದೆವು. ಕೆಲಸ ಮಾಡುವ ಮೂಲಕ ಗಣ್ಯರಿಗೆ ಗೌರವ ಕೊಡುವ ಪರಿಪಾಟ ನಮ್ಮದಾಗಲಿ. ಆಗ 'ಮರಣವೇ ಮಹಾನವಮಿ'ಯಾಗಲು ಸಾಧ್ಯವಾಗಬಹುದು.

ಕೆ.ರಾಜೇಂದ್ರ ಕುಮಾರ್ ಡಿ. ಮುದ್ನಾಳ್, ಯಾದಗಿರಿ

ಪಕ್ಷಗಳಿಗೆ ದೇಣಿಗೆ: ಜನಸಾಮಾನ್ಯರಿಗೆ ಹೊರೆ

ಆಡಳಿತಾರೂಢ ಬಿಜೆಪಿಗೆ 2023- 24ನೇ ಸಾಲಿನಲ್ಲಿ ₹ 2,604 ಕೋಟಿ ದೇಣಿಗೆ ಬಂದಿರುವ ಮತ್ತು ಇತರ ಪಕ್ಷಗಳಿಗೂ ಕೋಟಿಗಟ್ಟಲೆ ದೇಣಿಗೆ ಬಂದಿರುವ ಬಗ್ಗೆ ವರದಿಯಾಗಿದೆ (ಪ್ರ.ವಾ., ಡಿ. 27). ರಾಜಕೀಯ ಪಕ್ಷಗಳು ಹೆಚ್ಚು ಹೆಚ್ಚು ದೇಣಿಗೆ ಪಡೆಯುವುದು ಉತ್ತಮ ಅರ್ಥವ್ಯವಸ್ಥೆಯ ಲಕ್ಷಣವಲ್ಲ. ಇದು ಪ್ರಜಾಪ್ರಭುತ್ವದಲ್ಲಿ ಹಗಲು ದರೋಡೆ. ದೇಣಿಗೆ ಕೊಡುವ ಕಾರ್ಪೊರೇಟ್ ಸಂಸ್ಥೆಗಳು ತಮಗೆ ಲಾಭವಿಲ್ಲದೆ ಸುಮ್ಮನೆ ಹಣ ನೀಡುತ್ತವೆಯೇ? ಯಾವುದೋ ಒಂದು ರೂಪದಲ್ಲಿ ಅವರಿಗೆ ಅನುಕೂಲವಾಗುವಂತೆ ಸರ್ಕಾರ ನೋಡಿಕೊಂಡಾಗ ಮಾತ್ರ ಕಾರ್ಪೊರೇಟ್ ಸಂಸ್ಥೆಗಳಿಗೆ ದೇಣಿಗೆ ಕೊಡುವ ಶಕ್ತಿ ಬರುತ್ತದೆ. ಇದರಿಂದ ಜನಸಾಮಾನ್ಯರಿಗೆ ಯಾವುದೋ ಒಂದು ಬಗೆಯಲ್ಲಿ ಬರೆ ಬೀಳುತ್ತದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಭಾಷೆ ಬಳಕೆ: ಕಡುಬು ತಿನ್ನುವ ಪ್ರಯತ್ನವಾಗಲಿ

ಬಹುಮಂದಿ ಕಕ್ಷಿದಾರರ ಪಾಲಿಗೆ ನ್ಯಾಯ ನಿರ್ಣಯವನ್ನು 'ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತೆ' ಅಗಿಸುವುದು ಬೇಡ ಎಂದು ಕನ್ನಡದಲ್ಲಿ ತೀರ್ಪು ನೀಡುವ ಬಗ್ಗೆ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಕಡುಬನ್ನು ತಿನ್ನಿಸುವ ಪ್ರಯತ್ನವನ್ನೇ ಮಾಡದೆ, ಮಗುವಾಗಿದ್ದಾಗ ಪ್ರಾರಂಭ ಮಾಡಿದ ದ್ರವಾಹಾರವನ್ನೇ ಸೇವಿಸುವ ಅಭ್ಯಾಸ ಮಾಡಿದಲ್ಲಿ ಈ ಮಾತು ಅನ್ವಯಿಸಬಹುದೇನೊ. ಹಂತ ಹಂತವಾಗಿ ಘನಾಹಾರದ ಅಭ್ಯಾಸ ಮಾಡಿಸಿದಲ್ಲಿ ಕಡುಬು ಆನಂದದಾಯಕವಾಗಿ ಗಂಟಲಲ್ಲಿ ಇಳಿಯಲು ಹಾಗೂ ಅದರ ಸವಿಯನ್ನು ಸವಿಯಲು ಸಾಧ್ಯವಾಗುತ್ತದೆ. ಎರಡು ಸಾವಿರ ವರ್ಷಗಳ ಇತಿಹಾಸವಿರುವ, ದ್ರಾವಿಡ ಭಾಷೆಗಳಲ್ಲಿ ಪ್ರಮುಖವಾದ ಕನ್ನಡ, ಇತರ ಯಾವುದೇ ಭಾಷೆಗಿಂತ ಭಾಷಾ ಸಂಪತ್ತಿನಲ್ಲಿ ಕಡಿಮೆಯಿಲ್ಲ. ಆದರೆ ಅದರ ಬಳಕೆಯಲ್ಲಿ ಕೆಲವರು ತೋರುತ್ತಿರುವ ಕೀಳರಿಮೆಯು ಈ ಭಾಷೆಯಲ್ಲಿ ಅಡಗಿರುವ ಶಬ್ದಭಂಡಾರವನ್ನು ಅರಿಯಲು ತೊಡಕಾಗುತ್ತಿದೆ.

ಮಗುವಿಗೆ ಮಾತು ಬರುವುದಿಲ್ಲವೆಂದು ಅದರೊಡನೆ ಸಂಭಾಷಿಸದೆ ಬರೀ ಸನ್ನೆಯನ್ನು ಮಾಡುತ್ತಿದ್ದರೆ ಅದು ಮಾತು ಮತ್ತು ಭಾಷೆಯನ್ನು ಕಲಿಯಲು ಸಾಧ್ಯವೇ? ಹಾಗೆಯೇ ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಮಾನ್ಯ ಸ್ಥಾನ ನೀಡಿ ಎಲ್ಲ ಸ್ತರಗಳಲ್ಲಿಯೂ ಬಳಸಿದಲ್ಲಿ ಭಾಷೆ ಬೆಳವಣಿಗೆಯಾಗುತ್ತದೆ. ಕರ್ನಾಟಕದಲ್ಲಿ ಜೀವಿಸಲು, ವ್ಯವಹರಿಸಲು, ಬದುಕಲು ಬೇರೆ ಭಾಷೆಯ ಅನಿವಾರ್ಯ ಯಾವುದೇ ಕಾರಣಕ್ಕೂ ಕಂಡುಬರಬಾರದು. ಅದು ನ್ಯಾಯಾಲಯದಲ್ಲಿನ ವಾದವಾಗಲಿ, ತೀರ್ಪಾಗಲಿ, ಕೊನೆಗೆ ವೈದ್ಯರು, ಎಂಜಿನಿಯರ್‌ಗಳು ನೀಡುವ ಸಲಹೆ, ಸೂಚನೆಗಳಾಗಿರಲಿ... ಬಳಕೆಯಿದ್ದಲ್ಲಿ ಖಂಡಿತ ಕಷ್ಟಕರವಾಗುವುದಿಲ್ಲ.

ಕೆ.ಎಂ.ನಾಗರಾಜು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರೂಪಾಯಿ ಮೌಲ್ಯ ಕುಸಿತ ಏಕೆ ಮತ್ತು ಹೇಗೆ?



ಡಾಲರ್ ಎದುರು ರೂಪಾಯಿಯ ಮೌಲ್ಯ ದಾಖಲೆಯ ಮಟ್ಟಕ್ಕೆ ಕುಸಿತ ಕಂಡಿದೆ. ಒಂದು ಡಾಲರ್‌ಗೆ ₹85 ಗಡಿ ದಾಟಿ ಮುನ್ನಡೆದಿದೆ. ಸಹಜವಾಗಿಯೇ, ಇದು ದೇಶದ ಆರ್ಥಿಕತೆಯ ಮೇಲೆ ಬೀರಬಹುದಾದ ಪರಿಣಾಮಗಳ ಬಗ್ಗೆ ಚರ್ಚೆ ಆರಂಭವಾಗಿದೆ. ರೂಪಾಯಿ ಮೌಲ್ಯ ಕುಸಿತದಿಂದ ಕೆಲವೊಮ್ಮೆ ಸಕಾರಾತ್ಮಕ ಬೆಳವಣಿಗೆಗಳು ಘಟಿಸಬಹುದಾದರೂ, ನಕಾರಾತ್ಮಕ ಪರಿಣಾಮಗಳೇ ಹೆಚ್ಚು. ರೂಪಾಯಿ ಮೌಲ್ಯ ಕುಸಿತಕ್ಕೆ ದೇಶದ ಒಳಗಿನ ಮತ್ತು ಹೊರಗಿನ ಬೆಳವಣಿಗೆಗಳೆರಡೂ ಕಾರಣವಾಗಿವೆ

• ಬಿ.ವಿ. ಶ್ರೀನಾಥ್, ಸೂರ್ಯನಾರಾಯಣ ವಿ.

ಅಮೆರಿಕದ ಡಾಲರ್ ಎದುರು ಭಾರತದ ರೂಪಾಯಿ ಮೌಲ್ಯವು ಶುಕ್ರವಾರ ಹಿಂದೆಂದೂ ಇಲ್ಲದ ರೀತಿಯಲ್ಲಿ ಪತನಗೊಂಡಿದ್ದು, ₹85.48ಕ್ಕೆ ಕುಸಿದಿದೆ. ಭಾರತದಲ್ಲಿ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶ ಬಂದ ನಂತರ ಜೂನ್ 4ರಂದು ರೂಪಾಯಿ ಮೌಲ್ಯ ಶೇ 0.3ರಷ್ಟು ಕುಸಿದಿತ್ತು. ಅದಾದ ನಂತರ ಈ ವಾರ ಮತ್ತೆ ಶೇ 0.3 ಕುಸಿದಿದ್ದು, ಎಂಟು ವಾರಗಳಿಂದ ಸತತ ಪತನ ಮುಂದುವರಿದಿದೆ.

ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಇದು ನಿರೀಕ್ಷಿತವೇ ಆಗಿತ್ತು. ಡಾಲರ್ ಎದುರು ರೂಪಾಯಿ ಮೌಲ್ಯ ಶೇ 8–ಶೇ 10ರಷ್ಟು ಕುಸಿಯಬಹುದು ಎಂದು ಭಾರತೀಯ ಸ್ಟೇಟ್ ಬ್ಯಾಂಕ್ ಅಂದಾಜಿಸಿತ್ತು. ಜತೆಗೆ ಅಮೆರಿಕದ ಆರ್ಥಿಕ ಬೆಳವಣಿಗೆ ಉತ್ತಮವಾಗಿದ್ದು, ಫೆಡರಲ್ ರಿಸರ್ವ್ ಕೈಗೊಂಡ ಕೆಲವು ಉಪಕ್ರಮಗಳಿಂದಲೂ ಡಾಲರ್ ಮೌಲ್ಯ ಏರುತ್ತಿದೆ.

ಡಾಲರ್ ಎದುರು ರೂಪಾಯಿ ಮೌಲ್ಯದ ಕುಸಿತಕ್ಕೆ ಹಲವು ದಶಕಗಳ ಇತಿಹಾಸವಿದೆ. ಬ್ರಿಟಿಷರ ಕಾಲದಲ್ಲಿ ಭಾರತದ ವ್ಯವಹಾರವು ಪೌಂಡ್ ಮೂಲಕ ನಡೆಯುತ್ತಿತ್ತು. ಆಗ ಒಂದು ಪೌಂಡ್‌ಗೆ ₹13 ಮೌಲ್ಯವಿತ್ತು. ಸ್ವಾತಂತ್ರ್ಯ ಗಳಿಸಿದ ನಂತರ ಭಾರತವು ರೂಪಾಯಿ ಮೂಲಕವೇ ವ್ಯವಹಾರ ನಡೆಸತೊಡಗಿತು. 1947ರಲ್ಲಿ ಡಾಲರ್ ಮತ್ತು ರೂಪಾಯಿ ಮೌಲ್ಯಗಳಲ್ಲಿ ಹೆಚ್ಚಿನ ವ್ಯತ್ಯಾಸ ಇರಲಿಲ್ಲ. ಕ್ರಮೇಣ ರೂಪಾಯಿ ಮೌಲ್ಯವನ್ನು ಡಾಲರ್‌ಗೆ ಹೋಲಿಸಿ ನೋಡುವ ಪರಿಪಾಟ ಆರಂಭವಾಯಿತು.

1950ರಿಂದ 1960ರ ನಡುವೆ ಡಾಲರ್ ಎದುರು ಮೊದಲ ಬಾರಿಗೆ ರೂಪಾಯಿಯ ಮೌಲ್ಯ ಕುಸಿತ ಗಮನಾರ್ಹ ಪ್ರಮಾಣದಲ್ಲಿ ನಡೆಯಿತು. ಆಗ ತಾನೇ ಸ್ವಾತಂತ್ರ್ಯ ಪಡೆದಿದ್ದ ದೇಶದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕಾಗಿತ್ತು. ಅದಕ್ಕೆ ಅಗತ್ಯವಾದಷ್ಟು ಹಣ ಸರ್ಕಾರದ ಬೊಕ್ಕಸದಲ್ಲಿ ಇರಲಿಲ್ಲ. ಆಗ ಡಾಲರ್ ಎದುರು ರೂಪಾಯಿ ಮೌಲ್ಯ ₹4.75 ಆಗಿತ್ತು.

ಎರಡನೆಯ ಬಾರಿಗೆ ರೂಪಾಯಿ ಮೌಲ್ಯ ಕುಸಿತಕ್ಕೆ ಒಳಗಾಗಿದ್ದು 1962ರಿಂದ 1965ರ ನಡುವೆ. ಆ ಅವಧಿಯಲ್ಲಿ ಭಾರತವು ಚೀನಾ ಮತ್ತು ಪಾಕಿಸ್ತಾನದ ಜತೆಗೆ ಯುದ್ಧ ನಡೆಸಬೇಕಾಗಿ ಬಂತು. ಜತೆಗೆ, ಆಗಲೂ ಸರ್ಕಾರದ ಹಣಕಾಸಿನ ಸ್ಥಿತಿ ಅಷ್ಟೇನೂ ಉತ್ತಮವಾಗಿರಲಿಲ್ಲ. ಅದು ಸಾಲದು ಎಂಬಂತೆ, ದೇಶದ ಹಲವು ಭಾಗಗಳಲ್ಲಿ ಬರ ಕಾಣಿಸಿಕೊಂಡು, ಕೃಷಿ ಉತ್ಪಾದನೆ ಕುಂಠಿತಗೊಂಡಿತ್ತು. ಇವೆಲ್ಲದರ ಕಾರಣದಿಂದ ಡಾಲರ್ ಎದುರು ರೂಪಾಯಿ ಮೌಲ್ಯವು ಕುಸಿದಿತ್ತು.

ಮೂರನೆಯ ಬಾರಿಗೆ, 1973ರಲ್ಲಿ ಅರಬ್ ರಾಷ್ಟ್ರಗಳು ಪೆಟ್ರೋಲಿಯಂ ಉತ್ಪಾದನೆಯನ್ನು ಕಡಿತಗೊಳಿಸುವ ನಿರ್ಧಾರ ಮಾಡಿದವು. ಅದೇ ಸಂದರ್ಭದಲ್ಲಿ ದೇಶದಲ್ಲಿ ರಾಜಕೀಯ ಅಸ್ಥಿರತೆ ಉಂಟಾಗಿತ್ತು. ಪ್ರಧಾನಿ ಆಗಿದ್ದ ಇಂದಿರಾ ಅವರ ಅಂಗರಕ್ಷಕನಿಂದಲೇ ಹತರಾಗಿದ್ದರು. ಅದರ ಬೆನ್ನಲ್ಲೇ ದೇಶದ ಹಲವೆಡೆ ಗಲಭೆಗಳು ಕಾಣಿಸಿಕೊಂಡಿದ್ದವು. ಹೀಗೆ ಆಂತರಿಕ ಮತ್ತು ಬಾಹ್ಯ ಕಾರಣಗಳಿಂದ ಡಾಲರ್ ಎದುರು ರೂಪಾಯಿ ಮೌಲ್ಯವು ಕುಸಿತ ಕಂಡಿತ್ತು.

ಹೀಗೆ ಕಾಲದಿಂದ ಕಾಲಕ್ಕೆ, ಹಲವು ಕಾರಣಗಳಿಂದ ನಿಧಾನಕ್ಕೆ ಡಾಲರ್ ಎದುರು ರೂಪಾಯಿ ದುರ್ಬಲಗೊಳ್ಳುತ್ತಾ ಸಾಗಿತು. ಅಮೆರಿಕವು ಆರ್ಥಿಕವಾಗಿ ಕ್ರಮೇಣ ಬಲಶಾಲಿಯಾಗುತ್ತಾ ಸಾಗಿದ್ದು ಕೂಡ ಒಂದು ಪ್ರಮುಖ ಕಾರಣ. 1990ರ ಹೊತ್ತಿಗೆ ಇದು ದೊಡ್ಡ ಮಟ್ಟದಲ್ಲಿಯೇ ಹೆಚ್ಚಾಗಿ ₹17.50 ಮುಟ್ಟಿತ್ತು. 1990ರ ಆರ್ಥಿಕ ಬಿಕ್ಕಟ್ಟಿನ ನಂತರ ಒಂದು ಡಾಲರ್‌ನ ಮೌಲ್ಯವು ₹25.92ಕ್ಕೆ ಏರಿತ್ತು. ಅಲ್ಲಿಂದ ಡಾಲರ್ ಎದುರು ಸತತವಾಗಿ ಕುಸಿಯುತ್ತಲೇ ಸಾಗಿದ ರೂಪಾಯಿಯ ಮೌಲ್ಯವು ಈಗ ₹85.48 ತಲುಪಿ, ಕುಸಿತದಲ್ಲಿ ದಾಖಲೆಯನ್ನೇ ನಿರ್ಮಿಸಿದೆ.

ರೂಪಾಯಿ ಮೌಲ್ಯ ಕುಸಿದಾಗ ಸರ್ಕಾರ ತೆಗೆದುಕೊಳ್ಳುವ ಕೆಲವು ನಿರ್ಧಾರಗಳಿಂದಾಗಿ ಕೆಲವೊಮ್ಮೆ ಆರ್ಥಿಕತೆಯ ಮೇಲೆ ಒಳ್ಳೆಯ ಪರಿಣಾಮಗಳೂ ಆಗುವುದಿದೆ. ಆದರೆ, ಭಾರತದಲ್ಲಿ ಸದ್ಯ ಅಂಥ ಸಾಧ್ಯತೆ ಕಾಣುತ್ತಿಲ್ಲ. ಡಾಲರ್ ಎದುರು ರೂಪಾಯಿ ಕುಸಿಯಲು ಜಾಗತಿಕ ಮತ್ತು ದೇಶೀಯ ಕಾರಣಗಳೆರಡೂ ಇವೆ. ಭಾರತದ ಆರ್ಥಿಕ ಬೆಳವಣಿಗೆಯು ಮೂರು ತ್ರೈಮಾಸಿಕದಿಂದ ಅತ್ಯಂತ ಕಡಿಮೆ ಮಟ್ಟಕ್ಕೆ ಕುಸಿದಿದೆ. ವ್ಯಾಪಾರದ ಕೊರತೆ ಅಂತರವು ಹಿಗ್ಗಿದೆ.

ಇನ್ನೊಂದೆಡೆ, ಅಮೆರಿಕದ ಫೆಡರಲ್ ರಿಸರ್ವ್, ಹಣದುಬ್ಬರ ಕಡಿಮೆ ಮಾಡಲು ಬಡ್ಡಿ ದರಗಳನ್ನು ಹೆಚ್ಚಿಸುತ್ತಿದೆ. ಇದರಿಂದ ಜಾಗತಿಕ ಹೂಡಿಕೆದಾರರಿಗೆ ಡಾಲರ್ ಹೆಚ್ಚು ಆಕರ್ಷಕವಾಗಿ ಕಾಣುತ್ತಿದೆ. ಜತೆಗೆ ತೆರಿಗೆ ಕಡಿತದಂಥ ನೀತಿಗಳಿಂದ ಅಮೆರಿಕವು ಹೂಡಿಕೆಯನ್ನು ಉತ್ತೇಜಿಸುತ್ತಿದೆ. ಇದು ರೂಪಾಯಿ ಸೇರಿದಂತೆ ಇತರ ದೇಶಗಳ ಕರೆನ್ಸಿಗಳ ಮೇಲೆ ತೀವ್ರ ಒತ್ತಡ ಹೇರುತ್ತಿದೆ. ಡಾಲರ್ ವಿನಿಮಯಕ್ಕಾಗಿ ಭಾರತವು ಅಪಾರ ಮೊತ್ತದ ಹಣವನ್ನು ವೆಚ್ಚ ಮಾಡುತ್ತಿದೆ. ಅಮೆರಿಕದ ಆರ್ಥಿಕ ಬೆಳವಣಿಗೆಯ ಮುಂದೆ ಇತರ ದೇಶಗಳ ಕರೆನ್ಸಿಗಳ ಮೌಲ್ಯವೂ ಕುಸಿದಿದೆ. ಆದರೆ, ಯೂರೊ ಸೇರಿದಂತೆ ಇತರ ಹಲವು ದೇಶಗಳ ಕರೆನ್ಸಿಗಳ ಎದುರು ಭಾರತದ ರೂಪಾಯಿ ಮೌಲ್ಯವು ಉತ್ತಮವಾಗಿದೆ ಎನ್ನುವುದು ಗಮನಾರ್ಹ. ಮೌಲ್ಯ ಕುಸಿತದ ನಡುವೆಯೂ ಡಾಲರ್ ಎದುರು ರೂಪಾಯಿಯು ಏಷ್ಯಾದ ಕರೆನ್ಸಿಗಳ ನಡುವೆ ಅತ್ಯುತ್ತಮ ಸಾಧನೆ ಮಾಡಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಆಧಾರ: ಪಿಟಿಐ, ರಾಯಿಟರ್ಸ್, ಆರ್‌ಬಿಐ ವೆಬ್‌ಸೈಟ್, ರಾಜ್ಯಸಭೆಯಲ್ಲಿ ಸಚಿವರ ಉತ್ತರ

ಪರಿಣಾಮ ಏನೇನು?

ರೂಪಾಯಿ ಮೌಲ್ಯ ಕುಸಿತದಿಂದಾಗಿ ಕಚ್ಚಾ ತೈಲದಂತಹ ಅತ್ಯಂತ ಅವಶ್ಯಕವಾದ ಸರಕುಗಳ ಆಮದು ವೆಚ್ಚ ಹೆಚ್ಚಾಗುತ್ತದೆ. ಇದರಿಂದ ಹಣದುಬ್ಬರ ಏರಿಕೆಯಾಗುತ್ತದೆ. ಇದು ಜನರ ಜೇಬಿಗೆ ಹೊರೆ ಉಂಟು ಮಾಡುತ್ತದೆ. ವಿದೇಶದ ಸೇವೆಗಳಿಗೂ ಹೆಚ್ಚು ಬೆಲೆ ತೆರಬೇಕಾಗುತ್ತದೆ. ಉದಾಹರಣೆಗೆ ಅಮೆರಿಕ ಅಥವಾ ಬೇರೆ ದೇಶಗಳಿಗೆ ಪ್ರವಾಸ ಹೋಗುವವರು ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಅದೇ ರೀತಿ ವಿದೇಶದಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ವೆಚ್ಚದಲ್ಲೂ ಏರಿಕೆಯಾಗುತ್ತದೆ. ವಿದೇಶದಿಂದ ಸಾಲ ಪಡೆದ ಭಾರತೀಯ ಕಂಪನಿಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗುತ್ತದೆ. ಡಾಲರ್ ಮೌಲ್ಯ ಏರಿಕೆಯಿಂದ ಸಾಲದ ಕಂತಿನ ಮೊತ್ತ ಹೆಚ್ಚಾಗುತ್ತದೆ. ಇದರಿಂದಾಗಿ ಕಂಪನಿಯ ಬ್ಯಾಲೆನ್ಸ್ ಶೀಟ್ ಮೇಲೆ ಮತ್ತು ಅವುಗಳು ಮಾಡುವ ಹೂಡಿಕೆಯ ಮೇಲೆ ನಕಾರಾತ್ಮಕ ಪರಿಣಾಮವಾಗುತ್ತವೆ. ರೂಪಾಯಿ ಮೌಲ್ಯ ಕುಸಿತದಿಂದ ವಿದೇಶಿ ಹೂಡಿಕೆದಾರರು ಭಾರತದಲ್ಲಿ ಬಂಡವಾಳ ಹೂಡಿಕೆಗೆ ಹಿಂದೇಟು ಹಾಕುವ ಸಂದರ್ಭವೂ ಇರುತ್ತದೆ. ಇದು ವಿದೇಶಿ ನೇರ ಬಂಡವಾಳ ಹೂಡಿಕೆ ಹರಿವಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಹಣದುಬ್ಬರದ ಹೆಚ್ಚಳ, ಬಂಡವಾಳ ಹೂಡಿಕೆ ಕಡಿಮೆಯಾಗುವುದರಿಂದ ಒಟ್ಟಾರೆಯಾಗಿ ದೇಶದ ಆರ್ಥಿಕ ಪ್ರಗತಿ ಕುಂಠಿತವಾಗುತ್ತದೆ. ಈ ವರ್ಷದ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದ ಜಿಡಿಪಿಯು ಎರಡು ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿಯಲು ಪ್ರಮುಖ ಕಾರಣ ಹಣದುಬ್ಬರ ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಏಕೆ ಕುಸಿಯುತ್ತಿದೆ?

ವ್ಯಾಪಾರ ಕೊರತೆ: ಒಂದು ರಾಷ್ಟ್ರದ ಆಮದು ಮತ್ತು ರಫ್ತಿನ ನಡುವೆ ಇರುವ ಅಂತರ. ಇದು ಆ ದೇಶದ ಕರೆನ್ಸಿಯ ಮೌಲ್ಯವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕರೆನ್ಸಿಯ ಮೌಲ್ಯವನ್ನು ಹೆಚ್ಚಿಸಬೇಕು ಎಂದರೆ, ರಫ್ತು ಹೆಚ್ಚಿಸಬೇಕು. ಭಾರತವು ಕಚ್ಚಾ ತೈಲ ಸೇರಿದಂತೆ ಹಲವು ಪ್ರಮುಖ ಸರಕುಗಳನ್ನು ಆಮದು ಮಾಡಿಕೊಳ್ಳುತ್ತಿದ್ದು, ಅದಕ್ಕಾಗಿ ಡಾಲರ್‌ಗಳ ಲೆಕ್ಕದಲ್ಲಿ ಅಪಾರ ಹಣ ವಿನಿಯೋಗಿಸುತ್ತಿದೆ. ಭಾರತದ ವ್ಯಾಪಾರ ಕೊರತೆಯು ಹಿಗ್ಗುತ್ತಿದ್ದು, ರೂಪಾಯಿ ಮೌಲ್ಯದ ಮೇಲೆ ಪರಿಣಾಮ ಬೀರುತ್ತಿದೆ.

ಹಣದುಬ್ಬರ: ಹಣದುಬ್ಬರದ ಹೆಚ್ಚಳದಿಂದ ಒಂದು ಕರೆನ್ಸಿಯ ಕೊಳ್ಳುವ ಶಕ್ತಿಯು ಕುಂಠಿತವಾಗುತ್ತದೆ. ಹಣದುಬ್ಬರವನ್ನು ಹತೋಟಿಗೆ ತರಲು ಆರ್‌ಬಿಐ ಬಡ್ಡಿ ದರವನ್ನು ಒಂದು ಸಾಧನವನ್ನಾಗಿ ಬಳಸಿಕೊಳ್ಳುತ್ತದೆ. ಅದು ವಿನಿಯಮ ದರದ ಮೇಲೆ ಪರಿಣಾಮ ಬೀರುತ್ತದೆ. ಹಣದುಬ್ಬರ ತಗ್ಗಿಸಲು ಆರ್‌ಬಿಐ ಕೆಲವೊಮ್ಮೆ ನಗದು ಮೀಸಲು ಅನುಪಾತ (ಸಿಆರ್‌ಆರ್) ಕಡಿಮೆ ಮಾಡುವುದೂ ಉಂಟು.

ರಾಜಕೀಯ ಪರಿಸ್ಥಿತಿ: ಅಂತರರಾಷ್ಟ್ರೀಯ ಸಂಬಂಧಗಳು ಮತ್ತು ರಾಜಕೀಯ ಸ್ಥಿರತೆಯು ಆ ರಾಷ್ಟ್ರದ ಕರೆನ್ಸಿಯ ಮೌಲ್ಯ ಮತ್ತು ಹೂಡಿಕೆದಾರರ ವಿಶ್ವಾಸದ ಮೇಲೆ ಪರಿಣಾಮ ಬೀರುತ್ತವೆ. ಒಂದು ದೇಶದ ರಾಜಕೀಯ ಪರಿಸ್ಥಿತಿಯು ಸ್ಥಿರವಾಗಿದ್ದು, ಆರ್ಥಿಕತೆಯ ಅಡಿಪಾಯ ಉತ್ತಮವಾಗಿದ್ದರೆ, ಹೆಚ್ಚು ವಿದೇಶಿ ಬಂಡವಾಳ ಹರಿದುಬರುತ್ತದೆ. ಜತೆಗೆ, ಕರೆನ್ಸಿ ಮೌಲ್ಯವೂ ಹೆಚ್ಚುತ್ತದೆ.

ಬಡ್ಡಿ ದರ: ಯಾವುದೇ ಒಂದು ದೇಶದತ್ತ ಹೂಡಿಕೆದಾರರನ್ನು ಸೆಳೆಯುವ ಅಂಶಗಳಲ್ಲಿ ಅಧಿಕ ಬಡ್ಡಿ ದರವೂ ಒಂದಾಗಿದೆ. ವ್ಯಾಪಾರಿಗಳು ಹೆಚ್ಚಿನ ಲಾಭ ಬಯಸುವುದರಿಂದ ಸಹಜವಾಗಿಯೇ ದೇಶದ ಕರೆನ್ಸಿಗೆ ಬೇಡಿಕೆ ಹೆಚ್ಚುತ್ತದೆ. ಬೇಡಿಕೆ ಹೆಚ್ಚುತ್ತಿದ್ದಂತೆಯೇ ಅದರ ಮೌಲ್ಯವೂ ಹೆಚ್ಚುತ್ತದೆ. ವಿದೇಶಿ ವಿನಿಮಯದ ಮಾರುಕಟ್ಟೆಯಲ್ಲಿ ಆ ಕರೆನ್ಸಿಯ ಮೌಲ್ಯ ಹೆಚ್ಚುತ್ತದೆ.

ವಿದೇಶಿ ನೇರ ಬಂಡವಾಳ ಹೂಡಿಕೆ : ಒಂದು ದೇಶವು ವಿದೇಶಿ ಬಂಡವಾಳ ಹೂಡಿಕೆದಾರರಿಗೆ ಯಾವ ರೀತಿ ಕಾಣುತ್ತದೆ ಎನ್ನುವುದು ಕೂಡ ಆ ದೇಶದ ಕರೆನ್ಸಿಯ ಮೌಲ್ಯವನ್ನು ನಿರ್ಧರಿಸುತ್ತದೆ. ಎಫ್‌ಡಿಐ ದರವು ಹೆಚ್ಚಾಗಿದ್ದರೆ ಕರೆನ್ಸಿಯ ಮೌಲ್ಯವು ಹೆಚ್ಚಾಗಬಹುದು. ಎಫ್‌ಡಿಐ ದರವು ಕುಸಿದರೆ, ಕರೆನ್ಸಿ ದರವೂ ಕುಸಿಯಬಹುದು.

ರಫ್ತು ವಲಯಕ್ಕೆ ಅನುಕೂಲ

ರೂಪಾಯಿ ದುರ್ಬಲಗೊಳ್ಳುವುದು ದೇಶದ ಅರ್ಥವ್ಯವಸ್ಥೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದು ನಿಜವಾದರೂ, ಇದರಿಂದ ರಫ್ತು ವಲಯಕ್ಕೆ ಅನುಕೂಲವಾಗುತ್ತದೆ ಎಂಬುದು ಆರ್ಥಿಕ ತಜ್ಞರ ವಾದ. ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ರಫ್ತನ್ನು ಹೆಚ್ಚು ಸ್ಪರ್ಧಾತ್ಮಕಗೊಳಿಸಬಹುದು. ಇದರಿಂದಾಗಿ ಭಾರತದ ಸರಕು ಮತ್ತು ಸೇವೆಗಳಿಗೆ ಬೇಡಿಕೆ ಸೃಷ್ಟಿಯಾಗುತ್ತದೆ. ದೇಶಗಳ ನಡುವಿನ ವ್ಯಾಪಾರ ಕೊರತೆಯ ಅಂತರ ಕಡಿಮೆಯಾಗುತ್ತದೆ. ವಿದೇಶಿ ಕಂಪನಿಗಳು ಡಾಲರ್‌ನಲ್ಲಿ ಹಣ ಪಾವತಿ ಮಾಡುವುದರಿಂದ ಭಾರತದ ಕಂಪನಿಗಳು ರೂಪಾಯಿ ಲೆಕ್ಕದಲ್ಲಿ ಹೆಚ್ಚು ಹಣ ಗಳಿಸುತ್ತವೆ. ಭಾರತೀಯ ಐಟಿ ವಲಯ, ವಾಹನ ಉದ್ಯಮ, ಫಾರ್ಮಾ, ಆಭರಣ, ಬೆಲೆಬಾಳುವ ರತ್ನಗಳನ್ನು ರಫ್ತು ಮಾಡುವ ಕಂಪನಿಗಳು ಹೆಚ್ಚು ಲಾಭ ಪಡೆಯುತ್ತವೆ. ರೂಪಾಯಿ ಮೌಲ್ಯ ಕಡಿಮೆಯಾದರೆ ವಿದೇಶದಲ್ಲಿ ನೆಲಸಿರುವ ಭಾರತೀಯರಿಗೆ ರೂಪಾಯಿ ಲೆಕ್ಕದಲ್ಲಿ ಹೆಚ್ಚು ಹಣ ಸಿಗುತ್ತದೆ. ಆ ಹಣ ಭಾರತಕ್ಕೆ ರವಾನೆಯಾದರೆ, ದೇಶದ ಅರ್ಥವ್ಯವಸ್ಥೆಗೂ ಒಳ್ಳೆಯದು ಎನ್ನುವ ವಾದವೂ ಇದೆ.

ಇಳಿದ ವಿದೇಶಿ ವಿನಿಮಯ ಮೀಸಲು
(ಕೋಟಿ ಡಾಲರ್‌ಗಳಲ್ಲಿ)

ದಿನಾಂಕ	ಮೀಸಲು	
2024, ಸೆ.13	68,945	(₹57.84 ಲಕ್ಷ ಕೋಟಿ)
2024, ಸೆ.27	70,488	(₹59 ಲಕ್ಷ ಕೋಟಿ)
2024, ಅ.25	68,480	(₹57.57 ಲಕ್ಷ ಕೋಟಿ)
2024, ನ.29	65,809	(₹55.60 ಲಕ್ಷ ಕೋಟಿ)
2024, ಡಿ.13	65,286	(₹55.36 ಲಕ್ಷ ಕೋಟಿ)
2024, ಡಿ.20	64,439	(₹54.78 ಲಕ್ಷ ಕೋಟಿ)

ಕುಸಿತ ತಡೆಯುವುದು ಹೇಗೆ?

ರೂಪಾಯಿ ಮೌಲ್ಯದಲ್ಲಿ ಗಣನೀಯ ಕುಸಿತವಾದಾಗ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಧ್ಯಪ್ರವೇಶ ಮಾಡುವುದಕ್ಕೆ ಅವಕಾಶ ಇದೆ. ರೂಪಾಯಿ ಮೌಲ್ಯದ ಸ್ಥಿರತೆ ಕಾಪಾಡಲು ಅದು ವಿವಿಧ ಕ್ರಮಗಳನ್ನು ಕೈಗೊಳ್ಳುತ್ತದೆ.

ಸಾಮಾನ್ಯವಾಗಿ ತನ್ನ ವಿದೇಶಿ ವಿನಿಯಮ ಮೀಸಲು ಸಂಗ್ರಹದಿಂದ ಡಾಲರ್‌ಗಳನ್ನು ಮಾರಾಟ ಮಾಡಿ ರೂಪಾಯಿ ಮೌಲ್ಯದ ಬಲವರ್ಧನೆಗೆ ಯತ್ನಿಸುತ್ತದೆ. ಡಾಲರ್‌ಗಳ ಮಾರಾಟದಿಂದ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಪೂರೈಕೆ ಹೆಚ್ಚಾಗಿ, ಅದಕ್ಕಿರುವ ಬೇಡಿಕೆ ಕಡಿಮೆಯಾಗುತ್ತದೆ. ಆ ಮೂಲಕ ಅದರ ಮೌಲ್ಯದಲ್ಲಿ ಇಳಿಕೆಯಾಗುತ್ತದೆ.

ಅಕ್ಟೋಬರ್‌ನಿಂದೀಚೆಗೆ ಭಾರತದ ವಿದೇಶಿ ವಿನಿಮಯ ಮೀಸಲು ಮೊತ್ತ ಕಡಿಮೆಯಾಗುತ್ತಿದ್ದು, ರೂಪಾಯಿ ಮೌಲ್ಯ ಕುಸಿಯುತ್ತಿರುವುದನ್ನು ತಡೆಯಲು ಆರ್‌ಬಿಐ ಮಧ್ಯಪ್ರವೇಶಿಸಿರುವುದನ್ನುಇದು ತೋರಿಸುತ್ತದೆ ಎಂದು ಕರೆನ್ಸಿ ತಜ್ಞರು ಪ್ರತಿಪಾದಿಸುತ್ತಿದ್ದಾರೆ.

ಈ ವರ್ಷದ ಸೆಪ್ಟೆಂಬರ್ ತಿಂಗಳ ಅಂತ್ಯಕ್ಕೆ ಭಾರತದ ವಿದೇಶಿ ವಿನಿಮಯ ಮೀಸಲು ಮೊತ್ತ ಸಾರ್ವಕಾಲಿಕ ಗರಿಷ್ಠ 70,488 ಕೋಟಿ ಡಾಲರ್‌ಗೆ (₹59 ಲಕ್ಷ ಕೋಟಿ) ಏರಿತ್ತು. ಡಿಸೆಂಬರ್ 20ರ ವೇಳೆಗೆ ಇದು 64,439 ಕೋಟಿ ಡಾಲರ್‌ಗೆ (₹54.78 ಲಕ್ಷ ಕೋಟಿ) ಇಳಿಕೆಯಾಗಿದೆ. ಹಿಂದಿನ ವಾರಕ್ಕೆ ಹೋಲಿಸಿದರೆ (ಡಿ.13) ವಿದೇಶಿ ವಿನಿಮಯ ಮೀಸಲು ಮೊತ್ತ198 ಕೋಟಿ ಡಾಲರ್ ಕಡಿಮೆಯಾಗಿದೆ. ಈ ಮೀಸಲಿನಲ್ಲಿ ವಿದೇಶಿ ಕರೆನ್ಸಿ ಆಸ್ತಿಗಳು ಸಿಂಹಪಾಲನ್ನು ಹೊಂದಿದ್ದು, ಡಿಸೆಂಬರ್ 13ರ ಅಂಕಿ ಅಂಶಗಳಿಗೆ ಹೋಲಿಸಿದರೆ (56,257 ಕೋಟಿ ಡಾಲರ್ (₹47.70 ಲಕ್ಷ ಕೋಟಿ)) ಡಿ.20ರ ವೇಳೆಗೆ ಈ ಮೊತ್ತವು 55,656 ಕೋಟಿ ಡಾಲರ್‌ಗೆ (₹47.32 ಲಕ್ಷ ಕೋಟಿ) ಇಳಿದಿದೆ.

ಡಾಲರ್ ಮಾರಾಟವು ಒಂದು ಕ್ರಮವಾದರೆ, ರೂಪಾಯಿಯನ್ನು ಹೆಚ್ಚು ಖರೀದಿಸುವುದರ ಮೂಲಕ ಭಾರತದ ಕರೆನ್ಸಿಗೆ ಬೇಡಿಕೆ ಹೆಚ್ಚಿಸಬಹುದು. ಇದು ರೂಪಾಯಿಯ ಬಲವರ್ಧನೆಗೆ ಸಹಾಯ ಮಾಡುತ್ತದೆ.

ಬಡ್ಡಿದರದಲ್ಲಿ ಬದಲಾವಣೆ ತರುವುದು ಇನ್ನೊಂದು ಕ್ರಮ. ಬಡ್ಡಿದರ ಹೆಚ್ಚಳವಾದರೆ ವಿದೇಶಿ ಹೂಡಿಕೆದಾರರು ದೇಶದಲ್ಲಿ ಬಂಡವಾಳ ಹೂಡಲು ಮುಂದೆ ಬರುತ್ತಾರೆ. ಇದು ಕೂಡ ರೂಪಾಯಿಗೆ ಬೇಡಿಕೆ ಸೃಷ್ಟಿಸುತ್ತದೆ. ಆದರೆ, ಆರ್‌ಬಿಐಯು 2023ರ ಫೆಬ್ರುವರಿಯಿಂದ ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.



* ಪ್ರತಿ ವರ್ಷಾರಂಭದಲ್ಲಿದ್ದ ಮೌಲ್ಯವನ್ನು ಪರಿಗಣಿಸಲಾಗಿದೆ

ಸಿದ್ಧಸೂತ್ರಕ್ಕೆ ಅಂಟಿಕೊಳ್ಳದ ಮ್ಯಾಕ್ಸ್

ನಾವು ನೋಡಿದ ಸಿನಿಮಾ

ಮ್ಯಾಕ್ಸ್ (ಕನ್ನಡ)
- **ನಿರ್ಮಾಣ:** ಕಲೈಪುಲಿ ಎಸ್ ಥಾನು
- **ನಿರ್ದೇಶನ:** ವಿಜಯ್ ಕಾರ್ತಿಕೇಯ
- **ತಾರಾಗಣ:** ಸುದೀಪ್, ಇಳವರಸು, ಉಗ್ರಂ ಮಂಜು, ಸುನೀಲ್, ವರಲಕ್ಷ್ಮೀ ಶರತ್ ಕುಮಾರ್, ಸಂಯುಕ್ತ ಹೊರನಾಡು, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ, ಸುಧಾ ಬೆಳವಾಡಿ, ಕರಿಸುಬ್ಬು, ವಿಜಯ್ ಚೆಂಡೂರು ಮತ್ತಿತರರು.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ತಮಿಳಿನಲ್ಲಿ ಕಾರ್ತಿ ನಟನೆಯ ‘ಕೈಥಿ’ ಸಿನಿಮಾ ಕೆಲ ವರ್ಷಗಳ ಹಿಂದೆ ತೆರೆಕಂಡಿತ್ತು. ಪೊಲೀಸ್ ಠಾಣೆಯನ್ನು ಕೇಂದ್ರವಾಗಿಟ್ಟುಕೊಂಡು ಒಂದು ರಾತ್ರಿಯಲ್ಲಿ ನಡೆಯುವ ಕಥೆಯದು. ಇದೇ ಎಳೆಯನ್ನು ಬಳಸಿಕೊಂಡು ಅದರ ಮೇಲೆ ‘ಮ್ಯಾಕ್ಸ್’ನ ಹೊಸ ಕಥೆ ಹೆಣೆದಿದ್ದಾರೆ ನಿರ್ದೇಶಕ ವಿಜಯ್ ಕಾರ್ತಿಕ್. ಈ ಸಿನಿಮಾ ಮೂಲಕ ಸುಮಾರು ಎರಡೂವರೆ ವರ್ಷದ ಬಳಿಕ ನಟ ಸುದೀಪ್ ತೆರೆ ಮೇಲೆ ಕಾಣಿಸಿಕೊಂಡಿದ್ದಾರೆ.

ತನ್ನ ಖಡಕ್ ಕಾರ್ಯವೈಖರಿಯ ಕಾರಣಕ್ಕೆ ಹಲವು ಬಾರಿ ಅಮಾನತುಗೊಂಡ ಇನ್‌ಸ್ಪೆಕ್ಟರ್ ಅರ್ಜುನ್ ಮಹಾಕ್ಷಯ್(ಸುದೀಪ್) ಹೊಸ ಪೊಲೀಸ್ ಠಾಣೆಗೆ ವರ್ಗಾವಣೆ ಆಗಿದ್ದಾನೆ. ಕೆಲಸಕ್ಕೆ ಹಾಜರಾಗುವ ದಿನದ ಹಿಂದಿನ ಸಂಜೆ ಆತ ಪೊಲೀಸ್ ಠಾಣೆ ಇರುವ ಊರಿಗೆ ಬರುತ್ತಾನೆ. ಅದೇ ಸಂದರ್ಭದಲ್ಲಿ ರಾಜಕಾರಣಿಗಳಿಬ್ಬರ ಮಕ್ಕಳು ಕುಡಿದು ಕಾರು ಚಾಲನೆ ಮಾಡಿ, ರಸ್ತೆಯಲ್ಲಿ ಗಸ್ತಿನಲ್ಲಿದ್ದ ಪೊಲೀಸರ ಮೇಲೆ ಕೈ ಮಾಡುತ್ತಾರೆ. ಇದನ್ನು ತಡೆಯುವ ನಾಯಕ ಅವರಿಬ್ಬರನ್ನು ಬಡಿದು ಪೊಲೀಸ್ ಠಾಣೆಗೆ ಕರೆದೊಯ್ದು ಎಫ್‌ಐಆರ್ ಹಾಕಲು ಹೇಳುತ್ತಾನೆ. ಇಲ್ಲಿಂದ ಕಥೆ ತೆರೆದುಕೊಳ್ಳುತ್ತದೆ. ಅತ್ತ ಅದೇ ರಾತ್ರಿ ಸರ್ಕಾರ ಬೀಳಿಸಲು ಸಿದ್ಧತೆ ನಡೆಸಿರುವ ಆ ರಾಜಕಾರಣಿಗಳು ಹಾಗೂ ಬಂಧನಕ್ಕೊಳಗಾದ ಅವರ ಮಕ್ಕಳು ಏನಾಗುತ್ತಾರೆ ಎನ್ನುವುದೇ ಚಿತ್ರದ ಕಥೆ.

ರಿವರ್ಸ್ ಸ್ಕ್ರೀನ್ ಪ್ಲೇ ಮೂಲಕ ಚಿತ್ರದ ಕಥೆಯನ್ನು ಆರಂಭಿಸಿರುವ ನಿರ್ದೇಶಕ ರಾತ್ರಿಯಿಂದ ಬೆಳಗಿನವರೆಗಿನ ಘಟನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಚಿತ್ರದ ಮೊದಲಾರ್ಧದ ಸ್ಕ್ರೀನ್‌ಪ್ಲೇ ಕುತೂಹಲಕಾರಿಯಾಗಿದೆ. ಸರಳವಾದ ಕಥೆಯನ್ನು ಹೊಂದಿದ್ದರೂ ವೇಗವಾದ ಚಿತ್ರಕಥೆಯ ಮೂಲಕ ಮುಂದೆ ಏನಾಗಲಿದೆ ಎನ್ನುವ ತಳಮಳ, ಕೌತುಕವನ್ನು ಸೃಷ್ಟಿಸುವಲ್ಲಿ ನಿರ್ದೇಶಕರು ಯಶಸ್ವಿಯಾಗಿದ್ದಾರೆ. ಸುದೀಪ್ ನಟನೆಯ ಗತ್ತು ಇಲ್ಲಿ ಸಾಥ್ ನೀಡಿದೆ. ನೇರವಾಗಿ ಕಥೆಗೆ ಧುಮುಕುವ ಮೂಲಕ ನಾಯಕನಿಗೆ ಬಹುತೇಕರು ಹೆಣೆಯುವ ಸಿದ್ಧಸೂತ್ರವನ್ನು ಬಿಟ್ಟಿದ್ದಾರೆ. ಆದರೆ ಚಿತ್ರದ ದ್ವಿತೀಯಾರ್ಧದಲ್ಲಿ ಚಿತ್ರಕಥೆ ಹಿಡಿತ ತಪ್ಪುತ್ತದೆ, ನಾಯಕ ಊಹಿಸದಲ್ಲೆಲ್ಲ ಪ್ರತ್ಯಕ್ಷಗೊಳ್ಳುವಾಗ ಆಶ್ಚರ್ಯವಾಗುತ್ತದೆ! ದ್ವಿತೀಯಾರ್ಧವನ್ನು ಕೇವಲ ಆ್ಯಕ್ಷನ್ ಸನ್ನಿವೇಶಗಳಿಗೆ ಬಳಸಿಕೊಳ್ಳಲಾಗಿದೆ.

ಸುದೀಪ್

ಅಭಿಮಾನಿಗಳನ್ನು, ಮಾಸ್ ಪ್ರೇಕ್ಷಕರನ್ನು ಕೇಂದ್ರೀಕರಿಸಿ ಇದನ್ನು ಹೆಣೆಯಲಾಗಿದೆ. ಆದರೆ ಇದಕ್ಕೆ ಪೂರಕವಾದ ಖಳನಾಯಕರ ಪಾತ್ರಗಳನ್ನು ಸೃಷ್ಟಿಸುವಲ್ಲಿ ನಿರ್ದೇಶಕರು ವಿಫಲರಾಗಿದ್ದಾರೆ. ನಾಯಕನ ತೋಳ್ಬಲದ ಜೊತೆಗೆ ಆತನ ಬುದ್ಧಿಯ ಆಟವಾಗಿಯೂ ‘ಮ್ಯಾಕ್ಸ್’ ತೆರೆಗೆ ಬಂದಿದೆ. ಚೆಸ್‌ನಲ್ಲಿರುವಂತೆ ಕಾಲಾಳುಗಳನ್ನು ಮುಂದಿಟ್ಟುಕೊಂಡು, ರಾಜನೂ ಯುದ್ಧಕ್ಕೆ ಇಳಿದಂತೆ ಈ ಚಿತ್ರದ ಕಥೆಯಿದೆ. ನಾಯಕ ಸೇದುವ ಸಿಗರೇಟ್‌ಗಳನ್ನು ಲೆಕ್ಕವಿಡುವುದು ಕಷ್ಟ. ಕಥೆಗೆ ನಾಯಕಿಯಿಲ್ಲ, ಅನಗತ್ಯ ಹಾಡುಗಳಿಲ್ಲ, ಎಳೆದಾಟವಿಲ್ಲ. ಹೀಗಾಗಿ 132 ನಿಮಿಷದಲ್ಲಿ ಸಿನಿಮಾ ಪೂರ್ಣಗೊಳ್ಳುತ್ತದೆ.

ನಟನೆಯಲ್ಲಿ ಸುದೀಪ್ ಇಡೀ ಸಿನಿಮಾವನ್ನು ಆವರಿಸಿಕೊಂಡಿದ್ದಾರೆ. ಆ್ಯಕ್ಷನ್ ದೃಶ್ಯಗಳಲ್ಲಿ ಅವರ ಸ್ಟೈಲ್, ಸಂಭಾಷಣೆಗಳು ‘ಮ್ಯಾಕ್ಸ್’ಗೆ ಹೊಸ ರೂಪ ನೀಡಿದೆ. ಅವರ ಹಿಂದಿನ ಸಿನಿಮಾಗಳಂತೆ ಇಲ್ಲಿ ಭಾವನಾತ್ಮಕ ಅಂಶಗಳಿಗೆ ಹೆಚ್ಚಿನ ಜಾಗವಿಲ್ಲ. ನಿವೃತ್ತಿಯ ಅಂಚಿನಲ್ಲಿರುವ ಹೆಡ್ ಕಾನ್‌ಸ್ಟೆಬಲ್ ಪಾತ್ರದಲ್ಲಿ ಇಳವರಸು ನಟನೆ ಚೆನ್ನಾಗಿದೆ. ಉಗ್ರಂ ಮಂಜು, ಸುನೀಲ್, ವರಲಕ್ಷ್ಮಿ, ಸಂಯುಕ್ತ ಹೊರನಾಡು ತಮ್ಮ ಪಾತ್ರಗಳನ್ನು ನಿಭಾಯಿಸಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ಚಿತ್ರಕಥೆಯ ವೇಗಕ್ಕೆ ಸೂಕ್ತವಾಗಿದೆ.

ಅಭಿಲಾಷ್ ಪಿ.ಎಸ್.

ಪದಬಂಧ 5905

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ತಡವಾಗಿ ನೋಡುತ್ತಿರುವ ಅಬ್ಬಿ (4)
5.ಕರಿಯ ಹತ್ತಿರ ಹಾರುತ್ತಿರುವ ಹೆಣ್ಣು ದುಂಬಿ (4)
6.ಶುನಕದ ಬಳಿಯಲ್ಲಿರುವ ಗಿಳಿ (2)
7.ಗಿರಿಯ ಕೊನೆಗೆ ಸೆರೆ ಹಿಡಿಯುವುದು (4)
9.ಕಪ್ಪು ಬಣ್ಣದ ಪಕ್ಷಿಯನ್ನು ಓಡಿಸಿದ ಚಿಕ್ಕಪ್ಪ (2)
11.ಜರೂರತ್ತಾಗಿ ಬೇಕಾಗಿದ್ದ ಅರಗು (2)
12.ಬಿರುಸಾದ ಮಾತಿದು (4)
14.ಕಟ್ಟಿಗೆ ಇಲ್ಲಿದೆ (2)
16.ಯಾವ ವಿವಾದಕ್ಕೂ ಸೇರದಿರುವ ಸೀನ! (4)
17.ಕೆಲಸ ಮಾಡುವ ಸ್ಥಳ (4)

ಮೇಲಿಂದ ಕೆಳಕ್ಕೆ
1.ರಾಗಬದ್ಧವಾಗಿ ಕಾವ್ಯವನ್ನು ಓದುವುದು (3)
2.ಹೂವಿನಲ್ಲಿರುವ ಸಿಹಿ ರಸ (4)
3.ತರಿಯನ್ನು ತರಲು ತೋರಿದ ಅವಸರ (4)
4.ಈತ ಬಲು ಜಿಪುಣ (3)
6.ಮುತ್ತು ಇಲ್ಲಿದೆ (3)
8.ಗೀಟು ಕಾಣದಂತೆ ಮಾಡಿದ ಹೊಳಪಿನ ಲೇಪನ (3)
10.ಗರಿಷ್ಠವಲ್ಲ! ಅತ್ಯಂತ ಕೆಳಮಟ್ಟದ್ದು! (3)
12.ಸೊಂಟಕ್ಕೆ ಕಟ್ಟಿದ ಉಡಿದಾರ (4)
13.ನ್ಯಾಯಾಲಯದಲ್ಲಿ ತನ್ನಕಡೆಗೆ ತೀರ್ಪನ್ನು ಪಡೆದಿರುವ ವ್ಯಕ್ತಿ (4)
14.ಕೈಲಾಸವೆನಿಸಿಕೊಂಡಿರುವ ಕೆಲಸವಿಲ್ಲಿ ದೀರ್ಘವಾಗಿದೆ (3)
15.ಹೆಣ್ಣು ಮಂಗವಿದು (3)



5904ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಳಗ 4.ಒಮ್ಮತ
6.ಹಯವದನ 7.ರವಿ
9.ಕಡ 10.ಕಾಡು
11.ಣಿವಾ 12.ವಾರ
13.ಟಆ 18.ನಯವಂಚಕ
19.ನಡುಕ 20.ರಿವಾಜು

ಮೇಲಿಂದ ಕೆಳಕ್ಕೆ:
1.ಬಡಿವಾರ 2.ಗಹನ
3.ಕವನ 4.ಒನಪು
5.ತಡಬಡ 8.ವಿಕಾರ
9.ಕವಾಟ 12.ವಾತಾಯನ
14.ಆಜುಬಾಜು
15.ಶುನಕ 16.ಲವಂಗ
17.ಮಂಕರಿ

ಸುಡೊಕು 6290

3		1		7		6		2
			2		9			
2	8			1			9	5
	5		7		4	8		
				8		5		9
8		6	5					4
6				5		9		7
	7		1	3			5	
5		3		6		1		8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6289 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಡಿಸೆಂಬರ್ 28, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಚತುರ್ದಶಿ ಗಂ. 28-02 ನಕ್ಷತ್ರ: ಜ್ಯೇಷ್ಠ ಗಂ. 23-22 ಯೋಗ: ಗಂಡ ಗಂ. 21-41 ಕರಣ: ವಿಷ್ಟಿ ಗಂ. 15-52, ಧನು ಮಾಸದ 12 ನೇ ದಿನ, ಮಳೆನಕ್ಷತ್ರ: ಮೂಲ 4.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-56 **ಸೂರ್ಯಾಸ್ತ :** 06-09
ಮುಸ್ಲಿಂ ದಿನಾಂಕ : 26 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 4, 1

ಮೇಷ: ಕೈಗೆಟುಕುವ ಕಾರ್ಯವೊಂದು ಸತತ ಪ್ರಯತ್ನದಿಂದ ಆಶ್ಚರ್ಯಕರ ರೀತಿಯಲ್ಲಿ ಥಟ್ಟನೆ ಸಿದ್ಧಿಸಬಹುದು. ಸುಗಂಧದ್ರವ್ಯ ಹಾಗೂ ಅಲಂಕಾರಿಕ ವಸ್ತು ವ್ಯಾಪಾರಿಗಳಿಗೆ ಆಶಾದಾಯಕ ದಿನ. ಆರ್ಥಿಕ ಕ್ಷೇತ್ರದಲ್ಲಿ ಮುನ್ನಡೆ ಇರುವುದು.

ವೃಷಭ: ಎದುರಾಗುವ ಸಂದಿಗ್ಧ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅವಲೋಕಿಸಿ, ಇಷ್ಟದೇವರನ್ನು ಪ್ರಾರ್ಥಿಸಿ ತೀರ್ಮಾನ ಕೈಗೊಳ್ಳಿ. ಆಡಳಿತ ವರ್ಗದವರಿಗೆ ಸಿಬ್ಬಂದಿಯಿಂದ ಪ್ರಶಂಸೆ ದೊರೆಯುತ್ತದೆ.

ಮಿಥುನ: ಫೋಟೊ ಸ್ಟುಡಿಯೊದವರಿಗೆ ಅವಕಾಶಗಳೊಂದಿಗೆ ಜನಪ್ರಿಯತೆ ಹೆಚ್ಚುವುದು. ಮನೆಯಲ್ಲಿನ ಮಕ್ಕಳ ಸಂತೋಷಕ್ಕಾಗಿ ವೆಚ್ಚಗಳು ಉಂಟಾಗುವುದು. ಕುಟುಂಬದಲ್ಲಿ ಸೌಖ್ಯವಿದ್ದು, ಮನರಂಜನೆ ಪಡೆಯುವಿರಿ.

ಕರ್ಕಾಟಕ: ದಿಟ್ಟತನದ ಜತೆಗೆ ಸ್ವಲ್ಪ ತಂತ್ರಗಾರಿಕೆ ತೋರಿದರೆ ಅಧಿಕಾರಿಗಳ ಗಮನ ಸೆಳೆಯುವುದು ಕಷ್ಟವಾಗದು. ವ್ಯಾಪಾರ ವ್ಯವಹಾರದಲ್ಲಿ ಮಂದಗತಿಯ ನಡೆ ಕಂಡರೂ ಅಭಿವೃದ್ಧಿಯಂತೂ ಖಚಿತ. ಬಹಳ ಶ್ರಮ ಪಡಬೇಕಾಗುತ್ತದೆ.

ಸಿಂಹ: ಬಹುಜನರ ಒಡನಾಟದಿಂದ ಬಲ, ವಿಶ್ವಾಸ, ಪ್ರೀತಿ ಪಡೆಯುವಂತಾಗಲಿದೆ. ವಾಯು ಪ್ರಕೋಪದಿಂದ ದೈಹಿಕವಾಗಿ ಹಲವು ಸಮಸ್ಯೆಗಳು ಕಾಡಬಹುದು. ಕೊಡು-ಕೊಳ್ಳುವಿಕೆಗಳಿಂದ ಅಧಿಕ ಲಾಭ.

ಕನ್ಯಾ: ಉದ್ಯೋಗಾಕಾಂಕ್ಷಿಗಳಿಗೆ ಪ್ರಭಾವಿ ವ್ಯಕ್ತಿಗಳ ಆಶ್ವಾಸನೆಯಿಂದ ಸಮಾಧಾನ ಸಿಗಲಿದೆ. ಯೋಜಿತ ಕಾರ್ಯದಲ್ಲಿ ವ್ಯತ್ಯಾಸಗಳು ಉಂಟಾಗಲಿವೆ. ಉತ್ತಮ ಅವಕಾಶಗಳು ಬರಲಿವೆ.ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಿ.

ತುಲಾ: ವ್ಯಾಪಾರ–ವ್ಯವಹಾರದಲ್ಲಿ ನಿರೀಕ್ಷಿಸಿದ ಲಾಭ ಪಡೆಯಲು ಪರಿಶ್ರಮದ ಜತೆಯಲ್ಲಿ ಬುದ್ಧಿವಂತಿಕೆ ಮುಖ್ಯವೆಂದು ತಿಳಿದುಬರುವುದು. ಈ ದಿನ ಅಭಿವೃದ್ಧಿ ಕೆಲಸಗಳಿಗೆ ಮಹತ್ವವನ್ನು ನೀಡಿ, ಅವುಗಳನ್ನು ಕಾರ್ಯಗತಗೊಳಿಸಿರಿ.

ವೃಶ್ಚಿಕ: ಭೂ ಸಂಬಂಧದ ವ್ಯವಹಾರದಲ್ಲಿ ಹಣ ಹೂಡಿಕೆ ಮಾಡುವ ಮುನ್ನ ಎರಡೆರಡು ಬಾರಿ ಯೋಚಿಸುವುದು ಉತ್ತಮ. ರಾಜಕೀಯ ನಡೆಯಲ್ಲಿ ಬೇರೆಯವರಿಂದ ವಂಚನಾ ಪ್ರಸಂಗ ನಡೆದರೂ, ಉತ್ತಮ ಭವಿಷ್ಯವಿದೆ.

ಧನು: ಸಮರ್ಥವಾಗಿ ಯೋಜನೆಗಳನ್ನು ಪೂರ್ಣಗೊಳಿಸುವಿರಿ. ಹಣಕಾಸಿನ ವಿಚಾರದಲ್ಲಿ ಮುಂಜಾಗ್ರತೆ ತೆಗೆದುಕೊಳ್ಳಿ. ಕೆಲಸ ಕಾರ್ಯಗಳಲ್ಲಿ ನಾಯಕತ್ವದ ಸಾಮರ್ಥ್ಯ ಪ್ರದರ್ಶಿಸುವಿರಿ. ಸಗಟು ವ್ಯಾಪಾರಿಗಳಿಗೆ ಒಳ್ಳೆಯ ಸಮಯ.

ಮಕರ: ಸಂಗಾತಿಯೊಂದಿಗೆ ಸ್ನೇಹದಿಂದ ವರ್ತಿಸಿದರೆ ಭಿನ್ನಾಭಿಪ್ರಾಯ ಮೂಡುವ ಅವಕಾಶ ತಪ್ಪುವುದು. ಎಲ್ಲಾ ವಿಷಯಗಳಲ್ಲಿಯೂ ನಿಮ್ಮ ಸ್ವಾಭಾವಿಕ ಗುಣಕ್ಕಿಂತ ಹೆಚ್ಚಿನ ಸಮಾಧಾನದಿಂದ ಇರಿ.

ಕುಂಭ: ವೈಯಕ್ತಿಕ ವಿಚಾರಗಳಲ್ಲಿ ಸೃಷ್ಟಿಯಾದ ಸಣ್ಣಪುಟ್ಟ ಬದಲಾವಣೆಗಳಿಂದ ನೆಮ್ಮದಿ ಕಳೆದುಕೊಳ್ಳುವಿರಿ. ಉದ್ಯೋಗಕ್ಕಾಗಿ ಹೊರ ದೇಶದ ಪ್ರಯಾಣದ ಅವಕಾಶಗಳು ಸಿಗಬಹುದು. ವ್ಯವಹಾರಕ್ಕೆ ಪ್ರತಿಸ್ಪರ್ಧಿಗಳು ಹುಟ್ಟುವರು.

ಮೀನ: ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರಿಂದ ಸಲಹೆ ಬರುವುದು. ದೈನಂದಿನ ಚಟುವಟಿಕೆಗಳಲ್ಲಿನ ವ್ಯತ್ಯಾಸಗಳಾಗುವುದು. ವಸ್ತ್ರ ವಿನ್ಯಾಸಗಾರರಿಗೆ ವಿಶೇಷ ಪರಿಣತಿ ಅಗತ್ಯವೆನಿಸಲಿದೆ.

ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿ ಕರೆ • ತೃತೀಯ ವಿಶ್ವ ಹವ್ಯಕ ಸಮ್ಮೇಳನಕ್ಕೆ ಚಾಲನೆ

‘ಹವ್ಯಕರು ಎರಡಕ್ಕಿಂತ ಹೆಚ್ಚು ಮಕ್ಕಳ ಪಡೆಯಿರಿ’

ಪ್ರಜಾವಾಣಿ ವಾರ್ತೆ

ತೃತೀಯ ವಿಶ್ವ ಹವ್ಯಕ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ರಾಘವೇಶ್ವರ ಭಾರತೀ ಸ್ವಾಮೀಜಿ ಅವರಿಗೆ ಸುಬುಧೇಂದ್ರ ತೀರ್ಥ ಸ್ವಾಮೀಜಿ ಗೌರವ ಸಮರ್ಪಿಸಿದರು. ಅಶೋಕ್ ಹಾರನಹಳ್ಳಿ, ಬಿ.ವೈ. ವಿಜಯೇಂದ್ರ, ವಿಶ್ವೇಶ್ವರ ಹೆಗಡೆ ಕಾಗೇರಿ, ಡಾ. ಗಿರಿಧರ ಕಜೆ, ಸೌಮ್ಯನಾಥ ಸ್ವಾಮೀಜಿ, ಭೀಮೇಶ್ವರ ಜೋಶಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸದಾನಂದ ಗೌಡ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಹವ್ಯಕ ಸಮುದಾಯವು ಇತ್ತೀಚಿನ ವರ್ಷಗಳಲ್ಲಿ ಅಳಿದು ಹೋಗುತ್ತಿದೆ. ಈ ಸಮುದಾಯದ ಉಳಿವಿಗೆ ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಪಡೆಯಬೇಕಾದ ಅಗತ್ಯವಿದೆ. ಮೂರನೇ ಮಗುವಿನ ನಂತರದ ಮಕ್ಕಳನ್ನು ಸಾಕುವ ಜವಾಬ್ದಾರಿ ನಮ್ಮ ಮಠ ಹೊರಲಿದೆ’ ಎಂದು ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿ ಹೇಳಿದರು.

ಅಖಿಲ ಹವ್ಯಕ ಮಹಾಸಭಾ ಇಲ್ಲಿನ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ ತೃತೀಯ ವಿಶ್ವ ಹವ್ಯಕ ಸಮ್ಮೇಳನಕ್ಕೆ ಶುಕ್ರವಾರ ಚಾಲನೆ ದೊರೆಯಿತು.

ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ‘ಸರ್ಕಾರದ ಮುಂದೆ ನಮ್ಮ ಯಾವುದೇ ಬೇಡಿಕೆಯಿಲ್ಲ. ಬದಲಾಗಿ, ಸಮುದಾಯದ ಮುಂದಿದೆ. ಕಂಚಿ ಪರಮಾಚಾರ್ಯರು ಅನೇಕ ಮಕ್ಕಳನ್ನು ಪಡೆದವರಿಗೆ ‘ವೀರ ಮಾತಾ’ ಎಂಬ ಪ್ರಶಸ್ತಿ ನೀಡಿ ಸನ್ಮಾನಿಸುತ್ತಿದ್ದರು. ನಮಗೂ ಅದನ್ನು ಮಾಡುವ ಮನಸ್ಸಿದೆ. ಮೂರು ಮಕ್ಕಳಿದ್ದವರು ಈ ಸನ್ಮಾನಕ್ಕೆ ಅರ್ಹರಾಗುತ್ತಾರೆ’ ಎಂದರು.

‘ಮಕ್ಕಳಿಗೆ ಸಂಬಂಧಿಸಿದಂತೆ ಮಂತ್ರಗಳನ್ನೂ ತಿದ್ದಲಾಗಿದೆ. ‘ಬಹುಪುತ್ರ ಲಾಭಂ’ ಶಬ್ದವು ‘ಬಹು ಕೀರ್ತಿ ಲಾಭಂ’ ಆಗಿದೆ. ತಂದೆ–ತಾಯಿಗೆ ಮೂರನೇ ಹಾಗೂ ಅದಕ್ಕಿಂತ ಹೆಚ್ಚಿನ ಮಕ್ಕಳು ಬೇಡವಾದರೆ, ಮಕ್ಕಳನ್ನು ಹೆತ್ತು ಮಠಕ್ಕೆ ನೀಡಬಹುದಾಗಿದೆ. ಮಠವೇ ತಾಯಿ–ತಂದೆಯಾಗಿ, ಅವರ ವಿದ್ಯಾಭ್ಯಾಸ ಮತ್ತು ಉದ್ಯೋಗದ ಜವಾಬ್ದಾರಿ ನಿಭಾಯಿಸಲಿದೆ. ನಶಿಸಿ ಹೋಗುತ್ತಿರುವ ಹವ್ಯಕ ತಳಿಯನ್ನು ಉಳಿಸಬೇಕಿದೆ’ ಎಂದು ಹೇಳಿದರು.

> **ರಾಜಕೀಯ, ಶಿಕ್ಷಣ ಸೇರಿ ಎಲ್ಲ ಕ್ಷೇತ್ರಗಳಲ್ಲಿಯೂ ಹವ್ಯಕರು ಛಾಪು ಮೂಡಿಸಿದ್ದಾರೆ. ಭವ್ಯ ಭಾರತದ ನಿರ್ಮಾಣಕ್ಕೆ ಎಲ್ಲ ಸಮುದಾಯಗಳ ಸಮ್ಮಿಲನ ಅಗತ್ಯ**
> **ಸುಬುಧೇಂದ್ರ ತೀರ್ಥ ಸ್ವಾಮೀಜಿ,** ಮಂತ್ರಾಲಯ ರಾಘವೇಂದ್ರ ಮಠ

> **ಹವ್ಯಕರು ಸಮಾಜಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಕಡಿಮೆ ಜನಸಂಖ್ಯೆ ಇದ್ದರೂ ಸೇವೆ, ತ್ಯಾಗದ ಮನೋಭಾವ ಹೊಂದಿದ್ದಾರೆ. ಈಗಲೂ ಕೃಷಿಯನ್ನು ಬಿಟ್ಟಿಲ್ಲ**
> **ಸೌಮ್ಯನಾಥ ಸ್ವಾಮೀಜಿ,** ಆದಿಚುಂಚನಗಿರಿ ಬೆಂಗಳೂರು ಶಾಖಾ ಮಠ

‘ಯಾವ ತಳಿ ದೇಶಕ್ಕೆ ಬೇಕಿತ್ತೋ ಆ ತಳಿಯವರು ಮುತುವರ್ಜಿಯಿಂದ ಜನಸಂಖ್ಯಾ ಸೂತ್ರವನ್ನು ಅಳವಡಿಸಿಕೊಂಡಿದ್ದಾರೆ. ಹವ್ಯಕ ಸಮುದಾಯದವರಲ್ಲಿ ಮದುವೆ, ಮಕ್ಕಳು ಬೇಡ ಎನ್ನುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಮಕ್ಕಳೆಂದರೆ ಖುಷಿ, ದೇವರು ಎಂಬ ಭಾವನೆ ಈಗ ಹೊರಟು ಹೋಗಿದೆ. ಎಂದು ಮಕ್ಕಳನ್ನು ಹೊಂದಿರುವ ಸಮಾಜವನ್ನು ನಿರುತ್ಸಾಹಿಸುವ ಸಾಧ್ಯವಿಲ್ಲ. ಮಕ್ಕಳ ಸಂಪತ್ತು ಅಸ್ವಾಭಾವಿಕವನ್ನು ಅರಿತುಕೊಳ್ಳಬೇಕು. ಹಿಂದೆ ಅಪರೂಪದ ಭಾರತದ ಗೋವು ತಳಿ ಉಳಿಸುವ ಅಭಿಯಾನ ಮಾಡಲಾಗಿತ್ತು. ಈಗ ಅಪರೂಪದ ಹವ್ಯಕ ತಳಿ ಉಳಿಸುವ ಅಭಿಯಾನ ನಡೆಸಬೇಕಾದ ಸ್ಥಿತಿ ನಿರ್ಮಾಣವಾಗಿದೆ’ ಎಂದರು.

ಜಾರಿಯಾಗದ ಮೀಸಲಾತಿ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ‘ಸಂವಿಧಾನವನ್ನು ಗೌರವಿಸುವ ಬಗ್ಗೆ ಅನೇಕ ನಾಯಕರು ಮಾತನಾಡಿ, ಕೈಯಲ್ಲಿ ಸಂವಿಧಾನ ಪುಸ್ತಕ ಹಿಡಿದು ಓಡಾಡುತ್ತಿದ್ದಾರೆ. ಇದೇ ಸಂವಿಧಾನದ ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10 ರಷ್ಟು ಮೀಸಲಾತಿ ನೀಡಲಾಗಿದೆ. ಆದರೆ, ರಾಜ್ಯ ಸರ್ಕಾರ ಇದುವರೆಗೂ ಇದನ್ನು ಜಾರಿಗೊಳಿಸಿಲ್ಲ. ಉದ್ಯೋಗ ಕ್ಷೇತ್ರದಲ್ಲಿ ಈ ಮೀಸಲಾತಿಯನ್ನು ಜಾರಿ ಮಾಡಿಲ್ಲ. ಬ್ರಾಹ್ಮಣರು ಯಾವುದನ್ನೂ ಕೇಳಿರುವುದರಿಂದಲೇ ಹೀಗೆ ಆಗುತ್ತಿದೆ’ ಎಂದರು.

ಮಾಜಿ ಮುಖ್ಯಮಂತ್ರಿ ಸದಾನಂದ ಗೌಡ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ, ಸಮ್ಮೇಳನದ ಗೌರವಾಧ್ಯಕ್ಷರೂ ಆಗಿರುವ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಸಗೋಡು ಜಯಸಿಂಹ, ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್, ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮದರ್ಶಿ ಭೀಮೇಶ್ವರ ಜೋಶಿ, ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ. ಗಿರಿಧರ ಕಜೆ ಉಪಸ್ಥಿತರಿದ್ದರು.

‘ಅಡಿಕೆ: ಹಿತ ಕಾಯಲು ಕೇಂದ್ರ ಬದ್ಧ’

‘ಹವ್ಯಕರು ಇವತ್ತಿಗೂ ಕೃಷಿ ಅವಲಂಬಿಸಿದ್ದಾರೆ. ಅಡಿಕೆ ಬೆಳೆಗೆ ಸಂಬಂಧಿಸಿ ಸಮುದಾಯದ ಅನೇಕರು ನನ್ನನ್ನು ಭೇಟಿ ಮಾಡುತ್ತಿರುತ್ತಾರೆ. ಇದಕ್ಕೆ ಅನೇಕ ರೀತಿಯ ವರದಿ ಬರುತ್ತಿರುವುದೂ ಕಾರಣ. ಅಡಿಕೆ ಕೇವಲ ತಿನ್ನಲು ಸೀಮಿತವಾಗಿಲ್ಲ. ಅಡಿಕೆ ಇಲ್ಲದೆಯೇ ವಿವಾಹ ನಡೆಯುವುದಿಲ್ಲ, ಶ್ರಾದ್ಧವೂ ಆಗುವುದಿಲ್ಲ. ಆದ್ದರಿಂದ ಅಡಿಕೆಗೆ ಸಂಬಂಧಿಸಿ ಋಣಾತ್ಮಕ ವರದಿಗಳು ಬಂದರೂ ಅಡಿಕೆ ಬೆಳೆಗಾರರ ಹಿತ ಕಾಯಲು ಕೇಂದ್ರ ಸರ್ಕಾರ ಬದ್ಧವಾಗಿದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಭರವಸೆ ನೀಡಿದರು.

‘ಐತಿಹಾಸಿಕ ಹಾಗೂ ಪಾರಂಪರಿಕವಾಗಿ ನೋಡಿದರೆ ಬ್ರಾಹ್ಮಣರು ಜಾತಿ ವ್ಯವಸ್ಥೆಗೆ ಪ್ರಾಧಾನ್ಯ ನೀಡಿಲ್ಲ. ಯಾರು ಭಗವಂತನ ಅನ್ವೇಷಣೆಯಲ್ಲಿ ಸತತವಾಗಿ ನಿರತರಾಗಿರುತ್ತಾರೋ ಅವರು ಬ್ರಾಹ್ಮಣರೆಂದು ನಂಬಿದವರು ನಾವು. ರಾಮಾಯಣದ ನಾಯಕ ರಾಮನಾದರೆ, ನಿರ್ಮಾತೃ ವಾಲ್ಮೀಕಿ. ಇವರಿಬ್ಬರೂ ಬ್ರಾಹ್ಮಣರಲ್ಲ. ಖಳನಾಯಕ ರಾವಣ ಬ್ರಾಹ್ಮಣ. ಆದರೆ, ನಾವು ರಾವಣನನ್ನು ಖಳನಾಯಕನನ್ನಾಗಿಯೇ ನೋಡಿ, ರಾಮನನ್ನು ಪೂಜೆ ಮಾಡುತ್ತೇವೆ. ಕೃಷ್ಣ, ವೇದವ್ಯಾಸರು ಬ್ರಾಹ್ಮಣರಲ್ಲದಿದ್ದರೂ ಅವರನ್ನು ಆರಾಧಿಸುತ್ತೇವೆ. ಸಾಮಾಜಿಕ ಸಾಮರಸ್ಯ ಕಾಪಾಡುವಲ್ಲಿ ಬ್ರಾಹ್ಮಣ ಸಮಾಜವು ಎತ್ತಿದ ಕೈ. ದೇಶದ ಹಿತದೃಷ್ಟಿಯಿಂದ ಎಲ್ಲ ಸಮಾಜವನ್ನು ಒಟ್ಟಿಗೆ ಕೊಂಡೊಯ್ಯಬೇಕಿದೆ’ ಎಂದರು.

ಸುದ್ದಿ 2 ನಿಮಿಷ

ಪ್ರಧಾನಿಗೆ ಸ್ನೇಹಮಯಿ ಕೃಷ್ಣ ಮೊರೆ

ಮೈಸೂರು: ‘ನನಗೆ ಜೀವ ಬೆದರಿಕೆಯಿದ್ದು, ಸೂಕ್ತ ರಕ್ಷಣೆ ನೀಡಬೇಕೆಂದು ಕೋರಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದೇನೆ’ ಎಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲ ಆರೋಪಿಯಾಗಿದ್ದು, ಅವರ ಅಭಿಮಾನಿಗಳು ಆಮಿಷ, ಜೀವ ಬೆದರಿಕೆ ಒಡ್ಡುವುದು ತಿಳಿದುಬಂದಿದ್ದರಿಂದ ಅ.18ರಂದೇ ನಗರ ಪೊಲೀಸ್ ಆಯುಕ್ತರಿಗೆ ಗನ್‌ಮ್ಯಾನ್ ರಕ್ಷಣೆ ನೀಡುವಂತೆ ಮನವಿ ಮಾಡಿದ್ದೇನೆ. ಇದುವರೆಗೂ ಯಾವುದೇ ಕ್ರಮ ವಹಿಸಿಲ್ಲ’ ಎಂದರು.

‘ರಾಜ್ಯ ಸರ್ಕಾರವು ನನ್ನ ಹಾಗೂ ನನ್ನ ಕುಟುಂಬ ರಕ್ಷಣೆ ಬಗ್ಗೆ ಸ್ಪಂದಿಸುತ್ತಿಲ್ಲ. ಹೀಗಾಗಿ ಪ್ರಧಾನಿಗೆ ಪತ್ರ ಬರೆದಿರುವೆ’ ಎಂದು ತಿಳಿಸಿದರು.

6 ಮಂದಿ ವಿರುದ್ಧ ಬಿಜೆಪಿ ದೂರು

ಕಲಬುರಗಿ: ‘ಆಂದೋಲಾ ಸ್ವಾಮೀಜಿ ಹಾಗೂ ಬಿಜೆಪಿ ಮುಖಂಡರ ಹತ್ಯೆಗೆ ಸಂಚು ರೂಪಿಸಿರುವ ದುಷ್ಕರ್ಮಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿ ಜಿಲ್ಲಾ ಬಿಜೆಪಿ ನಾಯಕರ ನಿಯೋಗವು ಶುಕ್ರವಾರ ನಗರ ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಅವರಿಗೆ ದೂರು ನೀಡಿದೆ.

‘ಗುರುವಾರ ಆತ್ಮಹತ್ಯೆ ಮಾಡಿಕೊಂಡ ಯುವ ಗುತ್ತಿಗೆದಾರ ಸಚಿನ್ ಪಾಂಚಾಳ್ ತಮ್ಮ ಡೆತ್‌ನೋಟ್‌ನಲ್ಲಿ ಈ ವಿಷಯ ಪ್ರಸ್ತಾಪಿಸಿದ್ದಾರೆ. ಆಂದೋಲಾ ಸ್ವಾಮೀಜಿ, ಶಾಸಕ ಬಸವರಾಜ ಮತ್ತಿಮಡು, ಬಿಜೆಪಿ ಕಲಬುರಗಿ ನಗರ ಅಧ್ಯಕ್ಷ ಚಂದು ಪಾಟೀಲ ಹಾಗೂ ಬಿಜೆಪಿ ಮುಖಂಡ ಮಣಿಕಂಠ ರಾಠೋಡ ಹತ್ಯೆಗೆ ಕಾಂಗ್ರೆಸ್ ಮುಖಂಡ ರಾಜು ಕಪನೂರ, ನಂದಕುಮಾರ ನಾಗಭುಜಂಗೆ, ಗೋರಕನಾಥ ಸಜ್ಜನ, ಪ್ರತಾಪಧೀರ ಪಾಟೀಲ, ಮನೋಜ ಶೇಜವಾಲ, ರಾಮನಗೌಡ ಪಾಟೀಲ ಹಾಗೂ ಇತರರ ತಂಡವು ಸಂಚು ರೂಪಿಸಿದ್ದಾರೆ ಎಂದು ಬರೆದಿದ್ದಾರೆ. ಈ ಆರು ಮಂದಿ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು. ಆಂದೋಲಾ ಸ್ವಾಮೀಜಿ ಹಾಗೂ ಬಿಜೆಪಿ ಮುಖಂಡರಿಗೆ ರಕ್ಷಣೆ ನೀಡಬೇಕು’ ಎಂದು ಬಿಜೆಪಿಯ ಕಲಬುರಗಿ ನಗರದ ಘಟಕದ ಅಧ್ಯಕ್ಷ ಚಂದು ಪಾಟೀಲ ಹೆಸರಿನಲ್ಲಿ ನೀಡಿರುವ ದೂರಿನಲ್ಲಿ ಒತ್ತಾಯಿಸಲಾಗಿದೆ.

ಮನವಿ ಸಲ್ಲಿಕೆ ವೇಳೆ ಶಾಸಕ ಬಸವರಾಜ ಮತ್ತಿಮಡು, ಬಿಜೆಪಿ ಗ್ರಾಮೀಣ ಜಿಲ್ಲಾ ಘಟಕದ ಅಧ್ಯಕ್ಷ ಶಿವರಾಜ ಪಾಟೀಲ ರದ್ದೇವಾಡಗಿ, ನಗರದ ಅಧ್ಯಕ್ಷ ಚಂದು ಪಾಟೀಲ, ಮಾಜಿ ಶಾಸಕ ರಾಜಕುಮಾರ ಪಾಟೀಲ ತೇಲ್ಕೂರ, ಮುಖಂಡರಾದ ನಿತಿನ್ ಗುತ್ತೇದಾರ, ಶಿವಾನಂದ ಪಿಸ್ತಿ, ವಿಶಾಲ ದರ್ಗಿ ಇದ್ದರು.

ಬಾಣಂತಿ ಸಾವಿಗೆ ಇಡ್ಲಿ ಕಾರಣ?

ಹೊಸಪೇಟೆ (ವಿಜಯನಗರ): ಇಲ್ಲಿನ ತಾಯಿ ಮತ್ತು ಮಗು ಆಸ್ಪತ್ರೆಯಲ್ಲಿ (ಎಂಸಿಎಚ್) ಸಿಸೇರಿಯನ್ ಮೂಲಕ ಹೆರಿಗೆಯಾಗಿ ಕೊಪ್ಪಳ ಜಿಲ್ಲಾ ಆಸ್ಪತ್ರೆಯಲ್ಲಿ ಮೃತಪಟ್ಟ ಬಾಣಂತಿ ಐಶ್ವರ್ಯಾ ಸಾವಿಗೆ ಹೊರಗಿನಿಂದ ತಂದು ತಿಂದ ಇಡ್ಲಿಯೇ ಕಾರಣ ಎಂಬ ಶಂಕೆ ವ್ಯಕ್ತವಾಗಿದೆ.

ಐಶ್ವರ್ಯಾ

‘ಬಾಣಂತಿ ಐಶ್ವರ್ಯಾ ಹೆರಿಗೆಯಾದ ನಾಲ್ಕು ದಿನ ಎಂಸಿಎಚ್ ಆಸ್ಪತ್ರೆಯಲ್ಲಿ ಚೆನ್ನಾಗಿಯೇ ಇದ್ದರು. ನಾಲ್ಕನೇ ದಿನ ಹೊರಗಿನಿಂದ ತಂದ ಇಡ್ಲಿ ತಿಂದ ಬಳಿಕ ಅವರಿಗೆ ವಾಂತಿ, ಭೇದಿ ಶುರುವಾಗಿದೆ. ಆಸ್ಪತ್ರೆಯಲ್ಲಿ ಇತರ ಯಾರಿಗೂ ಈ ಸಮಸ್ಯೆ ಕಾಣಿಸಿಲ್ಲ. ಹೀಗಾಗಿ ಎಲ್ಲಿಂದ ಇಡ್ಲಿ ತರಿಸಿದರು ಎಂಬ ಮಾಹಿತಿ ಕಲೆ ಹಾಕಲಾಗುತ್ತಿದೆ’ ಎಂದು ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಎಲ್.ಆರ್.ಶಂಕರ್ ನಾಯ್ಕ್ ‘ಪ್ರಜಾವಾಣಿ’ಗೆ ತಿಳಿಸಿದರು.

ರವಿ ಮೆರವಣಿಗೆ: ಕುಸಿದು ಬಿದ್ದಿದ್ದ ಯುವಕ ಸಾವು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಜಾಮೀನು ಪಡೆದು ನಗರಕ್ಕೆ ಬಂದಾಗ ಸಿ.ಟಿ.ರವಿ ಅವರಿಗೆ ಸ್ವಾಗತ ಕೋರಲು ಏರ್ಪಡಿಸಿದ್ದ ಮೆರವಣಿಗೆ ವೇಳೆ ಕುಸಿದು ಬಿದ್ದಿದ್ದ ಅವಿನಾಶ್ (26) ಶುಕ್ರವಾರ ಮೃತಪಟ್ಟಿದ್ದಾರೆ.

ಬಂಧನಕ್ಕೆ ಒಳಗಾಗಿ ಬಿಡುಗಡೆಯಾದ ಬಳಿಕ ಕಳೆದ ಶನಿವಾರ ಮೊದಲ ಬಾರಿ ನಗರಕ್ಕೆ ಬಂದ ರವಿ ಅವರನ್ನು ಬಿಜೆಪಿ ಕಾರ್ಯಕರ್ತರು ಸಂಭ್ರಮದಿಂದ ಬರ ಮಾಡಿಕೊಂಡಿದ್ದರು. ಅವಿನಾಶ್ ಅವರು ಡ್ರೋನ್ ಕ್ಯಾಮೆರಾ ನಿರ್ವಹಣೆ ಮಾಡುತ್ತಿದ್ದರು. ಕುಸಿದು ಬಿದ್ದ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಅವಿನಾಶ್

ಹೃದಯಾಘಾತ ಸಂಭವಿಸಿತ್ತು. ಕೃತಕ ಉಸಿರಾಟಕ್ಕೆ ವೈದ್ಯರು ವ್ಯವಸ್ಥೆ ಮಾಡಿದ್ದರು. ಸಿ.ಟಿ. ರವಿ ಆಸ್ಪತ್ರೆಗೆ ಭೇಟಿ ನೀಡಿ, ಚಿಕಿತ್ಸಾ ವೆಚ್ಚ ಭರಿಸುವುದಾಗಿಯೂ ತಿಳಿಸಿದ್ದರು. ಮರುದಿನ ಕುಟುಂಬಸ್ಥರು ಶಿವಮೊಗ್ಗದ ಆಸ್ಪತ್ರೆ, ನಂತರ ಬೆಂಗಳೂರಿನ ನಿಮ್ಹಾನ್ಸ್‌ಗೆ ದಾಖಲಿಸಿದ್ದರು.

ಡಿಸೆಂಬರ್‌ನಲ್ಲೂ ಕೆಆರ್‌ಎಸ್ ಭರ್ತಿ

30 ವರ್ಷಗಳಲ್ಲಿ ಈ ಬಾರಿ ಜಲಾಶಯದಲ್ಲಿ ದಾಖಲೆ ಮಟ್ಟದ ನೀರು ಸಂಗ್ರಹ

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ವರ್ಷಾಂತ್ಯದ ವೇಳೆಗೆ ರಾಜ್ಯದ ವಿವಿಧ ಜಲಾಶಯಗಳಲ್ಲಿ ನೀರಿನ ಮಟ್ಟ ಕಡಿಮೆಯಾಗಿದೆ. ಆದರೆ, ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯ ಡಿಸೆಂಬರ್‌ನಲ್ಲೂ ಭರ್ತಿಯಾಗಿದ್ದು, ಗರಿಷ್ಠ ನೀರಿನ ಮಟ್ಟ 124.80 ಅಡಿ ತಲುಪಿದೆ. ಇದು 30 ವರ್ಷಗಳಲ್ಲೇ ದಾಖಲೆ ಮಟ್ಟದ ನೀರಿನ ಸಂಗ್ರಹ ಎನಿಸಿದೆ.

30 ವರ್ಷಗಳ ಅಂಕಿಅಂಶಗಳ ಪ್ರಕಾರ, ಡಿಸೆಂಬರ್ ಕೊನೆಯ ವಾರದಲ್ಲಿ (ಡಿ.25) ಪ್ರಸಕ್ತ ವರ್ಷ ಮಾತ್ರ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಭರ್ತಿಯಾಗಿರುವುದು ಕಂಡುಬರುತ್ತದೆ. 2021ರ ಡಿ.15ರ ವೇಳೆಯಲ್ಲಿ ಜಲಾಶಯ ಭರ್ತಿಯಾಗಿದ್ದರೂ, ಡಿ.25ರ ವೇಳೆಗೆ 124.22 ಅಡಿಗೆ ನೀರು ಇಳಿಕೆಯಾಗಿತ್ತು.

ಕೆಆರ್‌ಎಸ್ ಜಲಾಶಯವು 49.452 ಟಿಎಂಸಿ ಅಡಿ ನೀರಿನ ಸಾಮರ್ಥ್ಯ ಹೊಂದಿದ್ದು, ಪ್ರಸ್ತುತ ಅಷ್ಟೇ ಪ್ರಮಾಣದ ನೀರಿನ ಸಂಗ್ರಹವಿದೆ. ತಮಿಳುನಾಡಿಗೆ ಬಿಡಬೇಕಾದ ಪ್ರಮಾಣಕ್ಕಿಂತ ಹೆಚ್ಚಿನ ನೀರನ್ನೇ ಈ ಬಾರಿ ಬಿಡಲಾಗಿದೆ.

ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ಬರುವ 174 ಕೆರೆಗಳಲ್ಲಿ 142 ಕೆರೆಗಳು ಭರ್ತಿಯಾಗಿವೆ. ಉಳಿದ 20 ಕೆರೆಗಳಲ್ಲಿ ಶೇ 75ರಷ್ಟು, ಒಂದು ಕೆರೆಯಲ್ಲಿ ಶೇ 50ರಷ್ಟು ಮತ್ತು 3 ಕೆರೆಗಳಲ್ಲಿ ಶೇ 25ರಷ್ಟು ನೀರು ಸಂಗ್ರಹವಿದೆ. ಡ್ಯಾಂ ಮತ್ತು ಕೆರೆಗಳು ಭರ್ತಿಯಾಗಿರುವ ಕಾರಣ ಬೇಸಿಗೆ ಬೆಳೆಗೆ ನೀರು ಸಿಗಲಿದೆ ಎಂಬ ಸಂತಸ ರೈತರದು.

ಕೆ.ಆರ್.ಎಸ್ ಅಣೆಕಟ್ಟೆ ಭರ್ತಿಯಾಗಿರುವ ದೃಶ್ಯ

> **ಕಾವೇರಿ ಜಲಾನಯನ ಪ್ರದೇಶದಲ್ಲಿ ಪರಿಸರ ಮತ್ತು ಜಲ ಸಂರಕ್ಷಣೆಗೆ ಆದ್ಯತೆ ನೀಡಬೇಕಿದೆ. ಡ್ಯಾಂ ನೀರನ್ನು ಸಮರ್ಪಕವಾಗಿ ನಿರ್ವಹಿಸಿದರೆ ರೈತರಿಗೆ ಬೇಸಿಗೆ ಬೆಳೆಗೆ ನೀರು ಕೊಡಬಹುದು**
> **ಸುನಂದಾ ಜಯರಾಂ,** ರೈತ ಮುಖಂಡರು

ವಾಡಿಕೆಗಿಂತ ಹೆಚ್ಚು ಮಳೆ: ಪ್ರಸಕ್ತ ವರ್ಷ ಜನವರಿಯಿಂದ ಡಿಸೆಂಬರ್‌ವರೆಗೆ 692 ಮಿ.ಮೀ. ವಾಡಿಕೆ ಮಳೆಗೆ, 864 ಮಿ.ಮೀ.ನಷ್ಟು ಮಳೆಯಾಗಿದೆ. ಅಂದರೆ ಶೇ 24.8ರಷ್ಟು ಹೆಚ್ಚುವರಿ ಮಳೆಯಾಗಿದೆ ಎಂದು ಹವಾಮಾನ ಇಲಾಖೆಯ ಅಂಕಿಅಂಶಗಳು ತಿಳಿಸುತ್ತವೆ. ಕೇರಳದ ಕೆಲವು ಭಾಗ, ಕೊಡಗು ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗಿರುವುದರಿಂದ ಉತ್ತಮ ಒಳಹರಿವು ಬಂದಿದೆ.

ನೀರಿನ ನಿರ್ವಹಣೆ: ‘ಈ ಬಾರಿ ಉತ್ತಮ ಮಳೆಯಾದ ಕಾರಣ ಅಣೆಕಟ್ಟೆಗೆ ಒಳಹರಿವು ಹೆಚ್ಚಾಗಿದೆ. ಕಳೆದ ವರ್ಷ ಅಣೆಕಟ್ಟೆಗೆ 136 ಹೊಸ ಗೇಟುಗಳನ್ನು ಅಳವಡಿಸಿದ ಪರಿಣಾಮ ನಿತ್ಯ ಪೋಲಾಗುತ್ತಿದ್ದ 1 ಸಾವಿರ ಕ್ಯುಸೆಕ್ ನೀರನ್ನು ತಡೆಗಟ್ಟಿದ್ದೇವೆ. 31 ಕಿ.ಮೀ. ಉದ್ದದ ನಾಲೆಗಳ ಆಧುನೀಕರಣ ಕಾಮಗಾರಿ ಹಾಗೂ ನೀರುಗಂಟಿಗಳು ಅತ್ಯುತ್ತಮವಾಗಿ ನೀರು ನಿರ್ವಹಣೆ ಮಾಡಿರುವುದು ಸೇರಿದಂತೆ ಇತರ ಕಾರಣಗಳಿಂದಾಗಿ ಕನ್ನಂಬಾಡಿ ಅಣೆಕಟ್ಟೆಯು ಡಿಸೆಂಬರ್ ಅಂತ್ಯದಲ್ಲೂ ಭರ್ತಿಯಾಗಿದೆ’ ಎಂದು ಕಾವೇರಿ ನೀರಾವರಿ ನಿಗಮದ ಮಂಡ್ಯ ವೃತ್ತದ ಅಧೀಕ್ಷಕ ಎಂಜಿನಿಯರ್ ರಘುರಾಂ ಮಾಹಿತಿ ನೀಡಿದರು.

154 ದಿನ ಜಲಾಶಯ ಭರ್ತಿ!

ಕೆಆರ್‌ಎಸ್ ಅಣೆಕಟ್ಟೆ ನಿರ್ಮಿಸಿದ ದಿನದಿಂದ ಇಲ್ಲಿಯವರೆಗೂ ಅಂದರೆ 90 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಒಂದು ವರ್ಷದಲ್ಲಿ ಬರೋಬ್ಬರಿ 154 ದಿನ ಅಣೆಕಟ್ಟೆಯು ಪೂರ್ಣ ಭರ್ತಿಯಾಗಿದೆ.

‘ಈ ಬಾರಿ ಜುಲೈ 25ಕ್ಕೆ ಮೊದಲ ಬಾರಿಗೆ ಡ್ಯಾಂ ಭರ್ತಿಯಾಗಿತ್ತು. ಅಲ್ಲಿಂದ ಡಿ.25ರವರೆಗೂ ಜಲಾಶಯ ಭರ್ತಿಯಾಗಿದೆ. ಮಧ್ಯದಲ್ಲಿ ಅಣೆಕಟ್ಟೆ ಸುರಕ್ಷತೆ ದೃಷ್ಟಿಯಿಂದ ನೀರಿನ ಮಟ್ಟವನ್ನು ಅಲ್ಪಸ್ವಲ್ಪ ಇಳಿಕೆ ಮಾಡಲಾಗಿದೆ. 2009ರಲ್ಲಿ 146 ದಿನ, 2022ರಲ್ಲಿ 114 ದಿನ ಡ್ಯಾಂ ತುಂಬಿತ್ತು’ ಎಂದು ಕಾವೇರಿ ನೀರಾವರಿ ನಿಗಮದ ಎಂಜಿನಿಯರ್‌ಗಳು ತಿಳಿಸಿದ್ದಾರೆ.

ಮಹಾಮಸ್ತಕಾಭಿಷೇಕಕ್ಕೆ ವೀರೇಂದ್ರ ಹೆಗ್ಗಡೆ ಅಧ್ಯಕ್ಷತೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ವರೂರಿನ ದಿಗಂಬರ ಜೈನ ನವಗ್ರಹ ತೀರ್ಥಕ್ಷೇತ್ರದಲ್ಲಿ ಜನವರಿ 15 ರಿಂದ 26ರವರೆಗೆ ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವ ಹಾಗೂ ಮಹಾಮಸ್ತಕಾಭಿಷೇಕ ಕಾರ್ಯಕ್ರಮ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ಅಧ್ಯಕ್ಷತೆಯಲ್ಲಿ ಅದ್ದೂರಿಯಾಗಿ ನಡೆಯಲಿದೆ’ ಎಂದು ತೀರ್ಥಕ್ಷೇತ್ರದ ಗುಣಧರನಂದಿ ಮಹಾರಾಜ ಹೇಳಿದರು.

‘ಜನವರಿ 15ರ ಮಧ್ಯಾಹ್ನ 2 ಗಂಟೆಗೆ ರಾಜ್ಯಪಾಲ ಥಾವರಚಂದ ಗೆಹಲೋತ್ ಪೂಜಾವಿಧಿ–ವಿಧಾನ ನೆರವೇರಿಸಿದರೆ, ಜ. 16ರಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಧ್ವಜಾರೋಹಣ ನೆರವೇರಿಸುವರು. 12 ದಿನ ನಡೆಯುವ ಈ ಕಾರ್ಯಕ್ರಮದಲ್ಲಿ ರಾಜಸ್ಥಾನ, ಮೇಘಾಲಯ, ಪಂಜಾಬ್, ಕೇರಳದ ರಾಜ್ಯಪಾಲರು, ಕೇಂದ್ರ ಮತ್ತು ರಾಜ್ಯದ 20ಕ್ಕೂ ಹೆಚ್ಚು ಸಚಿವರು ಪಾಲ್ಗೊಳ್ಳುವರು. ವಿವಿಧ ರಾಜ್ಯಗಳ 450ಕ್ಕೂ ಹೆಚ್ಚು ಸ್ವಾಮೀಜಿಗಳನ್ನು ಆಹ್ವಾನಿಸಲಾಗಿದೆ’ ಎಂದು ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ರಾಜ್ಯ, ದೇಶದ ವಿವಿಧೆಡೆಯಿಂದ ಅಲ್ಲದೇ ಅಮೆರಿಕ, ಜರ್ಮನಿ, ಫ್ರಾನ್ಸ್ ದೇಶಗಳಿಂದಲೂ ಪ್ರತಿನಿಧಿಗಳು ಬರಲಿದ್ದು, ವಿವಿಧೆಡೆ 350ಕ್ಕಿಂತಲೂ ಹೆಚ್ಚು ಕೊಠಡಿಗಳನ್ನು ಕಾಯ್ದಿರಿಸಲಾಗಿದೆ. ಪ್ರತಿದಿನ ಒಂದು ಲಕ್ಷ ಮಂದಿ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಎಲ್ಲರಿಗೂ ಊಟೋಪಚಾರದ ವ್ಯವಸ್ಥೆ ಮಾಡಲಾಗಿದೆ. ಜೈನ ಸಾಹಿತ್ಯ, ಸಂಗೀತ, ವ್ರಥ ಬಂಧನ, ಮುಂಜಿ ಬಂಧನ ಸೇರಿ ಅನೇಕ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ’ ಎಂದರು.



ವೀರೇಂದ್ರ ಹೆಗ್ಗಡೆ



ಗುಣಧರನಂದಿ ಮಹಾರಾಜ

‘ಜನವರಿ 22 ರಿಂದ 24ರವರೆಗೆ ಪ್ರತಿದಿನ ಬೆಳಿಗ್ಗೆ 9 ರಿಂದ ಸಂಜೆ 5ರವರೆಗೆ ಮಹಾಮಸ್ತಕಾಭಿಷೇಕ ನಡೆಯಲಿದೆ. ಲೇಸರ್ ಷೋ ಮೂಲಕ ಮಹಾಮಸ್ತಕಾಭಿಷೇಕದ ದೃಶ್ಯ ಪ್ರದರ್ಶಿಸಲಾಗುವುದು. 405 ಅಡಿ ಎತ್ತರದ ಸುಮೇರು ಪರ್ವತ ಉದ್ಘಾಟನೆ, 3ಡಿ ಸಿನಿಮಾ ಮೂಲಕ ಅದ್ಭುತ ಪಾರ್ಶ್ವನಾಥರ ಪಾತ್ರದ ದರ್ಶನ, ವಿಶ್ವಶಾಂತಿಗಾಗಿ 9999 ಹವನಕುಂಡ ಸ್ಥಾಪನೆ, ಹೆಲಿಕಾಪ್ಟರ್ ಮೂಲಕ ನವಗ್ರಹ ತೀರ್ಥಂಕರ ಮೂರ್ತಿಗಳ ಮೇಲೆ ಪುಷ್ಪವೃಷ್ಟಿ, ಅಂತರರಾಷ್ಟ್ರೀಯ ಕವಿ ಸಮ್ಮೇಳನ, ಸರ್ವಧರ್ಮ ಸಮ್ಮೇಳನ ನಡೆಯಲಿದೆ’ ಎಂದು ಗುಣಧರನಂದಿ ಮಹಾರಾಜರು ಹೇಳಿದರು.

ಪೂರ್ವಭಾವಿ ಸಭೆ: ಇದಕ್ಕೂ ಮೊದಲು ಪೂರ್ವಭಾವಿ ಸಭೆಯಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ವಿರೇಂದ್ರ ಹೆಗ್ಗಡೆ ಮಾತನಾಡಿ, ‘ವರೂರು ತೀರ್ಥಕ್ಷೇತ್ರದಲ್ಲಿ ನಡೆಯುವ ಎರಡನೇ ಮಹಾಮಸ್ತಕಾಭಿಷೇಕ ಕಾರ್ಯಕ್ರಮಕ್ಕೆ ಎಲ್ಲರ ಸಹಕಾರ ಬೇಕು’ ಎಂದರು.

‘ಲಿಂಗತ್ವ ಬದಲಾವಣೆ ತಿದ್ದುಪಡಿ ಮನವಿ ಪುರಸ್ಕರಿಸಿ’

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ‘ಜನನ-ಮರಣ ಕಾಯ್ದೆ ಮತ್ತು ಅದಕ್ಕೆ ಸಂಬಂಧಿಸಿದ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡುವವರೆಗೆ ಲಿಂಗತ್ವ ಅಲ್ಪಸಂಖ್ಯಾತರ ಪರಿಷ್ಕರಣಾ ಕೋರಿಕೆಗಳನ್ನು ಮಾನ್ಯ ಮಾಡುವುದು ಜನನ- ಮರಣ ನೋಂದಣಿ ರಿಜಿಸ್ಟ್ರಾರ್ ಕರ್ತವ್ಯ’ ಎಂದು ಹೈಕೋರ್ಟ್ ತೀರ್ಪು ನೀಡಿದೆ.

ಈ ಸಂಬಂಧ ದಕ್ಷಿಣ ಕನ್ನಡ ಜಿಲ್ಲೆಯ 34 ವರ್ಷದ ಲಿಂಗತ್ವ ಅಲ್ಪಸಂಖ್ಯಾತರೊಬ್ಬರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

‘ತಮ್ಮ ಲಿಂಗತ್ವ ಬದಲಾಗಿರುವುದನ್ನು ಸಾಕ್ಷೀಕರಿಸುವ ದಾಖಲೆಗಳೊಂದಿಗೆ ಯಾರಾದರೂ ಜನನ ಮತ್ತು ಮರಣ ಪ್ರಮಾಣ ಪತ್ರದಲ್ಲಿ ತಿದ್ದುಪಡಿಗೆ ಸಕ್ಷಮ ಪ್ರಾಧಿಕಾರಕ್ಕೆ ಕೋರಿದರೆ ಸದ್ಯಕ್ಕೆ ಅಂತಹ ಮನವಿ ಮಾನ್ಯ ಮಾಡಲು ಯಾವುದೇ ನಿಯಮಗಳಿಲ್ಲ. ಸಕ್ಷಮ ಪ್ರಾಧಿಕಾರವು, ಜನನ ಮತ್ತು ಮರಣ ಕಾಯ್ದೆ-1969 ಅನ್ನು ಮೀರಿ ಯಾವುದೇ ರೀತಿ ಆದೇಶ ನೀಡಲೂ ಸಾಧ್ಯವಿಲ್ಲ. ಆದ್ದರಿಂದ, ಈ ನಿಟ್ಟಿನಲ್ಲಿ ನ್ಯಾಯಾಲಯದ ಮಧ್ಯಪ್ರವೇಶ ಅನಿವಾರ್ಯವಾಗಿದೆ’ ಎಂದು ಪೀಠ ಹೇಳಿದೆ.

‘ಜನನ ಮತ್ತು ಮರಣ ಕಾಯ್ದೆ-1969 ಮತ್ತು ಅದಕ್ಕೆ ಸಂಬಂಧಿಸಿದ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡುವತನಕ, ಲಿಂಗತ್ವ ಅಲ್ಪಸಂಖ್ಯಾತ (ಹಕ್ಕುಗಳ ರಕ್ಷಣೆ) ಕಾಯ್ದೆ-2019ರ ಕಲಂ 6 ಅಥವಾ 7ರಡಿ ನೀಡುವ ಪ್ರಮಾಣ ಪತ್ರವನ್ನು ಒಳಗೊಂಡಂತೆ ಲಿಂಗತ್ವ ಅಲ್ಪಸಂಖ್ಯಾತರು ಸಲ್ಲಿಸುವ ಅರ್ಜಿಯನ್ನು ರಿಜಿಸ್ಟ್ರಾರ್ ಮಾನ್ಯ ಮಾಡಬೇಕು’ ಎಂದು ಆದೇಶಿಸಿದೆ.

‘ಜನನ ಮತ್ತು ಮರಣ ನೋಂದಣಿಯಲ್ಲಿ ಅರ್ಜಿದಾರರ ಕೋರಿಕೆಯಂತೆ ನಮೂದಿಸುವುದು, ಹಿಂದಿನ ಮತ್ತು ಹಾಲಿ ಬಳಸಲಾಗುವ ಹೆಸರು ಹಾಗೂ ವಿವರ ಸೇರ್ಪಡೆ ಮಾಡಿ ಪರಿಷ್ಕೃತ ಜನನ ಅಥವಾ ಮರಣ ಪ್ರಮಾಣಪತ್ರ ನೀಡುವುದು ಜನನ-ಮರಣ ರಿಜಿಸ್ಟ್ರಾರ್ ಕರ್ತವ್ಯವಾಗಿರುತ್ತದೆ’ ಎಂದು ಹೇಳಿದೆ.

‘ರಾಜ್ಯ ಕಾನೂನು ಆಯೋಗವು ಲಿಂಗತ್ವ ಅಲ್ಪಸಂಖ್ಯಾತರ ಕಾಯ್ದೆಯನ್ನು ಅಧ್ಯಯನ ಮಾಡಿ ಜನನ ಮತ್ತು ಮರಣ ಕಾಯ್ದೆ-1969 ಮತ್ತು ಅದಕ್ಕೆ ಸಂಬಂಧಿಸಿದ ನಿಯಮಗಳಿಗೆ ಅಗತ್ಯ ತಿದ್ದುಪಡಿ ಮಾಡಿ, ವಾಸ್ತವಾಂಶ ಆಧರಿಸಿ ಶೀಘ್ರವೇ ಲಿಂಗತ್ವ ಅಲ್ಪಸಂಖ್ಯಾತರ ಕಾಯ್ದೆ ಅನುಷ್ಠಾನಕ್ಕೆ ಸಲಹೆ ನೀಡಬೇಕು’ ಎಂದು ಹೇಳಿದೆ.

‘ಈ ತೀರ್ಪಿನ ಪ್ರತಿಯನ್ನು ರಿಜಿಸ್ಟ್ರಾರ್ ಜನರಲ್ ಅವರು ರಾಜ್ಯ ಕಾನೂನು ಆಯೋಗದ ಅಧ್ಯಕ್ಷರಿಗೆ ಕಳುಹಿಸಿಕೊಡಬೇಕು’ ಎಂದೂ ನ್ಯಾಯಪೀಠ ನಿರ್ದೇಶಿಸಿದೆ. ಅರ್ಜಿದಾರರ ಪರ ಅಪರ್ಣಾ ಮೆಹ್ರೋತ್ರಾ ಮತ್ತು ವಿ. ನವೀನ್‌ಚಂದ್ರ ಹಾಗೂ ರಾಜ್ಯ ಸರ್ಕಾರದ ಪರ ಮಹಂತೇಶ್ ಶೆಟ್ಟರ್ ವಾದ ಮಂಡಿಸಿದ್ದರು.

ಪ್ರಕರಣವೇನು?: ಅರ್ಜಿದಾರರು 1983ರಲ್ಲಿ ಹುಟ್ಟಿದಾಗ ಗಂಡು ಮಗುವಾಗಿದ್ದರು. 2007ರಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತಪಾಸಣೆಗೆ ಒಳಗಾದ ಸಂದರ್ಭವೊಂದರಲ್ಲಿ; ಪುರುಷನ ದೇಹದಲ್ಲಿ ಮಹಿಳೆಯರ ಭಾವನೆಗಳು ವ್ಯಕ್ತವಾಗುವ, ಭಾವನಾತ್ಮಕ ಸಂಕಟಗಳಿಂದ (Gender Dysphoria) ಬಳಲುತ್ತಿರುವುದು ಪತ್ತೆಯಾಗಿತ್ತು.

ನಂತರ ಅರ್ಜಿದಾರರು ಲಿಂಗ ಬದಲಾವಣೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಆ ಬಳಿಕ ಅವರು ಸ್ತ್ರೀಲಿಂಗದ ಗುರುತಿಸುವಿಕೆಯೊಂದಿಗೆ ಮಹಿಳೆಯಾಗಿ ಹೆಸರು ಬದಲಿಸಿಕೊಂಡಿದ್ದರು. ತಮ್ಮ ಆಧಾರ್ ಕಾರ್ಡ್, ವಾಹನ ಚಾಲನಾ ಪರವಾನಗಿ ಮತ್ತು ಪಾಸ್‌ಪೋರ್ಟ್‌ನಂತಹ ದಾಖಲೆಗಳಲ್ಲಿನ ಹೆಸರು ಬದಲಾವಣೆಗಾಗಿ ಮಂಗಳೂರು ಮಹಾನಗರ ಪಾಲಿಕೆಗೆ ಮನವಿ ಸಲ್ಲಿಸಿದ್ದರು.

ಈ ಮನವಿಗೆ ಪ್ರತಿಯಾಗಿ ಆರೋಗ್ಯಾಧಿಕಾರಿ, ‘ಜನನ ಮತ್ತು ಮರಣ ನೋಂದಣಿ ಕಾಯ್ದೆಯ ಕಲಂ 15ರ ಅಡಿ ಈಗಾಗಲೇ ನೀಡಿರುವ ಪ್ರಮಾಣ ಪತ್ರದಲ್ಲಿ ದೋಷಗಳಿದ್ದರೆ ಸರಿಪಡಿಸಬಹುದೇ ವಿನಃ ನೀವು ಕೋರಿರುವಂತೆ ಲಿಂಗ ಬದಲಾವಣೆ ಮಾಡಿ ಪ್ರಮಾಣ ಪತ್ರ ನೀಡಲಾಗದು’ ಎಂದು ತಿಳಿಸಿದ್ದರು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಸರ್ಕಾರಿ ರಜೆ ಇದ್ದರೂ ಪರೀಕ್ಷೆ ನಡೆಸಿದ ಬೆಂಗಳೂರು ಉತ್ತರ ವಿ.ವಿ

ಪ್ರಜಾವಾಣಿ ವಾರ್ತೆ

ಕೋಲಾರ: ಮಾಜಿ ಪ್ರಧಾನಿ ಮನಮೋಹನ ಸಿಂಗ್ ನಿಧನ ಹಿನ್ನೆಲೆಯಲ್ಲಿ ಶುಕ್ರವಾರ ರಾಜ್ಯ ಸರ್ಕಾರವು ಶಾಲಾ ಕಾಲೇಜು, ಕಚೇರಿಗಳಿಗೆ ರಜೆ ಘೋಷಿಸಿದ್ದರೂ ಇಲ್ಲಿಯ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದಲ್ಲಿ ಮಾತ್ರ ಪರೀಕ್ಷೆ ನಡೆಸಲಾಗಿದೆ.

ಉತ್ತರ ವಿಶ್ವವಿದ್ಯಾಲಯ ವ್ಯಾಪ್ತಿಯ ಬೆಂಗಳೂರಿನ ಕೆ.ಆರ್.ಪುರ ಬಳಿಯ ಎರಡು ಕಾಲೇಜುಗಳಲ್ಲಿ ಸ್ನಾತಕ ಪದವಿಯ (ಯುಜಿ) ಬಿಬಿಎ ಕೋರ್ಸ್‌ನ ಪ್ರವಾಸೋದ್ಯಮ ಹಾಗೂ ಹೋಟೆಲ್ ಮ್ಯಾನೇಜ್‌ಮೆಂಟ್‌ಗೆ ಸಂಬಂಧಿಸಿದ ವಿಷಯಗಳ ಪರೀಕ್ಷೆ ನಡೆಸಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ಬೆಂಗಳೂರು ಉತ್ತರ ವಿ.ವಿ ಕುಲಸಚಿವ (ಮೌಲ್ಯಮಾಪನ) ಪ್ರೊ.ಕೆ. ತಿಪ್ಪೇಸ್ವಾಮಿ, ‘ಪ್ರಶ್ನೆ ಪತ್ರಿಕೆಯನ್ನು ಗುರುವಾರವೇ ಯುಯುಸಿಎಂಎಸ್ ಆನ್‌ಲೈನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿತ್ತು. ಪರೀಕ್ಷಾ ಕೇಂದ್ರಗಳಿಗೆ ಅದು ತಲುಪಿಯೂ ಆಗಿತ್ತು. ಹೀಗಾಗಿ, ಶುಕ್ರವಾರ ಪರೀಕ್ಷೆ ನಡೆಸಲೇಬೇಕಾದ ಅನಿವಾರ್ಯ ಸೃಷ್ಟಿಯಾಯಿತು’ ಎಂದರು.

ಬೇರೆ ವಿ.ವಿಗಳಲ್ಲಿ ಮುಂದೂಡಿಕೆ: ‘ಶುಕ್ರವಾರ (ಡಿ.27) ನಿಗದಿಯಾಗಿದ್ದ ಪರೀಕ್ಷೆಗಳನ್ನು ರಾಜ್ಯದ ವಿವಿಧ ವಿಶ್ವವಿದ್ಯಾಲಯ ಮುಂದೂಡಿವೆ. ಬೆಂಗಳೂರು ವಿ.ವಿಯ ಎಂಬಿಎ ದ್ವಿತೀಯ ಸೆಮಿಸ್ಟರ್ ಪರೀಕ್ಷೆ ಮುಂದೂಡಲಾಗಿದೆ. ಮೈಸೂರು ವಿ.ವಿಯ ಪರೀಕ್ಷೆಗಳನ್ನೂ ಮುಂದೂಡಲಾಗಿದೆ. ಕುವೆಂಪು ವಿ.ವಿಯ ಸ್ನಾತಕೋತ್ತರ ಪರೀಕ್ಷೆ ಮುಂದೂಡಲಾಗಿದೆ.

ಎನ್.ಸುಂದರರಾಮ ಹೆಗ್ಡೆ ನಿಧನ

ಕಾರ್ಕಳ (ಉಡುಪಿ ಜಿಲ್ಲೆ): ತಾಲ್ಲೂಕಿನ ನಂದಳಿಕೆ ಮಹಾಲಿಂಗೇಶ್ವರ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಎನ್.ಸುಂದರರಾಮ ಹೆಗ್ಡೆ (90) ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ ಸರಳಾ ಹೆಗ್ಡೆ ಹಾಗೂ ಪುತ್ರ ನಂದಳಿಕೆ ಸುಹಾಸ್ ಹೆಗ್ಡೆ ಇದ್ದಾರೆ.

ಇತಿಹಾಸ ಪ್ರಸಿದ್ಧಿಯ ನಂದಳಿಕೆ ಮಹಾಲಿಂಗೇಶ್ವರ ದೇವಸ್ಥಾನದ ಸಿರಿಜಾತ್ರೆಯ ರೂವಾರಿಯಾಗಿದ್ದು, ದೇವಸ್ಥಾನದ ಆಡಳಿತ ಮೊಕ್ತೇಸರರಾಗಿ 50 ವರ್ಷ ಸೇವೆ ಸಲ್ಲಿಸಿದ್ದಾರೆ. ಕಂದಾಯ ಇಲಾಖೆಯ ಅಧಿಕಾರಿಯಾಗಿದ್ದ ಅವರು 15 ವರ್ಷ ಸೂಡಾ ಗ್ರಾಮದ ಗ್ರಾಮ ಕರಣಿಕರಾಗಿಯೂ ಸೇವೆ ಸಲ್ಲಿಸಿದ್ದರು. ಸಾಮಾಜಿಕ, ಧಾರ್ಮಿಕ,ಕೃಷಿ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಮಹತ್ತರ ಕೊಡುಗೆ ನೀಡಿದ್ದರು.



ಸುಂದರರಾಮ ಹೆಗ್ಡೆ

ಸಿಇಟಿ: ಲಭ್ಯವಿದ್ದ ಸೀಟುಗಳಲ್ಲಿ ಶೇ 50ಕ್ಕಿಂತ ಹೆಚ್ಚು ಉಳಿಕೆ • ಹಗರಣದ ಶಂಕೆಗೆ ಪುಷ್ಟಿ

ನರ್ಸಿಂಗ್ ಪ್ರವೇಶದಲ್ಲೂ ‘ಸೀಟ್ ಬ್ಲಾಕಿಂಗ್’

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಉದ್ಯೋಗದ ಖಾತರಿ ಇರುವ, ಬಹುಬೇಡಿಕೆಯ ಬಿ.ಎಸ್‌ಸಿ ನರ್ಸಿಂಗ್‌ನಲ್ಲೂ ‘ಸೀಟ್ ಬ್ಲಾಕಿಂಗ್’ ಶಂಕೆ ವ್ಯಕ್ತವಾಗಿದ್ದು, ಎಂಜಿನಿಯರಿಂಗ್ ಕೋರ್ಸ್‌ಗಳ ತನಿಖೆ ನಡೆಸುತ್ತಿರುವ ಪೊಲೀಸರು ನರ್ಸಿಂಗ್ ಸೀಟು ಹಂಚಿಕೆಯತ್ತಲೂ ಕಣ್ಣು ನೆಟ್ಟಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ 2024–2025ನೇ ಶೈಕ್ಷಣಿಕ ಸಾಲಿಗೆ ಹಂಚಿಕೆ ಮಾಡಿದ್ದ ನರ್ಸಿಂಗ್ ಸೀಟುಗಳಲ್ಲಿ ಶೇ 50ಕ್ಕಿಂತ ಹೆಚ್ಚು ಸೀಟುಗಳು ಖಾಲಿ ಉಳಿದಿವೆ. ಹಾಗೆ ಉಳಿದ ಎಲ್ಲ ಸೀಟುಗಳೂ ಆಡಳಿತ ಮಂಡಳಿ ಕೋಟಾದ ಅಡಿ ಭರ್ತಿಯಾಗಿವೆ. ಹೊರ ರಾಜ್ಯದ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆದಿರುವುದು ಹಗರಣದ ಶಂಕೆಗೆ ಪುಷ್ಟಿ ನೀಡಿದೆ.

ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದ ಅಧೀನದಲ್ಲಿನ ಕಾಲೇಜುಗಳು ಸಿಇಟಿ ಅರ್ಹತಾ ಪಟ್ಟಿಯ ಆಧಾರದಲ್ಲೇ ಪ್ರವೇಶ ನೀಡುತ್ತಿದ್ದವು. ಆದರೆ, ಡೀಮ್ಡ್ ವಿಶ್ವವಿದ್ಯಾಲಯಗಳು, ಇತರೆ ಖಾಸಗಿ ಶಿಕ್ಷಣ ಸಂಸ್ಥೆಗಳು ತಾವೇ ಪ್ರತ್ಯೇಕ ಪರೀಕ್ಷೆ ನಡೆಸಿ, ಪ್ರವೇಶ ನೀಡುತ್ತಿದ್ದವು. ಕೇರಳ ಸೇರಿದಂತೆ ಹೊರ ರಾಜ್ಯದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆಯುತ್ತಿದ್ದರು. ಇದರಿಂದ ಕರ್ನಾಟಕದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಿಗಬೇಕಾದಷ್ಟು ಪ್ರಾತಿನಿಧ್ಯ ಸಿಗುತ್ತಿರಲಿಲ್ಲ.

ಕರ್ನಾಟಕದ ಬಡ, ಮಧ್ಯಮ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉದ್ಯೋಗ ಆಧಾರಿತವಾದ ನರ್ಸಿಂಗ್ ಶಿಕ್ಷಣದಲ್ಲಿ ಹೆಚ್ಚಿನ ಅವಕಾಶ ದೊರಕಬೇಕು ಎನ್ನುವ ಉದ್ದೇಶದಿಂದ ಕಳೆದ ವರ್ಷ ಸಿಇಟಿ ವ್ಯಾಪ್ತಿಗೆ ತರಲಾಗಿದೆ. ಹೊಸ ನಿಯಮದಂತೆ ಕಾಲೇಜಿಗೆ ನಿಗದಿಪಡಿಸಿರುವ ಒಟ್ಟು ಸೀಟುಗಳಲ್ಲಿ ಶೇ 20ರಷ್ಟನ್ನು ಮಾತ್ರ ಆಡಳಿತ ಮಂಡಳಿಗಳು ನೇರವಾಗಿ ಭರ್ತಿ ಮಾಡಿಕೊಳ್ಳಬಹುದು. ಶೇ 20ರಷ್ಟು ಸರ್ಕಾರಿ ಕೋಟಾ ಹಾಗೂ ಶೇ 60ರಷ್ಟು ಆಡಳಿತ ಮಂಡಳಿ ಸೀಟುಗಳನ್ನು ಕೆಇಎ ಭರ್ತಿ ಮಾಡುತ್ತದೆ.

ಸೀಟು ಉಳಿಸಲು ಹಲವು ತಂತ್ರ: ಮೊದಲು ಶೇ 80ರಷ್ಟು ಸೀಟುಗಳನ್ನು ನೇರವಾಗಿ ಭರ್ತಿ ಮಾಡಿಕೊಳ್ಳುತ್ತಿದ್ದ ಖಾಸಗಿ ಆಡಳಿತ ಮಂಡಳಿಗಳು, ಹೊರ ರಾಜ್ಯದ ವಿದ್ಯಾರ್ಥಿಗಳಿಗೇ ಮಣೆ ಹಾಕುತ್ತಿದ್ದವು. ಹಾಗಾಗಿ, ಸಿಇಟಿ ಮೂಲಕ ಬರುವ ವಿದ್ಯಾರ್ಥಿಗಳಿಂದ ಅಧಿಕ ಶುಲ್ಕ ವಸೂಲಿ ಮಾಡುವುದು, ಸಣ್ಣಪುಟ್ಟ ನ್ಯೂನತೆಗಳನ್ನು ಮುಂದಿಟ್ಟು ಸೀಟು ನಿರಾಕರಿಸುವುದು, ವಂಚಕರ ಜಾಲದ ಜತೆ ಶಾಮೀಲಾಗಿ ‘ಸೀಟ್ ಬ್ಲಾಕಿಂಗ್’ ಮೂಲಕ ಅಧಿಕ ಹಣಕ್ಕೆ ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಸೀಟು ನೀಡಿರುವ ಕುರಿತು ಹಲವು ದೂರುಗಳು ಸಲ್ಲಿಕೆಯಾಗಿವೆ.

‘ಸಿಇಟಿ ಮೂಲಕ ಹಂಚಿಕೆಯಾಗಿದ್ದ ಸೀಟಿಗೆ ₹10 ಸಾವಿರ ಶುಲ್ಕವಿತ್ತು. ಬೆಂಗಳೂರಿನ ಪ್ರತಿಷ್ಠಿತ ಸಂಸ್ಥೆಯಲ್ಲೆ ಸೀಟು ದೊರೆತಿತ್ತು. ಅಲ್ಲಿ ಹೋದಾಗ ಹೆಚ್ಚುವರಿ ₹50 ಸಾವಿರ ಕಟ್ಟುವಂತೆ ಸೂಚಿಸಿದರು. ಕಾಲೇಜಿನ ಹಾಸ್ಟೆಲ್‌ನಲ್ಲೇ ಇರಬೇಕು ಎಂಬ ಷರತ್ತು ವಿಧಿಸಿದರು. ಈ ವಿಷಯವನ್ನು ಕೆಇಎ ಗಮನಕ್ಕೆ ತಂದೆ. ನಂತರ ಪೊಲೀಸರಿಗೆ ದೂರು ನೀಡಿದ್ದೇನೆ’ ಎನ್ನುತ್ತಾರೆ ವಿದ್ಯಾರ್ಥಿ ರವಿಕುಮಾರ್.

ಅಂಕಿ ಅಂಶಗಳು

650 ಬಿ.ಎಸ್‌ಸಿ ನರ್ಸಿಂಗ್ ಕಾಲೇಜುಗಳು

2.28 ಲಕ್ಷ ಸಿಇಟಿಯಲ್ಲಿ ಅರ್ಹತೆ ಪಡೆದಿದ್ದ ವಿದ್ಯಾರ್ಥಿಗಳು

31,812 ಲಭ್ಯವಿದ್ದ ಸೀಟುಗಳು

16,744 ಉಳಿದ ಸೀಟುಗಳು

> **ಅಧಿಕ ಶುಲ್ಕ ವಸೂಲಿ ಮಾಡಿದ್ದ ಎರಡು ಹಾಗೂ ಮೂಲ ಸೌಕರ್ಯ ಕಲ್ಪಿಸದ 75 ನರ್ಸಿಂಗ್ ಕಾಲೇಜುಗಳ ಮಾನ್ಯತೆ ರದ್ದು ಮಾಡಲಾಗಿದೆ. ದೂರು ಬಂದರೆ ಕಠಿಣಕ್ರಮ ಕ್ರಮಕೈಗೊಳ್ಳುತ್ತೇವೆ**
> **ಎಂ.ಕೆ. ರಮೇಶ್**
> ಕುಲಪತಿ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ

> **37 ನರ್ಸಿಂಗ್ ಕಾಲೇಜುಗಳಿಗೆ ಹೊಸದಾಗಿ ಅನುಮತಿ ನೀಡಿದ್ದರಿಂದ 1,315 ಸೀಟುಗಳನ್ನು ವಿಶೇಷ ಸುತ್ತಿಗೆ ಪರಿಗಣಿಸಲಾಯಿತು. ಇದು ಸಹ ಸೀಟುಗಳ ಉಳಿಕೆಗೆ ಕಾರಣ**
> **ಎಚ್. ಪ್ರಸನ್ನ**
> ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

ಸೀಟು	ಶುಲ್ಕ
ಸರ್ಕಾರಿ	₹10 ಸಾವಿರ
ಆಡಳಿತ ಮಂಡಳಿ	₹1 ಲಕ್ಷ
ಹೊರರಾಜ್ಯದ ವಿದ್ಯಾರ್ಥಿಗಳಿಗೆ	₹1.40 ಲಕ್ಷ

ಅನ್ಯರಾಜ್ಯದ ಮೋಹ

ರಾಜ್ಯದ ಬಹುತೇಕ ಖಾಸಗಿ ಕಾಲೇಜುಗಳು ನಾಲ್ಕು ವರ್ಷಗಳ ಬಿ.ಎಸ್‌ಸಿ ನರ್ಸಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ₹15 ಲಕ್ಷದವರೆಗೂ ಪ್ಯಾಕೇಜ್ ನೀಡುತ್ತಿದ್ದವು. ಹಲವು ಕಾಲೇಜುಗಳಲ್ಲಿ ಕೇರಳ ಹಾಗೂ ಈಶಾನ್ಯ ರಾಜ್ಯಗಳ ವಿದ್ಯಾರ್ಥಿಗಳೇ ಅಧಿಕ ಸಂಖ್ಯೆಯಲ್ಲಿ ಇದ್ದಾರೆ.

ಮಧ್ಯವರ್ತಿಗಳ ಮೂಲಕ ಹಣ ಗಳಿಕೆಯ ವ್ಯವಹಾರ ನಡೆಸುತ್ತಿದ್ದ ಆಡಳಿತ ಮಂಡಳಿಗಳಿಗೆ ಸಿಇಟಿ ಮೂಲಕ ಭರ್ತಿ ಮಾಡಲು ಅವಕಾಶ ನೀಡಿದ್ದನ್ನು ಸಹಿಸಿಕೊಳ್ಳಲು ಸಾಧ್ಯವಾಗಿಲ್ಲ. ಹಾಗಾಗಿ, ಸೀಟ್ ಬ್ಲಾಕಿಂಗ್ ಮೂಲಕ ಶೇ 50ಕ್ಕೂ ಹೆಚ್ಚು ಸೀಟುಗಳನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ತನಿಖೆಯ ನಂತರ ಮಾಹಿತಿ ಹೊರಬರಲಿದೆ ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಶುಲ್ಕ ನಿಯಂತ್ರಣ ಸಮಿತಿಗಿಲ್ಲ ಅಧಿಕಾರ

ವೈದ್ಯಕೀಯ, ಎಂಜಿನಿಯರಿಂಗ್‌ನಂತೆ ಬಿ.ಎಸ್‌ಸಿ ನರ್ಸಿಂಗ್ ಕಾಲೇಜುಗಳು ವಸೂಲಿ ಮಾಡುವ ಹೆಚ್ಚುವರಿ ಶುಲ್ಕದ ದೂರುಗಳನ್ನು ಪರಿಶೀಲಿಸುವ ಅಧಿಕಾರವನ್ನು ಸರ್ಕಾರ ಶುಲ್ಕ ನಿಯಂತ್ರಣ ಸಮಿತಿಗೆ ವಹಿಸಿಲ್ಲ. ಇದರಿಂದ ವಿದ್ಯಾರ್ಥಿಗಳು ಯಾರ ಬಳಿ ದೂರು ನೀಡಬೇಕು ಎಂಬ ಗೊಂದಲಕ್ಕೆ ಒಳಗಾಗಿದ್ದಾರೆ.ಕೆಲವರು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ, ಕೆಲವರು ರಾಜೀವ್ ಗಾಂಧಿ ವಿಶ್ವವಿದ್ಯಾಲಯಕ್ಕೆ, ಕೆಲವರು ವೈದ್ಯಕೀಯ ಶಿಕ್ಷಣ ಇಲಾಖೆ ಎಡತಾಕಿದ್ದಾರೆ.

‘ಒಂದಿಬ್ಬರು ನರ್ಸಿಂಗ್ ಕಾಲೇಜುಗಳ ವಿರುದ್ಧ ಶುಲ್ಕ ನಿಯಂತ್ರಣ ಸಮಿತಿಗೆ ದೂರು ನೀಡಿದ್ದರು. ತಮ್ಮ ವ್ಯಾಪ್ತಿಗೆ ಬಾರದಿದ್ದರೂ, ಮಾನವೀಯ ದೃಷ್ಟಿಯಿಂದ ಅವರು ನೀಡಿದ್ದ ಶುಲ್ಕ ಹಿಂದಿರುಗಿಸಲು ಸಹಾಯ ಮಾಡಿದೆವು’ ಎನ್ನುತ್ತಾರೆ ಸಮಿತಿಯ ಅಧ್ಯಕ್ಷ ನ್ಯಾಯಮೂರ್ತಿ ಬಿ. ಶ್ರೀನಿವಾಸ ಗೌಡ.

ಚಿಕ್ಕ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡಿದ್ದ ಮನಮೋಹನ ಸಿಂಗ್ • ಒಡನಾಡಿ ವ್ಯಕ್ತಿತ್ವ ನೆನೆದು ಭಾವುಕರಾದ ಸ್ನೇಹಿತರು, ಸಂಬಂಧಿಗಳು

ಅಮೃತಸರದಿಂದ ಹುಬ್ಬಳ್ಳಿವರೆಗೆ ನಂಟಿನ ಬಳ್ಳಿ...

ಅಮೃತಸರ (ಪಿಟಿಐ): ಮನಮೋಹನ ಸಿಂಗ್ ಅವರು ಬಾಲ್ಯ ಕಳೆದ ಪವಿತ್ರ ನಗರ ಅಮೃತಸರದೊಂದಿಗೆ ಜೀವಿತಾವಧಿಯ ಕೊನೆಯವರೆಗೂ ವಿಶೇಷ ಬಾಂಧವ್ಯ ಹೊಂದಿದ್ದರು. ಅವರ ನಿಧನದ ಬೆನ್ನಲ್ಲೇ, ಅವರ ಜೊತೆಗಿನ ಒಡನಾಟವನ್ನು ನೆನೆದು ಸ್ಥಳೀಯರು ಭಾವುಕರಾಗಿದ್ದಾರೆ.

ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಚಕ್ವಾಲ್ ಜಿಲ್ಲೆಯ ಗಹ್‌ನಲ್ಲಿ ಜನಿಸಿದ್ದ ಸಿಂಗ್ ಕುಟುಂಬಸ್ಥರು ದೇಶ ಇಬ್ಭಾಗಗೊಂಡ ಬಳಿಕ ಅಮೃತಸರಕ್ಕೆ ವಲಸೆ ಬಂದು ನೆಲಸಿದ್ದರು. ಸಿಂಗ್ ಅವರು ನಗರದ ಶಾಲೆಯಲ್ಲಿ ಪ್ರಾಥಮಿಕ, ಪ್ರೌಢ ವಿದ್ಯಾಭ್ಯಾಸ ಮುಗಿಸಿ, ನಂತರ ಇಲ್ಲಿನ ಹಿಂದೂ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಷಯದದಲ್ಲಿ ಪದವಿ ಪಡೆದಿದ್ದರು.

ಸಿಂಗ್ ಅವರ ಮಲ ಸಹೋದರ ಸುರ್ಜಿತ್ ಸಿಂಗ್ ಕೊಹ್ಲಿ ಅವರು ಅಮೃತಸರದಲ್ಲಿಯೇ ಸಿದ್ಧ ಉಡುಪು ಕಾರ್ಖಾನೆ ನಡೆಸುತ್ತಿದ್ದಾರೆ.

'ಚಿಕ್ಕ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ಬಳಿಕ ಅಜ್ಜಿಯ ಆಶ್ರಯದಲ್ಲಿ ಬೆಳೆದಿದ್ದ ಸಿಂಗ್ ಅವರು ಕುಟುಂಬಸ್ಥರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಪ್ರತಿ ಸಲ ನಗರಕ್ಕೆ ಭೇಟಿ ನೀಡಿದ ವೇಳೆ ಸ್ವರ್ಣಮಂದಿರಕ್ಕೆ ಭೇಟಿ ನೀಡುತ್ತಿದ್ದರು' ಎಂದು ನೆನಪಿಸಿಕೊಂಡರು.

'ನಗರಕ್ಕೆ ವಲಸೆ ಬಂದಿದ್ದ ಕುಟುಂಬಸ್ಥರು ಪೆಠಾ ವಾಲಾ ಬಜಾರ್‌ನ ಸಣ್ಣದಾದ ಬಾಡಿಗೆ ಮನೆಯಲ್ಲಿದ್ದರು. ಸಿಂಗ್ ಅವರ ಪದವಿ ಮುಗಿಯುವವರೆಗೂ ಅದೇ ಮನೆಯಲ್ಲಿ ವಾಸಿಸುತ್ತಿದ್ದರು. ಈಗ ಆ ಮನೆಯೂ ಸಂಪೂರ್ಣವಾಗಿ ಹಾಳಾಗಿದ್ದು, ಅವರ ಕುಟುಂಬಸ್ಥರು ಯಾರೂ ಕೂಡ ಅಲ್ಲಿ ವಾಸಿಸುತ್ತಿಲ್ಲ' ಎಂದು ಸ್ಥಳೀಯ ನಿವಾಸಿ ರಾಜ್‌ಕುಮಾರ್ ಅವರು ನೆನಪಿಸಿಕೊಂಡರು.

'ಯುಪಿಎ ಸರ್ಕಾರದ ಅವಧಿಯಲ್ಲಿ ಪ್ರಧಾನಿಯಾಗಿದ್ದ ವೇಳೆ ನಗರಕ್ಕೆ ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದರು' ಎಂದು ಸ್ಥಳೀಯರು ನೆನಪಿಸಿಕೊಂಡರು.

ಪ್ರಧಾನಿಯಾಗಿದ್ದಾಗ ಮನಮೋಹನ ಸಿಂಗ್ ಅವರು ನೀಡಿದ ಸಣ್ಣ ಸಲಹೆಯಿಂದ ಎಂಟು ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲು ಸಾಧ್ಯವಾಗಿತ್ತು

ಕೆ.ಎಚ್.ಮುನಿಯಪ್ಪ, ಆಹಾರ ಸಚಿವ

ಅಮೃತಸರದಲ್ಲಿ ಸ್ವರ್ಣ ಮಂದಿರ ಸಮೀಪ ಸಿಂಗ್ ಅವರು ವಾಸಿಸುತ್ತಿದ್ದ ಮನೆಯ ಮಾಹಿತಿ ನೀಡಿದ ಸ್ಥಳೀಯರು –ಪಿಟಿಐ ಚಿತ್ರ

'ಮಾರುತಿ 800' ಅಚ್ಚುಮೆಚ್ಚು

ಲಖನೌ: ಮನಮೋಹನ ಸಿಂಗ್ ಅವರು ಬಿಎಂಡಬ್ಲ್ಯು ಕಾರಿಗಿಂತಲೂ, ತಮ್ಮ ಹಳೆಯ ಮಾರುತಿ 800 ಕಾರನ್ನೇ ಹೆಚ್ಚು ಇಷ್ಟಪಡುತ್ತಿದ್ದರು ಎಂದು ಸಿಂಗ್ ಅವರ ಮಾಜಿ ಅಂಗರಕ್ಷಕ ಹಾಗೂ ಉತ್ತರ ಪ್ರದೇಶದ ಸಮಾಜ ಕಲ್ಯಾಣ ಸಚಿವ ಅಸೀಂ ಅರುಣ್ ಅವರು ತಿಳಿಸಿದ್ದಾರೆ.

'ಸಿಂಗ್ ಅವರು ವೈಯಕ್ತಿಕವಾಗಿ ಮಾರುತಿ 800 ಕಾರನ್ನು ಮಾತ್ರ ಹೊಂದಿದ್ದರು. ಪ್ರಧಾನಿಯಾಗಿದ್ದ ಅವರನ್ನು, ಭದ್ರತಾ ದೃಷ್ಟಿಯಿಂದ ಹೆಚ್ಚು ಸುರಕ್ಷವಾಗಿರುವ ಬಿಎಂಡಬ್ಲ್ಯು ಕಾರಿನಲ್ಲಿ ಕರೆದೊಯ್ಯಬೇಕಿತ್ತು. ಆಗ ಅವರು 'ಮಾರುತಿ ಕಾರೇ ತಮಗೆ ಹೆಚ್ಚು ಇಷ್ಟ ಹಾಗೂ ಬಿಎಂಡಬ್ಲ್ಯು ಕಾರಿನ ಪ್ರಯಾಣ ತಮಗಿಷ್ಟವಾಗುವುದಿಲ್ಲ' ಎಂದು ಹೇಳುತ್ತಿದ್ದರು. 'ನನ್ನ ಕಾರು ಅದು' ಎಂದು ಮಾರುತಿ ಕಾರಿನತ್ತ ಕೈ ತೋರಿಸುತ್ತಿದ್ದರು' ಎಂದು ಅಸೀಂ ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

ಮನಮೋಹನ ಸಿಂಗ್ ಅವರು ಪ್ರಧಾನಿಯಾಗಿದ್ದ ವೇಳೆ, 2004ರಿಂದ 2007ರ ವರೆಗೆ ಅಂಗರಕ್ಷಕರಾಗಿ ಅಸೀಂ ಅವರು ಕಾರ್ಯನಿರ್ವಹಿಸಿದ್ದರು.

ಮನಮೋಹನ ಸಿಂಗ್ ಅವರನ್ನು ಮನಮಿತ್ ಅವರ ಕುಟುಂಬದ ಸದಸ್ಯರು ಭೇಟಿಯಾದ ಸಂದರ್ಭ

ಏಳು ಸಲ ರಾಜೀನಾಮೆ 'ಅಸ್ತ್ರ' ಬಳಕೆ

ನವದೆಹಲಿ: ಮನಮೋಹನ ಸಿಂಗ್ ಅವರು ತಾವು ಬಯಸಿದ ಕಾರ್ಯವನ್ನು ಸಾಧಿಸಲು ವೃತ್ತಿ ಜೀವನದ ವಿವಿಧ ಘಟ್ಟಗಳಲ್ಲಿ ಒಟ್ಟು ಏಳು ಸಲ ರಾಜೀನಾಮೆ 'ಅಸ್ತ್ರ'ವನ್ನು ಬಳಸಿದ್ದಾರೆ.

ಪ್ರಧಾನ ಮಂತ್ರಿಗಳಾಗಿದ್ದ ರಾಜೀವ್ ಗಾಂಧಿ ಮತ್ತು ಪಿ.ವಿ.ನರಸಿಂಹ ರಾವ್ ಹಾಗೂ ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದ ಸೋನಿಯಾ ಗಾಂಧಿ ಅವರೂ ಸಿಂಗ್ ಅವರ ಈ 'ರಾಜೀನಾಮೆ ಬೆದರಿಕೆ'ಯನ್ನು ಎದುರಿಸಿದ್ದಾರೆ. ಆದರೂ ಸಿಂಗ್ ಅವರನ್ನು ಈ ಮೂವರೂ ಕೈಬಿಡಲಿಲ್ಲ.

ಅವರ ಮೊದಲ ರಾಜೀನಾಮೆ ಬೆದರಿಕೆ ಹಣಕಾಸು ಸಚಿವಾಲಯದಲ್ಲಿ ಆರ್ಥಿಕ ಸಲಹೆಗಾರರಾಗಿದ್ದಾಗ 1971ರಲ್ಲಿ ಬಂದಿತ್ತು. ಅಂದು ಸಚಿವರಾಗಿದ್ದ ಎಲ್.ಎನ್. ಮಿಶ್ರಾ ಅವರು ಸಂಪುಟದ ಟಿಪ್ಪಣಿಯೊಂದಕ್ಕೆ ಸಂಬಂಧಿಸಿದಂತೆ ಸಿಂಗ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದರು. ಇದರಿಂದ ಅಸಮಾಧಾನಗೊಂಡ ಸಿಂಗ್, ರಾಜೀನಾಮೆ ನೀಡಲು ಮುಂದಾಗಿದ್ದರು.

ಆದರೆ, ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರ ಕಾರ್ಯದರ್ಶಿಯಾಗಿದ್ದ ಪಿ.ಎನ್.ಹಕ್ಸರ್ ಅವರು ಮುಖ್ಯ ಆರ್ಥಿಕ ಸಲಹೆಗಾರನ ಹುದ್ದೆ ನೀಡುವ ಮೂಲಕ ಸಿಂಗ್ ಅವರನ್ನು ಅಲ್ಲೇ ಉಳಿಸಿಕೊಂಡರು. ಮನಮೋಹನ್ ಅವರ ಪುತ್ರಿ ದಮನ್ ಸಿಂಗ್ ತಮ್ಮ 'ಸ್ಟ್ರಿಕ್ಟ್ಲಿ ಪರ್ಸನಲ್: ಮನಮೋಹನ ಆ್ಯಂಡ್ ಗುರುಶರಣ್' ಪುಸ್ತಕದಲ್ಲಿ ಇದನ್ನು ಬರೆದುಕೊಂಡಿದ್ದಾರೆ.

1980ರಲ್ಲಿ ಸಿಂಗ್ ಅವರು ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದ ಅವಧಿಯಲ್ಲಿ ರಾಜೀವ್ ಗಾಂಧಿ ಅವರು 'ಯೋಜನಾ ಆಯೋಗದಲ್ಲಿರುವವರು ಜೋಕರ್‌ಗಳ ಗುಂಪು' ಎಂದು ಹೇಳಿದ್ದರು. ಇದರಿಂದ ತುಂಬಾ ನೊಂದುಕೊಂಡಿದ್ದ ಸಿಂಗ್, ರಾಜೀನಾಮೆಗೆ ಮುಂದಾಗಿದ್ದರು.

ತಾವು ಹಣಕಾಸು ಸಚಿವರಾಗಿದ್ದಾಗ ಹರ್ಷದ್ ಮೆಹ್ತಾ ಷೇರು ಹಗರಣ ಕೇಳಿಬಂದಾಗ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಆದರೆ ಅಂದು ಪ್ರಧಾನಿಯಾಗಿದ್ದ ಪಿ.ವಿ.ನರಸಿಂಹರಾವ್ ಅವರು ರಾಜೀನಾಮೆಯನ್ನು ಅಂಗೀಕರಿಸಲಿಲ್ಲ. ಈ ಘಟನೆಯನ್ನು ಸ್ವತಃ ಸಿಂಗ್ ಅವರೇ 2016ರಲ್ಲಿ ನೆನಪಿಸಿಕೊಂಡಿದ್ದರು.

ಸೋನಿಯಾ ಗಾಂಧಿ ಅವರು ಮೂರು ಸಂದರ್ಭಗಳಲ್ಲಿ ಸಿಂಗ್ ಅವರಿಂದ ರಾಜೀನಾಮೆ ಬೆದರಿಕೆ ಎದುರಿಸಿದ್ದಾರೆ. 2005ರಲ್ಲಿ ಭಾರತ– ಅಮೆರಿಕ ಜಂಟಿ ಸಮರಾಭ್ಯಾಸವನ್ನು ಎಡಪಕ್ಷಗಳು ವಿರೋಧಿಸಿದಾಗ ಮತ್ತು ಭಾರತ– ಅಮೆರಿಕ ಅಣು ಒಪ್ಪಂದದ ವಿಚಾರದಲ್ಲಿ ಎಡಪಕ್ಷಗಳು 2007 ಹಾಗೂ 2008ರಲ್ಲಿ ಅಪಸ್ವರ ಎತ್ತಿದಾಗಲೂ ಅವರು ರಾಜೀನಾಮೆಗೆ ಮುಂದಾಗಿದ್ದರು. ಆದರೆ ಈ ಮೂರೂ ಸಂದರ್ಭಗಳಲ್ಲಿ ಅವರ ಮನವೊಲಿಸುವಲ್ಲಿ ಸೋನಿಯಾ ಯಶಸ್ವಿಯಾಗಿದ್ದರು.



ಕನ್ನಡ ನಾಡಿನಲ್ಲಿ ಸಿಂಗ್ ಸಾಹೇಬರ ಬಂಧುಗಳು

ಹುಬ್ಬಳ್ಳಿ: ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರು ಹುಬ್ಬಳ್ಳಿಯ ಜೊತೆ ನಂಟು ಹೊಂದಿದ್ದರು. ಅವರ ಪತ್ನಿ ಗುರುಶರಣ್ ಕೌರ್ ಸಹೋದರಿ ಹರ್‌ಪ್ರೀತ್ ಕೌರ್ ಕುಟುಂಬದವರು ಹುಬ್ಬಳ್ಳಿಯ ವಿದ್ಯಾನಗರದಲ್ಲಿ ವಾಸವಿದ್ದಾರೆ.

ಹಲವು ವರ್ಷಗಳ ಹಿಂದೆ ಹರ್‌ಪ್ರೀತ್ ಕೌರ್ ಕುಟುಂಬವು ಹುಬ್ಬಳ್ಳಿಗೆ ಬಂದು ವ್ಯಾಪಾರ ಆರಂಭಿಸಿದ್ದರು. ಅವರ ಮಕ್ಕಳಾದ ಮನ್‌ಮಿತ್ ಹಾಗೂ ಸಹೋದರರು ಈಗ ಆಟೊಮೊಬೈಲ್ ಬಿಡಿಭಾಗಗಳ ಮಳಿಗೆ ತೆರೆದಿದ್ದಾರೆ. ಅಲ್ಲದೇ, ಪಂಜಾಬಿ ಢಾಬಾ ಕೂಡ ಹೊಂದಿದ್ದಾರೆ.

'ಅತ್ಯಂತ ಮೇಧಾವಿಯಾಗಿದ್ದ ಮನಮೋಹನ ಸಿಂಗ್ ಅವರು ಸೌಮ್ಯ ಸ್ವಭಾವವರು ಆಗಿದ್ದರು. ದೆಹಲಿ, ಮುಂಬೈನಲ್ಲಿ ಆಗಾಗ ಭೇಟಿಯಾಗುತ್ತಿದ್ದೆವು. ಆತ್ಮೀಯತೆಯಿಂದ ಕಾಣುತ್ತಿದ್ದರು' ಎಂದು ಹರಪ್ರೀತ್ ಕೌರ್ ಅವರ ಪುತ್ರ ಮನ್‌ಮಿತ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕಳೆದ ಸಲ ನಾವು ಮುಂಬೈನಲ್ಲಿ ಭೇಟಿಯಾದಾಗ ಮನಮೋಹನ ಸಿಂಗ್ ಅವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದನ್ನು ಮತ್ತು ಧಾರವಾಡ ಪೇಢೆಯನ್ನು ನೆನಪಿಸಿಕೊಂಡರು' ಎಂದರು.

ಸಿಂಗ್ ನಾಯಕತ್ವ; ಸಂಪುಟ ಶ್ಲಾಘನೆ

'ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರು ಸಾರ್ವಜನಿಕ ಜೀವನದಲ್ಲಿ ಛಾಪು ಮೂಡಿಸಿದ ಶ್ರೇಷ್ಠ ರಾಜಕಾರಣಿ ಮತ್ತು ಉತ್ತಮ ನಾಯಕ' ಎಂದು ಕೇಂದ್ರ ಸಚಿವ ಸಂಪುಟ ಶುಕ್ರವಾರ ಶ್ಲಾಘಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಎರಡು ನಿಮಿಷ ಮೌನಾಚರಣೆ ಮಾಡಲಾಯಿತು. ಬಳಿಕ ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸಲಾಯಿತು.

ಸಾಧಿಸಿದ್ದು...

ಪ್ರಧಾನಿಯಾಗಿ ನನಗೆ ಸಾಧನೆ ಮಾಡಿದೆ ಎನಿಸಿದ್ದು ಅಮೆರಿಕ ಜತೆಗೆ ಪರಮಾಣು ಒಪ್ಪಂದ ಮಾಡಿಕೊಂಡಿದ್ದಾಗಿತ್ತು. ದೇಶದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗೆ ಅದು ಕಾರಣವಾಯಿತು. ತಾಂತ್ರಿಕವಾಗಿ ದೇಶ ಮುನ್ನಡೆಯಲು ಹಲವು ದಾರಿಗಳನ್ನು ಅದು ತೆರೆದಿಟ್ಟಿತು.

ಸಾಧಿಸಲಾಗದ್ದು...

ಆರೋಗ್ಯ ಕ್ಷೇತ್ರದಲ್ಲಿ ಅದರಲ್ಲೂ ವಿಶೇಷವಾಗಿ ಮಕ್ಕಳು ಹಾಗೂ ಮಹಿಳಾ ಆರೋಗ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಕೆಲಸ ಮಾಡಬೇಕಿತ್ತು. ಪ್ರಾರಂಭಿಸಲಾಗಿದ್ದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಕಾರ್ಯಕ್ರಮವು ಪರಿಣಾಮ ಬೀರಿತ್ತಾದರೂ, ಅಂದುಕೊಂಡಷ್ಟು ಸಾಧಿಸಲು ಆಗಿರಲಿಲ್ಲ.

(ಪ್ರಧಾನಿ ಹುದ್ದೆಯಿಂದ ನಿರ್ಗಮಿಸಿದ್ದಾಗ ಮನಮೋಹನ ಸಿಂಗ್ ಆಡಿದ್ದ ಮಾತು)

ದೇಶದ ಆರ್ಥಿಕತೆ ಸರಿದಾರಿಗೆ ತಂದಿದ್ದ ಸಿಂಗ್: ದೇವೇಗೌಡ

ಪ್ರಜಾವಾಣಿ ವಾರ್ತೆ



ಎಚ್.ಡಿ.ದೇವೇಗೌಡ

ಬೆಂಗಳೂರು: 'ದೇಶದ ಆರ್ಥಿಕತೆ ಶೋಚನೀಯವಾಗಿದ್ದಾಗ ಸರ್ಕಾರವು 130 ಟನ್ ಚಿನ್ನ ಅಡವಿಟ್ಟಿತ್ತು. ಅಂತಹ ಭೀಕರ ಸನ್ನಿವೇಶದಲ್ಲಿ ಮನಮೋಹನ ಸಿಂಗ್ ಹಣಕಾಸು ಸಚಿವರಾಗಿ ಅಧಿಕಾರಕ್ಕೆ ಬಂದರು. ಆರ್ಥಿಕತೆಯನ್ನು ಸರಿದಾರಿಗೆ ತಂದರು' ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹೇಳಿದರು.

ಜೆಡಿಎಸ್ ಪಕ್ಷದ ಕಚೇರಿ ಜೆ.ಪಿ.ಭವನದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಮನಮೋಹನ ಸಿಂಗ್ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, 'ಪಿ.ವಿ.ನರಸಿಂಹರಾವ್ ಪ್ರಧಾನಿಯಾಗಿದ್ದರು. ನಾನು ಅದೇ ಮೊದಲ ಬಾರಿಗೆ ಲೋಕಸಭೆ ಪ್ರವೇಶಿಸಿದ್ದೆ. ಆರ್ಥಿಕತೆಯನ್ನು ಸರಿದಾರಿಗೆ ತರಲು ಹತ್ತಾರು ತರದ ಯತ್ನಗಳು ನಡೆಯುತ್ತಿದ್ದವು. ಅದೇ ಸಂದರ್ಭದಲ್ಲಿ ಮನಮೋಹನ ಸಿಂಗ್ ಆರ್ಥಿಕ ಸುಧಾರಣೆಗೆ ಮುಂದಾದರು' ಎಂದು ವಿವರಿಸಿದರು.

'ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳನ್ನು ಜಾರಿಗೆ ತಂದರು. ಆಗ ನಾನು ಆ ನೀತಿಗಳನ್ನು ಟೀಕಿಸಿದ್ದೆ. ಆದರೆ ಅವರು ಬಿಕ್ಕಟ್ಟನ್ನು ಸರಿಯಾಗಿ ನಿಭಾಯಿಸಿದರು. ಆರ್ಥಿಕ ಸುಧಾರಣೆಗಳನ್ನು ತಂದರು. ಅದು ಬಹುದೊಡ್ಡ ಬದಲಾವಣೆಯಾಗಿತ್ತು. ಆ ಮೂಲಕ ದೇಶವನ್ನು ಸಂಕಷ್ಟದಿಂದ ಪಾರು ಮಾಡಿದರು. ಜಾಗತಿಕ ಮಟ್ಟದಲ್ಲಿ ದೇಶದ ಗೌರವ ಉಳಿಸಿದರು' ಎಂದರು.

ನನ್ನ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡಿದ್ದರು: ಮಲೇಷ್ಯಾ ಪ್ರಧಾನಿ

ಅನ್ವರ್

ಸಿಂಗಪುರ (ಪಿಟಿಐ): ಮನಮೋಹನ ಸಿಂಗ್ ಅವರಿಗೆ ಶುಕ್ರವಾರ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿ ನುಡಿನಮನದ ಪತ್ರ ಬರೆದಿರುವ ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ, ತಾನು ಜೈಲಿನಲ್ಲಿದ್ದಾಗ ತಮ್ಮ ಮಕ್ಕಳಿಗೆ ಭಾರತದ ನಾಯಕ ಸಿಂಗ್ ಅವರು ವಿದ್ಯಾರ್ಥಿವೇತನ ನೀಡಿದ್ದನ್ನು ಸ್ಮರಿಸಿದ್ದಾರೆ.

ಗುರುವಾರ ನಿಧನರಾದ ಮಾಜಿ ಪ್ರಧಾನಿಯನ್ನು ಸ್ಮರಿಸಿ 'ಎಕ್ಸ್'ನಲ್ಲಿ ನುಡಿನಮನ ಪತ್ರ ಹಂಚಿಕೊಂಡಿರುವ ಅನ್ವರ್, 'ಭಾರತವು ಆರ್ಥಿಕ ಸಂಕಷ್ಟದಲ್ಲಿದ್ದಾಗ ವಿಶ್ವದ ಆರ್ಥಿಕತಜ್ಞ ದೈತ್ಯರಲ್ಲಿ ಒಬ್ಬರಾಗಿ ಹೊರಹೊಮ್ಮಿದವರು ಸಿಂಗ್. ಭಾರತದ ಆರ್ಥಿಕ ಸುಧಾರಣೆಗಳ ಶಿಲ್ಪಿ ಎನಿಸಿರುವ ಈ ಮಹಾನ್ ವ್ಯಕ್ತಿ ನನ್ನ ಮಿತ್ರ, ನನ್ನ ಅಣ್ಣ... ಮನಮೋಹನ' ಎಂದೂ ಬಣ್ಣಿಸಿದ್ದಾರೆ.

'ಸಿಂಗ್ ಅವರು ರಾಜಕಾರಣಿಯಾಗಿ ಸ್ವಲ್ಪ ವಿಚಿತ್ರ. ಆದರೆ ರಾಜನೀತಿಜ್ಞರಾಗಿ ದೃಢನಿಶ್ಚಯವುಳ್ಳವರು, ಮುಂದಿನ ಪೀಳಿಗೆಗೆ ಸ್ಫೂರ್ತಿ ನೀಡುವ ಪರಂಪರೆಯನ್ನು ಅವರು ಬಿಟ್ಟು ಹೋಗಿದ್ದಾರೆ' ಎಂದು ಪೋಸ್ಟ್ ಮಾಡಿದ್ದಾರೆ.

'ದೇಶದ ಭವಿಷ್ಯ ರೂಪಿಸಿದ ಕಾರ್ಯ'

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರಿಗೆ ನವದೆಹಲಿಯಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿಯು (ಸಿಡಬ್ಲ್ಯುಸಿ) ಸಂತಾಪ ಸಲ್ಲಿಸಿತು.

'ಭಾರತದ ರಾಜಕೀಯ ಹಾಗೂ ಅರ್ಥವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸುವ ಮೂಲಕ ದೇಶ ಹಾಗೂ ವಿಶ್ವದಾದ್ಯಂತ ಗೌರವಕ್ಕೆ ಪಾತ್ರವಾಗಿದ್ದ ಮೇರು ವ್ಯಕ್ತಿತ್ವದ ವ್ಯಕ್ತಿಯಾಗಿದ್ದರು. 1990ರ ದಶಕದಲ್ಲಿ ದೇಶದ ಹಣಕಾಸು ಸಚಿವರಾಗಿ ಡಾ. ಸಿಂಗ್ ಅವರು ಭಾರತದ ಆರ್ಥಿಕ ಉದಾರೀಕರಣದ ಶಿಲ್ಪಿಯಾಗಿದ್ದರು' ಎಂದು ಬಣ್ಣಿಸಿದೆ.

'ಆರ್ಥಿಕ ಸುಧಾರಣೆ, ಸಾಮಾಜಿಕ ನ್ಯಾಯ, ಸಮಗ್ರ ಬೆಳವಣಿಗೆ ಕುರಿತ ಅವರ ದೃಷ್ಟಿಯು ನಮಗೆ ಸ್ಫೂರ್ತಿಯಾಗಿದ್ದು, ಮಾರ್ಗದರ್ಶನವಾಗಿದೆ. ಸಮಗ್ರತೆ, ಶ್ರದ್ಧೆ ಹಾಗೂ ಮಾನವೀಯ ಗುಣಗಳು ಭವಿಷ್ಯದ ಪೀಳಿಗೆಗೆ ಆದರ್ಶಪ್ರಾಯವಾಗಿರಲಿದೆ' ಎಂದು ಹೇಳಿತು.

'ಸಿಂಗ್ ಅವರ ಜೀವನ ಹಾಗೂ ಕೆಲಸವು ದೇಶದ ಭವಿಷ್ಯವನ್ನು ಆಳವಾಗಿ ರೂಪಿಸಿದ್ದು, ನೈಜ ಮುತ್ಸದ್ದಿಯಾಗಿದ್ದರು' ಎಂದು ಸಂತಾಪ ನಿರ್ಣಯದಲ್ಲಿ ತಿಳಿಸಲಾಗಿದೆ.

ಮನಮೋಹನ ಸಿಂಗ್ ಅವರ ನಿಧನವು ನನಗೆ 'ವೈಯಕ್ತಿಕ ನಷ್ಟ' ಉಂಟುಮಾಡಿದೆ. ಅವರು ನನ್ನ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕರಾಗಿದ್ದರು. ಪಕ್ಷವು ಒಬ್ಬ ಶ್ರೇಷ್ಠ ನಾಯಕನನ್ನು ಕಳೆದುಕೊಂಡಿದೆ. ಭಾರತದ ಪ್ರಗತಿ ಮತ್ತು ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿರುವ ನಾಯಕನನ್ನು ಹೊಂದಿದ್ದಕ್ಕಾಗಿ ನಾವು (ಕಾಂಗ್ರೆಸ್ ಪಕ್ಷ) ಮತ್ತು ದೇಶದ ಜನರು ಎಂದೆಂದಿಗೂ ಹೆಮ್ಮೆಪಡುತ್ತೇವೆ. ಅವರು ನಿರ್ವಹಿಸಿದ ಪ್ರತಿಯೊಂದು ಉನ್ನತ ಹುದ್ದೆಗೂ ಗೌರವವನ್ನು ತಂದುಕೊಟ್ಟಿದ್ದಾರೆ.

ಸೋನಿಯಾ ಗಾಂಧಿ, ಕಾಂಗ್ರೆಸ್ ನಾಯಕಿ

ಮನಮೋಹನ ಸಿಂಗ್ ಅವರ ಪಾರ್ಥಿವ ಶರೀರಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗೌರವ ಸಲ್ಲಿಸಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಂಗ್ ಅವರ ಕುಟುಂಬದ ಸದಸ್ಯರು ಇದ್ದರು –ಪಿಟಿಐ ಚಿತ್ರ

ಬೆಳಗಾವಿಯಲ್ಲೇ ಶ್ರದ್ಧಾಂಜಲಿ ಸಲ್ಲಿಸಿದ ಕೆಪಿಸಿಸಿ ನಾಯಕರು

'ಸಿಂಗ್ ಹೆಸರಲ್ಲಿ ಅಧ್ಯಯನ ಕೇಂದ್ರ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮಾಜಿ ಪ್ರಧಾನಿ, ಶ್ರೇಷ್ಠ ಅರ್ಥಶಾಸ್ತ್ರಜ್ಞ ಮನಮೋಹನ ಸಿಂಗ್ ಅವರ ಹೆಸರಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಕೇಂದ್ರ ಸ್ಥಾಪಿಸಲಾಗುವುದು. ಜಗತ್ತಿನ ಎಲ್ಲೆಡೆಯಿಂದ ಆಸಕ್ತರು ಅಲ್ಲಿಗೆ ಅಧ್ಯಯನಕ್ಕೆ ಬರುವಂತೆ ಮಾಡಲಾಗುವುದು' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕೆಪಿಸಿಸಿ ವತಿಯಿಂದ ಶುಕ್ರವಾರ ನಡೆದ ಮನಮೋಹನ ಸಿಂಗ್ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮನಮೋಹನ ಸಿಂಗ್ ಅವರ ರೂಪದಲ್ಲಿ ನಾವು ಮತ್ತೊಬ್ಬ ಗಾಂಧಿ ಅವರನ್ನು ಕಳೆದುಕೊಂಡಿದ್ದೇವೆ' ಎಂದರು.

ಇದಕ್ಕೂ ಮುನ್ನ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಮನಮೋಹನ ಸಿಂಗ್ ಅವರ ಅಗಲಿಕೆ ಭಾರತಕ್ಕೆ ಅಷ್ಟೇ ಅಲ್ಲದೇ ಇಡೀ ಜಗತ್ತಿಗೆ ದೊಡ್ಡ ಹಾನಿ. ತಾವು ಬದುಕಿರುವಾಗ ಅಷ್ಟೊಂದು ಪ್ರಚಾರ ಸಿಗುವುದಿಲ್ಲ. ಸತ್ತ ಬಳಿಕ ಮಾಧ್ಯಮದವರು ಹೆಚ್ಚು ಪ್ರಚಾರ ಮಾಡುತ್ತಾರೆ ಎನ್ನುತ್ತಿದ್ದರು. ಆ ಮಾತು ನಿಜವಾಯಿತು' ಎಂದರು.

'ಮನಮೋಹನ ಸಿಂಗ್ ಅಧಿಕಾರ ವಹಿಸಿಕೊಳ್ಳುವ ಮೊದಲು ದೇಶದ ಆರ್ಥಿಕತೆ ವಿಶ್ವಕ್ಕೆ ತೆರೆದುಕೊಂಡಿರಲಿಲ್ಲ. ಜಾಗತೀಕರಣ, ಉದಾರೀಕರಣ ನೀತಿಗಳ ಮೂಲಕ ಅವರು ಮುಕ್ತಗೊಳಿಸಿದರು. ಆರ್ಥಿಕತೆಗೆ ಹೊಸ ಚೈತನ್ಯ ತುಂಬಿದರು' ಎಂದರು.

'ಸೋನಿಯಾ ಗಾಂಧಿ ಅವರು ಪ್ರಧಾನಿ ಹುದ್ದೆಯನ್ನು ತ್ಯಾಗ ಮಾಡಿ ಮನಮೋಹನ ಸಿಂಗ್ ಅವರನ್ನು ಆಯ್ಕೆ ಮಾಡಿದರು. ಹತ್ತು ವರ್ಷ ಕಾಲ ದೇಶವನ್ನು ಅತ್ಯಂತ ಸದೃಢವಾಗಿ ಮುನ್ನಡೆಸಿ, ಸೋನಿಯಾ ಗಾಂಧಿ ಅವರ ನಿರ್ಧಾರ ಎಷ್ಟು ಮುಂದಾಲೋಚನೆಯಿಂದ ಕೂಡಿತ್ತು ಎಂಬುದನ್ನು ಸಾಬೀತು ಮಾಡಿದರು' ಎಂದರು.

ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಮಾತನಾಡಿ, 'ಮನಮೋಹನ ಸಿಂಗ್ ಜಗತ್ತಿನ ಆರ್ಥಿಕ ಸೂರ್ಯ. ಅವರ ಅವಧಿಯಲ್ಲಿ ಭಾರತದ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಏರಿಕೆಯಾಗಿದ್ದು ಕಂಡು ಇಡೀ ಜಗತ್ತು ಬೆರಗಾಗಿತ್ತು. ಅವರ ಆರ್ಥಿಕ ನೀತಿಯನ್ನೇ ಮುಂದುವರಿಸಿದ್ದರೆ, ದೇಶ ಇಂದು ಮೊದಲ ಸ್ಥಾನದಲ್ಲಿ ಇರುತ್ತಿತ್ತು' ಎಂದರು.

ಸಚಿವ ಎಚ್.ಕೆ.ಪಾಟೀಲ ಮಾತನಾಡಿದರು. ಹಲವರು ಸಚಿವರು, ಶಾಸಕರು, ರಾಜ್ಯಸಭೆ ಸದಸ್ಯರು, ವಿಧಾನ ಪರಿಷತ್ ಸದಸ್ಯರು, ಜನಪ್ರತಿನಿಧಿಗಳು, ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ ಸದಸ್ಯರು ನಮನ ಸಲ್ಲಿಸಿದರು.

ತಂದೆಯ ಹವ್ಯಾಸ, ಅಭಿರುಚಿ ದಾಖಲಿಸಿರುವ ಪುತ್ರಿ ದಮನ್ ಸಿಂಗ್

'ಓದಿನ ಅಭಿಮಾನಿ, ಖಾದ್ಯ ಪ್ರೇಮಿ'

ನವದೆಹಲಿ(ಪಿಟಿಐ): ದೇಶದ ಅರ್ಥವ್ಯವಸ್ಥೆಗೆ ಹೊಸ ಆಯಾಮ ನೀಡಿದ್ದ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರಿಗೆ ರಾಷ್ಟ್ರ ರಾಜಧಾನಿ ದೆಹಲಿ ಅಧಿಕಾರ ಅನುಭವಿಸುವ ಸ್ಥಳಕ್ಕಿಂತ, ಓದುವುದು, ತರಹೇವಾರಿ ಖಾದ್ಯಗಳನ್ನು ಸವಿಯುವ ಹಾಗೂ ಕುಟುಂಬದೊಂದಿಗೆ ಕಾಲ ಕಳೆಯುವ ತಾಣವಾಗಿಯೇ ಹೆಚ್ಚು ಇಷ್ಟವಾಗಿತ್ತು.

ಪ್ರಧಾನಿ ಹುದ್ದೆಯಿಂದ ನಿರ್ಗಮಿಸಿದ ನಂತರ ಅವರು, ನಗರದಲ್ಲಿನ ಪ್ರಮುಖ ಪುಸ್ತಕಗಳ ಮಳಿಗೆಗಳಿಗೆ, ಹೋಟೆಲ್‌ಗಳಿಗೆ ಹಾಗೂ ತಮ್ಮ ಆಪ್ತರ ಮನೆಗಳಿಗೆ ಭೇಟಿ ನೀಡುತ್ತಿದ್ದರು.

ಮನಮೋಹನ ಸಿಂಗ್ ಅವರ ಹವ್ಯಾಸಗಳು, ಅಭಿರುಚಿಗಳ ಬಗ್ಗೆ ಅವರ ಪುತ್ರಿ ದಮನ್ ಸಿಂಗ್ ಅವರು ತಾವು ರಚಿಸಿರುವ 'ಸ್ಟ್ರಿಕ್ಟ್‌ಲಿ ಪರ್ಸನಲ್' ಕೃತಿಯಲ್ಲಿ ವಿವರಿಸಿದ್ದಾರೆ.

'ಕಾಶ್ಮೀರ ಗೇಟ್‌ನಲ್ಲಿರುವ ರಾಮಕೃಷ್ಣ ಅಂಡ್ ಸನ್ಸ್, ಕನ್ನಾಟ್ ಪ್ಲೇಸ್‌ನಲ್ಲಿರುವ ಗಲ್ಗೋಟಿಯಾ ಹಾಗೂ ನ್ಯೂ ಬುಕ್ ಡಿಪೊ ಪುಸ್ತಕ ಮಳಿಗೆಗಳಿಗೆ ಭೇಟಿ ನೀಡುವುದು ನಮಗೆ ಬಹಳ ಖುಷಿಯ ಸಂಗತಿಯಾಗಿತ್ತು. ವೈವಿಧ್ಯಮಯ ಪುಸ್ತಕಗಳಿಂದ ಬೆರಗಾಗುವ ಜೊತೆಗೆ, ಅವುಗಳ ಖರೀದಿಯೂ ನಡೆಯುತ್ತಿತ್ತು' ಎಂದು ದಮನ್ ಸಿಂಗ್ ವಿವರಿಸಿದ್ದಾರೆ.

'ವಿವಿಧ ಖಾದ್ಯಗಳನ್ನು ಸವಿಯುವುದಕ್ಕಾಗಿ ಪ್ರಸಿದ್ಧ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳಿಗೆ ಹೋಗುವುದು ನಮ್ಮ ಮತ್ತೊಂದು ಇಷ್ಟದ ಕೆಲಸವಾಗಿತ್ತು. ದಕ್ಷಿಣ ಭಾರತ ತಿಂಡಿ–ತಿನಿಸುಗಳಿಗಾಗಿ ಕಮಲಾ ನಗರದ ಕೃಷ್ಣ ಸ್ವೀಟ್ಸ್, ಮೊಘಲಾಯಿ ಖಾದ್ಯಗಳಿಗಾಗಿ ದರಿಯಾಗಂಜ್‌ನ ತಂದೂರ್, ಚೀನಿ ಆಹಾರಗಳಿಗಾಗಿ ಮಲ್ಚಾ ಮಾರ್ಗದ ಫುಜಿಯಾ ಹಾಗೂ ಚಾಟ್‌ಗಳಿಗಾಗಿ ಬಂಗಾಳಿ ಮಾರುಕಟ್ಟೆಗೆ ಹೋಗುತ್ತಿದ್ದೆವು' ಎಂದು ಅವರು ಮೆಲುಕು ಹಾಕಿದ್ದಾರೆ.

ಬಾಂಗ್ಲಾದ ಹಿಲ್ಸಾ ಮೀನೂಟಕ್ಕಾಗಿ ಸಸ್ಯಾಹಾರ ವ್ರತ ಮುರಿದಿದ್ದ ಸಿಂಗ್

ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರು ಸಸ್ಯಾಹಾರಿಯಾಗಿದ್ದರು. ಆದರೆ, ಹಿಲ್ಸಾ ಮೀನಿನಿಂದ ತಯಾರಿಸಿದ ರುಚಿಕರ ಊಟ ಸವಿಯುವುದಕ್ಕಾಗಿ ಸಿಂಗ್ ಅವರು ಸಸ್ಯಾಹಾರ ವ್ರತ ಮುರಿದಿದ್ದರು.

ಪ್ರಧಾನಿಯಾಗಿದ್ದಾಗ 2011ರಲ್ಲಿ ಬಾಂಗ್ಲಾದೇಶಕ್ಕೆ ಭೇಟಿ ನೀಡಿದ್ದ ವೇಳೆ, ಹಿಲ್ಸಾ ಮೀನೂಟ ಸವಿಯುವ ಇಚ್ಛೆ ವ್ಯಕ್ತಪಡಿಸಿದ್ದರು.

'ಹಿಲ್ಸಾ ಮೀನೂಟ ಬಹಳ ರುಚಿಕರವಾದದ್ದು ಎಂದು ಕೇಳಿದ್ದೆ. ಈ ಊಟ ಸವಿಯುವ ಸಲುವಾಗಿ ನನ್ನ ಸಸ್ಯಾಹಾರ ವ್ರತ ಮುರಿಯಲು ಇಷ್ಟಪಡುವೆ' ಎಂದು ಅವರು ಹೇಳಿದ್ದರು.

ಬಾಂಗ್ಲಾದೇಶ ಸುದ್ದಿಸಂಸ್ಥೆ ಬಿಎಸ್‌ಎಸ್‌ಗೆ ನೀಡಿದ್ದ ಸಂದರ್ಶನದ ವೇಳೆ ಈ ಕುರಿತು ಅವರು ಲಘು ಧಾಟಿಯಲ್ಲಿ ಹೇಳಿದ್ದರು.

ಧೀಮಂತನಿಗೆ ಮಿಡಿದ ದೇಶ

ಒಂದನೇ ಪುಟದಿಂದ...

ಮೃತದೇಹವನ್ನು ದೆಹಲಿಯ ಲುಟೆನ್ಸ್ ಪ್ರದೇಶದ, ಮೋತಿಲಾಲ್ ನೆಹರೂ ರಸ್ತೆಯಲ್ಲಿರುವ ಅವರ ನಿವಾಸದಲ್ಲಿ ಇಡಲಾಗಿದೆ. ಸಕಲ ಸರ್ಕಾರಿ ಗೌರವದೊಂದಿಗೆ ಶನಿವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ತಿಳಿಸಿದರು.

'ನಿಗಮ್‌ಬೋಧ್ ಘಾಟ್ ಸ್ಮಶಾನದಲ್ಲಿ ಬೆಳಿಗ್ಗೆ 11.45ಕ್ಕೆ ಅಂತ್ಯಕ್ರಿಯೆ ನಡೆಸಲು ಸರ್ಕಾರ ನಿರ್ಧರಿಸಿದೆ' ಎಂದು ಕೇಂದ್ರ ಗೃಹ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಉಪರಾಷ್ಟ್ರಪತಿ ಜಗದೀಪ್ ಧನಕರ್, ಕೇಂದ್ರ ಸಚಿವರಾದ ಅಮಿತ್ ಶಾ ಮತ್ತು ರಾಜನಾಥ್ ಸಿಂಗ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಸ್ಪೀಕರ್ ಓಂ ಬಿರ್ಲಾ, ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳಾದ ಎಂ.ಕೆ.ಸ್ಟಾಲಿನ್, ಎನ್.ಚಂದ್ರಬಾಬು ನಾಯ್ಡು, ರೇವಂತ ರೆಡ್ಡಿ ಮತ್ತು ಆತಿಶಿ ಅವರು ಶ್ರದ್ಧಾಂಜಲಿ ಸಲ್ಲಿಸಿದರು. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಸಂಸದೆ ಪ್ರಿಯಾಂಕಾ ಗಾಂಧಿ ಅವರೂ ಸಿಂಗ್ ನಿವಾಸದಲ್ಲಿ ಹಾಜರಿದ್ದರು.

ಜನರ ಮತ್ತು ದೇಶದ ಅಭಿವೃದ್ಧಿಯೆಡೆಗೆ ಮನಮೋಹನ ಅವರು ಹೊಂದಿದ್ದ ಬದ್ಧತೆಯನ್ನು ಯಾವಾಗಲೂ ಗೌರವಿಸಲಾಗುವುದು ಎಂದು ಮೋದಿ ಹೇಳಿದರು.

ಸಿಂಗ್ ಅವರು ದೇಶಕ್ಕೆ ನೀಡಿರುವ ಕೊಡುಗೆಯನ್ನು ಯಾವಾಗಲೂ ಸ್ಮರಿಸಲಾಗುವುದು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಮತ್ತು ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ದೆಹಲಿಯಲ್ಲಿ ಸ್ಮಾರಕ: ಕೇಂದ್ರ ನಿರ್ಧಾರ

ರಾಷ್ಟ್ರ ರಾಜಧಾನಿಯಲ್ಲಿ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಸ್ಮಾರಕ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಮೂಲಗಳು ಶುಕ್ರವಾರ ತಿಳಿಸಿವೆ. 'ಸ್ಮಾರಕ ನಿರ್ಮಿಸುವ ಕುರಿತ ನಿರ್ಧಾರವನ್ನು ಕಾಂಗ್ರೆಸ್ ಪಕ್ಷಕ್ಕೆ ಸರ್ಕಾರ ತಿಳಿಸಿದೆ. ಕೆಲ ದಿನಗಳಲ್ಲಿ ಸೂಕ್ತ ಸ್ಥಳ ಹುಡುಕಲಾಗುತ್ತದೆ' ಎಂದು ಇವೇ ಮೂಲಗಳು ಹೇಳಿವೆ. 'ಈ ವಿಚಾರವನ್ನು ಕಾಂಗ್ರೆಸ್‌ಗೆ ತಿಳಿಸಲಾಗಿದೆ. ಆದಾಗ್ಯೂ ಆ ಪಕ್ಷದ ನಾಯಕರು ಈ ವಿಚಾರದಲ್ಲಿ ರಾಜಕೀಯ ಮಾಡುತ್ತಿದ್ದಾರೆ' ಎಂದು ಸರ್ಕಾರ ಟೀಕಿಸಿದೆ.

ಸಮಾಧಿ: ಪ್ರತ್ಯೇಕ ಸ್ಥಳಕ್ಕೆ ಮನವಿ

ಮನಮೋಹನ ಸಿಂಗ್ ಅವರ ಸಮಾಧಿಗೆ ಯಮುನಾ ನದಿ ದಂಡೆಯ ರಾಜ್‌ಘಾಟ್‌ನಲ್ಲಿ ಪ್ರತ್ಯೇಕ ಸ್ಥಳ ನೀಡಬೇಕು ಎಂದು ಕಾಂಗ್ರೆಸ್ ಪಕ್ಷವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ. ರಾಜ್‌ಘಾಟ್‌ನಲ್ಲಿ ಹಲವು ಮಾಜಿ ಪ್ರಧಾನಿಗಳ ಸ್ಮಾರಕಗಳು ಇವೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ಬೇಡಿಕೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರ ಮುಂದಿಟ್ಟಿದ್ದಾರೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಕೆ.ಸಿ. ವೇಣುಗೋಪಾಲ್ ಅವರು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಬಳಿ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

ಕಾಂಗ್ರೆಸ್ ಪಕ್ಷವು ಗಾಂಧಿ ಕುಟುಂಬದ ಹೊರಗಿನ ನಾಯಕರನ್ನು ನಿರ್ಲಕ್ಷಿಸುತ್ತದೆ ಎಂಬ ಆರೋಪವನ್ನು ಎದುರಿಸುತ್ತಿರುವ ಸಮಯದಲ್ಲೇ ಈ ಬೇಡಿಕೆ ಬಂದಿದೆ.

ಏಳು ದಿನ ಶೋಕಾಚರಣೆ

ಒಂದನೇ ಪುಟದಿಂದ...

'ಸಿಂಗ್ ಅವರ ಗೌರವಾರ್ಥವಾಗಿ 2024ರ ಡಿಸೆಂಬರ್ 26ರಿಂದ 2025ರ ಜನವರಿ 1ರವರೆಗೆ ದೇಶದಾದ್ಯಂತ ಶೋಕಾಚರಣೆ ನಡೆಯಲಿದೆ. ಈ ಅವಧಿಯಲ್ಲಿ ಯಾವುದೇ ಅಧಿಕೃತ ಮನರಂಜನಾ ಕಾರ್ಯಕ್ರಮಗಳು ಇರುವುದಿಲ್ಲ' ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

'ಅಂತ್ಯಕ್ರಿಯೆ ನಡೆಯುವ ದಿನ ವಿದೇಶದಲ್ಲಿರುವ ಭಾರತದ ಎಲ್ಲ ರಾಯಭಾರ ಕಚೇರಿಗಳು ಮತ್ತು ಹೈಕಮಿಷನ್ ಕಚೇರಿಗಳಲ್ಲಿ ರಾಷ್ಟ್ರಧ್ವಜವನ್ನು ಅರ್ಧಮಟ್ಟದಲ್ಲಿ ಹಾರಿಸಲಾಗುವುದು' ಎಂದು ಹೇಳಿದೆ.

ಎಐಸಿಸಿ ಕಚೇರಿಯಿಂದ ಯಾತ್ರೆ

ಒಂದನೇ ಪುಟದಿಂದ...

'ಡಿಸೆಂಬರ್ 28 (ಶನಿವಾರ) ಬೆಳಿಗ್ಗೆ 8ಕ್ಕೆ ಮೃತದೇಹವನ್ನು ಅವರ ನಿವಾಸದಿಂದ ಎಐಸಿಸಿ ಕಚೇರಿಗೆ ತರಲಾಗುವುದು. 8.30ರಿಂದ 9.30ರ ವರೆಗೆ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸಾರ್ವಜನಿಕರಿಗೆ ಅಂತಿಮ ದರ್ಶನಕ್ಕೆ ಅವಕಾಶ ನೀಡಲಾಗುವುದು. ಆ ಬಳಿಕ ಅಂತ್ಯಕ್ರಿಯೆಗಾಗಿ ಎಐಸಿಸಿ ಕಚೇರಿಯಿಂದ ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುವುದು' ಎಂದು ಹೇಳಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,750
ಇಂದಿನ ಅಂತ್ಯ	23,813
▲	63
ದಿನದ ಗರಿಷ್ಠ	23,938

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹600
12 ಕ್ಕೆ	₹80
ಮೈಸೂರು	
100ಕ್ಕೆ	₹600

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹408-636

ದ್ವಿತಳಿ (ಬಿ.ವಿ) ₹388-709

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್‌-4 ₹184

ಆರ್‌ಎಸ್‌ಎಸ್‌-5 ₹179

ಗುಡ್ ಲಾಟ್ ₹173

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1480 (1480)
ಸೋಯಾ (ರಿಫೈನ್ಡ್)	₹1270 (1270)
ಸೂರ್ಯಕಾಂತಿ (ರಿಫೈನ್ಡ್)	₹1355 (1350)
ಪಾಮೋಲಿನ್	₹1360 (1350)

ಡಾಲರ್ ಪ್ರಾಬಲ್ಯ; ರೂಪಾಯಿಗೆ ಜ್ವರ

ಒಂದನೇ ಪುಟದಿಂದ..

ಡಾಲರ್ ಸೂಚ್ಯಂಕವು ಏರಿಕೆ ಪಥದಲ್ಲಿದೆ. ರೂಪಾಯಿ, ಯೆನ್ ಸೇರಿ ಆರು ಕರೆನ್ಸಿಗಳ ವಿರುದ್ಧ ಶುಕ್ರವಾರದ ವಹಿವಾಟಿನಲ್ಲಿ ಡಾಲರ್ ಶೇ 0.04ರಷ್ಟು ಏರಿಕೆ ಕಂಡಿದೆ. 10 ವರ್ಷಗಳ ಅವಧಿಯ ಅಮೆರಿಕದ ಬಾಂಡ್‌ಗಳ ಮೌಲ್ಯ ಶೇ 0.76ರಷ್ಟು ಏರಿಕೆಯಾಗಿದ್ದು, ಶೇ 4.61ಕ್ಕೆ ಮುಟ್ಟಿದೆ. ಇದು ಏಳು ತಿಂಗಳ ಗರಿಷ್ಠ ಮಟ್ಟವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಚಾಲ್ತಿ ಖಾತೆ ಕೊರತೆ ಇಳಿಕೆ

ಒಂದನೇ ಪುಟದಿಂದ..

ಚಾಲ್ತಿ ಖಾತೆ ಕೊರತೆಯು ವ್ಯಾಪಾರದ ಮಾಪನವಾಗಿದ್ದು, ದೇಶದ ವಿದೇಶಿ ವಹಿವಾಟಿನ ಅಳತೆಗೋಲಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಕಂಪ್ಯೂಟರ್, ಬ್ಯುಸಿನೆಸ್, ಪ್ರವಾಸ ಹಾಗೂ ಸಾರಿಗೆ ಸೇವೆಯ ರಫ್ತು ಪ್ರಮಾಣದಲ್ಲಿ ಏರಿಕೆಯಾಗಿದೆ. ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಳವಾಗಿದೆ. ಇದರಿಂದ ವಿದೇಶಿ ವ್ಯಾಪಾರದ ಕೊರತೆ ಅಂತರ ಹಿಗ್ಗಿದೆ. ಈ ಅಂಶಗಳೇ ಚಾಲ್ತಿ ಖಾತೆ ಕೊರತೆ ಸೃಷ್ಟಿಗೆ ಕಾರಣವಾಗಿವೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ. ಮೌಲ್ಯದ ಲೆಕ್ಕದಲ್ಲಿ ದೇಶದ ಚಾಲ್ತಿ ಖಾತೆ ಕೊರತೆಯು ಪ್ರಸಕ್ತ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ (ಏಪ್ರಿಲ್‌-ಸೆಪ್ಟೆಂಬರ್) ₹1.82 ಲಕ್ಷ ಕೋಟಿ ಆಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ₹1.72 ಲಕ್ಷ ಕೋಟಿ ಇತ್ತು ಎಂದು ವರದಿ ಹೇಳಿದೆ.

2025ರಲ್ಲೂ ಕುಸಿತ ಮುಂದುವರಿಕೆ?

ಒಂದನೇ ಪುಟದಿಂದ..

ಮತ್ತೊಂದೆಡೆ ಇಸ್ರೇಲ್‌-ಇರಾನ್, ರಷ್ಯಾ-ಉಕ್ರೇನ್ ನಡುವಣ ಬಿಕ್ಕಟ್ಟು ಇನ್ನೂ ಶಮನಗೊಂಡಿಲ್ಲ. ಭಾರತದ ಆಮದು ಪ್ರಮಾಣ ಏರುಗತಿಯಲ್ಲಿದ್ದು, ರಫ್ತು ಪ್ರಮಾಣ ಇಳಿಕೆಯಾಗಿದೆ. ಇದು ದೇಶದ ಚಾಲ್ತಿ ಖಾತೆ ಕೊರತೆಯ ಇಳಿಕೆಗೆ ಕಾರಣವಾಗಿದೆ. ಇದರಿಂದ 2025ರ ಅಂತ್ಯದವರೆಗೂ ರೂಪಾಯಿ ಮೌಲ್ಯದ ಕುಸಿತವು ಅಲ್ಪ ಪ್ರಮಾಣದಲ್ಲಿ ಮುಂದುವರಿಯಲಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ವೈಕುಂಠ ಸಮಾರಾಧನೆ

ಶ್ರೀ ಎಂ. ಆರ್. ಲಕ್ಷ್ಮಣಪ್ಪ

(ಶ್ರೀಮತಿ ಪಾರ್ವತಮ್ಮ ಇವರ ಪತಿ)

ದಿನಾಂಕ: 17.12.2024ನೇ ಮಂಗಳವಾರ ಸಂಜೆ 4:50ಕ್ಕೆ ಇವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಪುಣ್ಯಾಃ ಕಾರ್ಯವನ್ನು ತಾ: 27.12.2024ನೇ ಶುಕ್ರವಾರ ಸಂಜೆ 5:00ಕ್ಕೆ ಮತ್ತು ತಾ: 28.12.2024ನೇ ಶನಿವಾರ ಬೆಳಿಗ್ಗೆ 9:00ಕ್ಕೆ ವೈಕುಂಠ ಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ನಡೆಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ:

ವಿಳಾಸ: ನಂ. 403, ವಿಶ್ವೇಶ್ವರಯ್ಯ ಲೇಔಟ್, 6ನೇ ಬ್ಲಾಕ್, ಕೆ.ಎಲ್.ಇ. ಕಾಲೇಜ್ ಹತ್ತಿರ, ಬೆಂಗಳೂರು-91.

ಇಂತಿ ದುಃಖತಪ್ತರು: ಶ್ರೀಮತಿ ಪಾರ್ವತಮ್ಮ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

'ಮನಮೋಹನ ಸಿಂಗ್ ಆರ್ಥಿಕ ಸುಧಾರಣೆ ಶಿಲ್ಪಿ'

ನವದೆಹಲಿ (ಪಿಟಿಐ): 'ಡಾ. ಮನಮೋಹನ ಸಿಂಗ್ ಅವರು ದೇಶದ ಆರ್ಥಿಕ ಸುಧಾರಣೆಗಳ ಶಿಲ್ಪಿಯಾಗಿದ್ದಾರೆ. ಅವರ ಕೊಡುಗೆಗಳು ಅಳಿಸಲಾಗದ ಛಾಪು ಮೂಡಿಸಿವೆ' ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.

'ಮಾಜಿ ಪ್ರಧಾನಿ ಹಾಗೂ ಆರ್‌ಬಿಐನ ಮಾಜಿ ಗವರ್ನರ್ ಆಗಿದ್ದ ಸಿಂಗ್ ಅವರ ನಿಧನದಿಂದ ತೀವ್ರ ದುಃಖಿತ-ನಾಗಿದ್ದೇನೆ' ಎಂದು ಶುಕ್ರವಾರ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಕ್ವಿಂಟಲ್‌ಗೆ ಸರಾಸರಿ ₹1 ಸಾವಿರ ದರ ಇಳಿಕೆ

ಭತ್ತದ ಧಾರಣೆ ಕುಸಿತ

• ಆರ್. ಜಿತೇಂದ್ರ

ಮೈಸೂರು: ಕಾವೇರಿ ಜಲಾನಯನ ಪ್ರದೇಶದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಈ ಬಾರಿ ಭತ್ತದ ಇಳುವರಿ ಉತ್ತಮವಾಗಿದ್ದರೂ, ಬೆಲೆ ಕುಸಿತದಿಂದ ರೈತರು ಕಂಗಾಲಾಗಿದ್ದಾರೆ.

ಕಳೆದ ವರ್ಷ ಬರದ ಕಾರಣಕ್ಕೆ ಭತ್ತ ಕೃಷಿಗೆ ಸೂಕ್ತ ಪ್ರಮಾಣದ ನೀರು ಸಿಕ್ಕಿರಲಿಲ್ಲ. ಫಸಲು ಕಡಿಮೆಯಾಗಿತ್ತು. ಬೆಲೆ ಏರಿಕೆಯಾಗಿ, ಕ್ವಿಂಟಲ್‌ಗೆ ₹3,200–₹3,400ರ ವರೆಗೆ ಮಾರಾಟವಾಗಿತ್ತು.

ಈ ವರ್ಷ ಭತ್ತದ ಕೊಯ್ಲು ಆರಂಭ ಆಗಿದ್ದು, ಶುರುವಿನಲ್ಲೇ ಬೆಲೆ ಕುಸಿದಿದೆ. ಕ್ವಿಂಟಲ್‌ಗೆ ₹2,000–₹2,200ರ ಸರಾಸರಿ ದರದಲ್ಲಿ ದಲ್ಲಾಳಿಗಳು ರೈತರಿಂದ ಖರೀದಿಸುತ್ತಿದ್ದಾರೆ.

'ಜ್ಯೋತಿ' ತಳಿಯ ಭತ್ತ ಕಳೆದ ವರ್ಷ ಕ್ವಿಂಟಲ್‌ಗೆ ₹3,400ರವರೆಗೆ ಮಾರಾಟ ಆಗಿತ್ತು. ಪ್ರಸ್ತುತ ₹2,500 ದರವಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರತಿ ಕ್ವಿಂಟಲ್‌ಗೆ ಸರಾಸರಿ ₹1 ಸಾವಿರ ಬೆಲೆ ಕಡಿಮೆ ಆಗಿರುವುದಾಗಿ ರೈತರು ಹೇಳುತ್ತಾರೆ.

'ಕೆಆರ್‌ಎಸ್, ಕಬಿನಿ ಜಲಾಶಯಗಳು ಈ ಬಾರಿ ಭರ್ತಿಯಾಗಿರುವುದರಿಂದ ಅಗತ್ಯ ನೀರು ಸಿಗುತ್ತಿರುವುದರಿಂದ ಮೈಸೂರು ಜಿಲ್ಲೆಯಾದ್ಯಂತ ರೈತರು ಹೆಚ್ಚು ಭತ್ತ ಬೆಳೆದಿದ್ದಾರೆ. ಆದರೆ, ಸೂಕ್ತ ಬೆಲೆ ಸಿಗುತ್ತಿಲ್ಲ. ರೈತರ ಕೈ ಸುಡುವ ಸಾಧ್ಯತೆ ಹೆಚ್ಚು' ಎನ್ನುತ್ತಾರೆ ಮೈಸೂರು ತಾಲ್ಲೂಕಿನ ಸಿದ್ದರಾಮನಹುಂಡಿ ಗ್ರಾಮದ ಭತ್ತ ಬೆಳೆಗಾರ ಮಂಜುನಾಥ್.

ಆರಂಭವಾಗದ ಖರೀದಿ ಕೇಂದ್ರ: ಕೊಯ್ಲು ಆರಂಭಗೊಂಡು ತಿಂಗಳು ಸಮೀಪಿಸಿದರೂ ಸರ್ಕಾರ ಬೆಂಬಲ ಬೆಲೆ ಅಡಿ ಖರೀದಿ ಕೇಂದ್ರಗಳ ಮೂಲಕ ಖರೀದಿ ಪ್ರಕ್ರಿಯೆ ನಡೆಯದಿರುವುದಕ್ಕೆ ರೈತ ಮುಖಂಡರು ಬೇಸರ ವ್ಯಕ್ತಪಡಿಸುತ್ತಾರೆ.

'ಕೇಂದ್ರ ಸರ್ಕಾರ ಈ ವರ್ಷ ಭತ್ತಕ್ಕೆ ಪ್ರತಿ ಕ್ವಿಂಟಲ್‌ಗೆ ₹2,300 ಬೆಂಬಲ ಬೆಲೆ ಘೋಷಿಸಿದೆ. ಆದರೆ, ಖರೀದಿ ಕೇಂದ್ರಗಳಲ್ಲಿ ಇನ್ನೂ ರೈತರ ನೋಂದಣಿ ನಡೆದಿದ್ದು, ಖರೀದಿಯೇ ಆರಂಭ ಆಗಿಲ್ಲ. ಖಾಸಗಿ ದಲ್ಲಾಳಿಗಳು ಬೆಲೆ ನಿಯಂತ್ರಿಸುತ್ತಿದ್ದಾರೆ' ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟಗಳ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಪ್ರತಿಕ್ರಿಯಿಸಿದರು.

ಮೈಸೂರು ಜಿಲ್ಲೆಯ ತಿ. ನರಸೀಪುರ ಸಮೀಪದ ಜಮೀನೊಂದರಲ್ಲಿ ಕೃಷಿ ಯಂತ್ರ ಬಳಸಿ ಭತ್ತದ ಕೊಯ್ಲು ನಡೆಯಿತು ಪ್ರಜಾವಾಣಿ ಚಿತ್ರ

ಅಂಕಿ ಅಂಶಗಳು

90 ಸಾವಿರ ಹೆಕ್ಟೇರ್ ಮೈಸೂರು ಜಿಲ್ಲೆಯಲ್ಲಿ ಭತ್ತ ಬಿತ್ತನೆ ಪ್ರದೇಶ

58 ಸಾವಿರ ಹೆಕ್ಟೇರ್ ಮಂಡ್ಯ ಜಿಲ್ಲೆಯಲ್ಲಿ ಭತ್ತ ಬಿತ್ತನೆ ಪ್ರದೇಶ

ಸರ್ಕಾರ ಬೆಂಬಲ ಬೆಲೆ ಅಡಿ ಭತ್ತ ಖರೀದಿಗೆ ಇರುವ 25 ಕ್ವಿಂಟಲ್ ಮಿತಿಯನ್ನು ತೆಗೆದು ಹಾಕಬೇಕು. ಪ್ರತಿ ಕ್ವಿಂಟಲ್‌ಗೆ ₹500 ಪ್ರೋತ್ಸಾಹಧನ ನೀಡಬೇಕು

ಕುರುಬೂರು ಶಾಂತಕುಮಾರ್ ಅಧ್ಯಕ್ಷ, ರೈತ ಸಂಘಟನೆಗಳ ಒಕ್ಕೂಟ

ಕೊಯ್ಲು ಯಂತ್ರಗಳ ಕೊರತೆ

ರಾಜ್ಯದಲ್ಲಿ ಏಕಕಾಲಕ್ಕೆ ಭತ್ತದ ಕೊಯ್ಲು ನಡೆದಿದೆ. ಮೈಸೂರು ಭಾಗದಲ್ಲಿ ಕೊಯ್ಲು ಯಂತ್ರಗಳ ಕೊರತೆ ಉಂಟಾಗಿದೆ. ಜಿಲ್ಲಾಡಳಿತ ನಿಗದಿಪಡಿಸಿರುವ ಬಾಡಿಗೆ ದರಕ್ಕೆ ಯಂತ್ರಗಳು ಸಿಗದೇ ರೈತರಿಗೆ ಹೊರೆಯಾಗಿ ಪರಿಣಮಿಸಿದೆ.

ಮೈಸೂರು-ಮಂಡ್ಯ ಭಾಗದಲ್ಲಿ ಡಿಸೆಂಬರ್ ಮೊದಲ ವಾರದಿಂದಲೇ ಕೊಯ್ಲು ಆರಂಭಗೊಂಡಿದ್ದು, ಮಳೆ ಕಾರಣ ಕೆಲ ದಿನ ನಡೆದಿರಲಿಲ್ಲ. ಸಕಾಲದಲ್ಲಿ ಯಂತ್ರಗಳು ಸಿಗದೇ ರೈತರು ಕೊಯ್ಲು ಮುಂದೂಡುತ್ತಿದ್ದಾರೆ.

2024–25ರಲ್ಲಿ ₹1.5 ಲಕ್ಷ ಕೋಟಿ ತಲುಪುವ ಅಂದಾಜು

ಸರ್ಕಾರಿ ಬ್ಯಾಂಕ್‌ಗಳ ಲಾಭ ಏರುಗತಿ

ನವದೆಹಲಿ (ಪಿಟಿಐ): 2024-25ನೇ ಆರ್ಥಿಕ ವರ್ಷದಲ್ಲಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ನಿವ್ವಳ ಲಾಭವು ₹1.5 ಲಕ್ಷ ಕೋಟಿಗೆ ತಲುಪುವ ನಿರೀಕ್ಷೆಯಿದೆ.

ವಸೂಲಾಗದ ಸಾಲದ (ಎನ್‌ಪಿಎ) ಪ್ರಮಾಣ ಕುಗ್ಗಿರುವುದು ಹಾಗೂ ಸಾಲ ನೀಡಿಕೆಯಲ್ಲಿ ಎರಡಂಕಿ ದಾಟಿರುವುದು ಲಾಭ ಹೆಚ್ಚಳಕ್ಕೆ ನೆರವಾಗಲಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಸದ್ಯ ಬ್ಯಾಂಕ್‌ಗಳಲ್ಲಿ ಠೇವಣಿ ಸಂಗ್ರಹ ಪ್ರಮಾಣ ಕಡಿಮೆಯಾಗಿದೆ. ಈ ನಡುವೆಯೂ ಲಾಭದ ಪ್ರಮಾಣದಲ್ಲಿ ಏರಿಕೆಯಾಗಲಿದೆ ಎಂದು ಹೇಳಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದ ಮೊದ-ಲಾರ್ಧದಲ್ಲಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳು ₹85,520 ಕೋಟಿ ನಿವ್ವಳ ಲಾಭ ಗಳಿಸಿವೆ. ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹68,500 ಕೋಟಿ ಲಾಭ ಗಳಿಸಿದ್ದವು. ಹಾಗಾಗಿ, ದ್ವಿತೀಯಾರ್ಧದಲ್ಲಿ ಲಾಭ ಗಳಿಕೆಯು ಮುಂದುವರಿಯುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ.

2023-24ನೇ ಆರ್ಥಿಕ ವರ್ಷದಲ್ಲಿ ಈ ಬ್ಯಾಂಕ್‌ಗಳು ₹1.41 ಲಕ್ಷ ಕೋಟಿ ನಿವ್ವಳ ಲಾಭ ಗಳಿಸಿದ್ದವು. ಈ ಅವಧಿಯಲ್ಲಿ ಸಾಲ ಮರುಪಾವತಿ, ಎನ್‌ಪಿಎ ಪ್ರಮಾಣ ಇಳಿಕೆಯಿಂದಾಗಿ ಬ್ಯಾಂಕ್‌ಗಳ ಆಸ್ತಿಯ ಗುಣಮಟ್ಟ ಸುಧಾರಣೆ ಕಂಡಿತ್ತು. ಬ್ಯಾಂಕ್‌ಗಳ ಸಮರ್ಪಕ ಬಂಡವಾಳ ಅನುಪಾತವು (ಸಿಎಆರ್) ಉತ್ತಮವಾಗಿತ್ತು. ಇದರಿಂದ ನಿವ್ವಳ ಲಾಭದಲ್ಲಿ ಏರಿಕೆಯಾಗಿತ್ತು.

2018ರ ಮಾರ್ಚ್‌ನಲ್ಲಿ ಈ ಬ್ಯಾಂಕ್‌ಗಳ ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣ ಶೇ 14.58ಕ್ಕೆ ಮುಟ್ಟಿತ್ತು. ಪ್ರಸಕ್ತ ವರ್ಷದ ಸೆಪ್ಟೆಂಬರ್‌ನಲ್ಲಿ ಶೇ 3.12ಕ್ಕೆ ಇಳಿದಿದೆ. ಇದು ಬ್ಯಾಂಕ್‌ಗಳು ನಿಗದಿತ ಗುರಿ ಸಾಧನೆಗೆ ನೆರವಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ನಿಯಮಾವಳಿ ಅನ್ವಯ ಬ್ಯಾಂಕ್‌ಗಳ ಸುರಕ್ಷತೆಯ ಮಾನದಂಡವಾದ ಬಂಡವಾಳ ಪರ್ಯಾಪ್ತತಾ ಅನುಪಾತ (ಸಿಆರ್‌ಎಆರ್) ಶೇ 11.5ರಷ್ಟು ಇರಬೇಕು. 2015ರ ಮಾರ್ಚ್‌ನಲ್ಲಿ ಬ್ಯಾಂಕ್‌ಗಳ ಸಿಆರ್‌ಎಆರ್ ಶೇ 11.45ರಷ್ಟು ಇದ್ದಿದ್ದು, ಪ್ರಸಕ್ತ ವರ್ಷದ ಸೆಪ್ಟೆಂಬರ್‌ನಲ್ಲಿ ಶೇ 15.43ಕ್ಕೆ ಏರಿಕೆಯಾಗಿದೆ. ಈ ಅವಧಿಯಲ್ಲಿ ಒಟ್ಟಾರೆ ಶೇ 3.98ರಷ್ಟು ಹೆಚ್ಚಳವಾಗಿದೆ. ಇದು ಬ್ಯಾಂಕ್‌ಗಳ ಆರ್ಥಿಕ ಸ್ಥಿತಿಯು ಸುಧಾರಣೆಗೊಂಡಿರುವ ಸೂಚಕವಾಗಿದೆ.

'ಫೆಬ್ರುವರಿಯಲ್ಲಿ ನಡೆಯಲಿರುವ ಆರ್‌ಬಿಐನ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ರೆಪೊ ದರ ಕಡಿತಗೊಳ್ಳುವ ಸಾಧ್ಯತೆಯಿದೆ. ಇದರಿಂದ ಬ್ಯಾಂಕ್‌ಗಳು ಠೇವಣಿ ಮೇಲಿನ ಬಡ್ಡಿದರ ಇಳಿಕೆ ಮಾಡುವ ನಿರೀಕ್ಷೆಯಿದೆ. ಹಾಗಾಗಿ, 2025-26ನೇ ಆರ್ಥಿಕ ವರ್ಷದಲ್ಲಿ ಬ್ಯಾಂಕ್‌ಗಳ ಎಷ್ಟು ಪ್ರಮಾಣದಲ್ಲಿ ಸಾಲ ನೀಡಲಿವೆ ಎಂಬುದನ್ನು ಅವಲೋಕಿಸುತ್ತಿದ್ದೇವೆ' ಎಂದು ಐಸಿಆರ್‌ಎ ಉಪಾಧ್ಯಕ್ಷ ಸಚಿನ್ ಸಚ್‌ದೇವ್ ಹೇಳಿದ್ದಾರೆ.

ದಕ್ಷಿಣ ಕೊರಿಯಾ: ಹಂಗಾಮಿ ಅಧ್ಯಕ್ಷರಿಗೆ ವಾಗ್ದಂಡನೆ

ಸೋಲ್ (ಎಪಿ): ದಕ್ಷಿಣ ಕೊರಿಯಾದ ನ್ಯಾಷನಲ್ ಅಸೆಂಬ್ಲಿಯು (ಸಂಸತ್) ಹಂಗಾಮಿ ಅಧ್ಯಕ್ಷ ಹಂಗಾಮಿ ಅಧ್ಯಕ್ಷ ಹಾನ್ ಡಕ್-ಸೂ ಅವರಿಗೆ ವಾಗ್ದಂಡನೆ ವಿಧಿಸುವ ನಿರ್ಣಯವನ್ನು ಶುಕ್ರವಾರ ಅಂಗೀಕರಿಸಿದೆ. ಇದರಿಂದ ದೇಶದಲ್ಲಿ ತಲೆದೋರಿರುವ ರಾಜಕೀಯ ಬಿಕ್ಕಟ್ಟು ಇನ್ನಷ್ಟು ಬಿಗಡಾಯಿಸಿದೆ.

ಹಾನ್ ಡಕ್-ಸೂ

ಆಡಳಿತ ಪಕ್ಷಗಳ ತೀವ್ರ ವಿರೋಧದ ನಡುವೆಯೇ ವಾಗ್ದಂಡನೆ ನಿರ್ಣಯವನ್ನು 192–0 ಮತಗಳಿಂದ ಅಂಗೀಕರಿಸಲಾಯಿತು. ವಾಗ್ದಂಡನೆ ನಿರ್ಣಯವನ್ನು ವಿರೋಧಿಸಿದ ಆಡಳಿತ ಪಕ್ಷದ ಸದಸ್ಯರು ಮತದಾನದಿಂದ ದೂರವುಳಿದರು.

ವಾಗ್ದಂಡನೆ ನಿರ್ಣಯ ಅಂಗೀಕರಿಸಿರುವ ಕಾರಣ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಬೇಕೇ ಅಥವಾ ಮುಂದುವರಿಸಬೇಕೇ ಎಂಬುದನ್ನು ದೇಶದ ಸಾಂವಿಧಾನಿಕ ನ್ಯಾಯಾಲಯವು ನಿರ್ಧರಿಸಲಿದೆ. ಅದುವರೆಗೂ ಅವರು ಅಧ್ಯಕ್ಷರ ಯಾವುದೇ ಅಧಿಕಾರವನ್ನು ಅನುಭವಿಸುವಂತಿಲ್ಲ.

ದೇಶದಲ್ಲಿ ಸೇನಾಡಳಿತ ಹೇರಿದ್ದ ಯೂನ್ ಸುಕ್ ಯೋಲ್ ಅವರಿಗೆ ವಾಗ್ದಂಡನೆ ವಿಧಿಸಿ, ಅಧ್ಯಕ್ಷ ಸ್ಥಾನದಿಂದ ಪದಚ್ಯುತಗೊಳಿಸಿದ ಬಳಿಕ ಹಾನ್ ಅವರು ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದರು.

ಒಸಾಮು ಸುಜುಕಿ ಇನ್ನಿಲ್ಲ

ನವದೆಹಲಿ (ಪಿಟಿಐ): ಭಾರತದ ಮಾರುಕಟ್ಟೆಗೆ ಸುಜುಕಿ ಕಂಪನಿ ಪ್ರವೇಶಿಸಲು ಕಾರಣರಾಗಿದ್ದ ಜಪಾನ್‌ನ ಒಸಾಮು ಸುಜುಕಿ (94) ಅವರು ನಿಧನರಾಗಿದ್ದಾರೆ.

ನಾಲ್ಕು ದಶಕದವರೆಗೆ ಸುಜುಕಿ ಕಂಪನಿಯನ್ನು ಮುನ್ನಡೆಸಿದ್ದು ಹೆಗ್ಗಳಿಕೆಯಾಗಿದೆ. ಲಿಂಫೋಮಾ ಕಾಯಿಲೆಯಿಂದ ಬಳಲುತ್ತಿದ್ದ ಅವರು, ಡಿಸೆಂಬರ್ 25ರಂದು ನಿಧನರಾಗಿದ್ದಾರೆ ಎಂದು ಜಪಾನ್‌ನ ಸುಜುಕಿ ಮೋಟರ್ ಕಂಪನಿ ಶುಕ್ರವಾರ ತಿಳಿಸಿದೆ.

1981ರಲ್ಲಿ ಭಾರತದ ಮಾರುತಿ ಉದ್ಯೋಗ್ ಲಿಮಿಟೆಡ್‌ನೊಂದಿಗೆ ಸುಜುಕಿ ಪಾಲುದಾರಿಕೆ ಹೊಂದುವಲ್ಲಿ ಅವರು ನಿರ್ಣಾಯಕ ಪಾತ್ರವಹಿಸಿ-ದ್ದರು. ಆ ಮೂಲಕ ದೇಶದ ಕಾರು ಮಾರುಕಟ್ಟೆಯಲ್ಲಿ ಹೊಸ ಸಂಚಲನ ಸೃಷ್ಟಿಗೆ ಕಾರಣರಾಗಿದ್ದು, ಅವರ ಹಿರಿಮೆ.

ಮುಂಬೈ ಧಾರಣೆ

ಶೇಂಗಾ

27-12-2024

ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ(ಹೊಸ)	8900-9000
ದಪ್ಪ ಗುಜರಾತ್(ಹೊಸ)	9700-9800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1490)
ಒಂದು ವಾರದ ಡೆಲಿವರಿ	1485 (1485)
ಪಾಮ್ ವಾರದ ಡೆಲಿವರಿ	1358 (1350)
ಸೂರ್ಯಕಾಂತಿ ಎಣ್ಣೆ ಕಚ್ಚಾ	1275 (1250)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹76,100 (76,100)

ಬೆಳ್ಳಿ ಕೆ.ಜಿ ₹88,100 (88,100)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ವಿನಿಮಯ ದರ

$ ಡಾಲರ್	85.48
£ ಪೌಂಡ್	106.99
€ ಯುರೊ	89.10
¥ ಯೆನ್ (100ಕ್ಕೆ)	54

ಸುದ್ದಿ 2 ನಿಮಿಷ

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ಬ್ಯಾಂಕ್ ಹಾಗೂ ಆಟೊ ಷೇರುಗಳ ಖರೀದಿ ಹೆಚ್ಚಳದಿಂದಾಗಿ ಶುಕ್ರವಾರದ ವಹಿವಾಟಿನಲ್ಲಿ ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 226 ಅಂಶ ಏರಿಕೆ ಕಂಡು 78,699 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 63 ಅಂಶ ಏರಿಕೆ ಕಂಡು 23,813 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಮಹೀಂದ್ರ ಆ್ಯಂಡ್ ಮಹೀಂದ್ರ, ಇಂಡಸ್ ಇಂಡ್ ಬ್ಯಾಂಕ್, ಬಜಾಜ್ ಫೈನಾನ್ಸ್, ಟಾಟಾ ಮೋಟರ್ಸ್, ಬಜಾಜ್ ಫಿನ್‌ಸರ್ವ್, ನೆಸ್ಲೆ, ಐಸಿಐಸಿಐ ಬ್ಯಾಂಕ್ ಷೇರುಗಳ ಮೌಲ್ಯ ಏರಿಕೆಯಾಗಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಟಾಟಾ ಸ್ಟೀಲ್, ಅದಾನಿ ಪೋರ್ಟ್ಸ್, ಜೊಮಾಟೊ, ಅಲ್ಟ್ರಾ ಟೆಕ್ ಸಿಮೆಂಟ್ ಮತ್ತು ಎಚ್‌ಸಿಎಲ್ ಟೆಕ್ ಷೇರುಗಳ ಮೌಲ್ಯ ಇಳಿಕೆಯಾಗಿದೆ.

ಜಾಗತಿಕ ಮಟ್ಟದಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.18ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 73.39 ಡಾಲರ್ ಆಗಿದೆ.

ಥರ್ಡ್ ಪಾರ್ಟಿ ಆ್ಯಪ್ ಬಳಸಿ ಯುಪಿಐ ವಹಿವಾಟಿಗೆ ಅನುಮತಿ

ಮುಂಬೈ (ಪಿಟಿಐ): ಪ್ರಿಪೇಯ್ಡ್ ಪಾವತಿ ವ್ಯವಸ್ಥೆ (ಪಿಪಿಐ) ಹೊಂದಿರುವವರು ಥರ್ಡ್ ಪಾರ್ಟಿ ಮೊಬೈಲ್ ಅಪ್ಲಿಕೇಷನ್ ಬಳಸಿ ಯುಪಿಐ ಮೂಲಕ ಪಾವತಿಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಅನುಮತಿ ನೀಡಿದೆ.

ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ (ಯುಪಿಐ) ಮೂಲಕ ಕೆವೈಸಿ ಪೂರ್ಣಗೊಳಿಸಿರುವ ಪಿಪಿಐ ಬಳಕೆದಾರರು ಹಣ ಪಡೆಯಲು ಹಾಗೂ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಆರ್‌ಬಿಐ ತಿಳಿಸಿದೆ.

ಗಿಫ್ಟ್ ಕಾರ್ಡ್, ಮೆಟ್ರೊ ರೈಲು ಕಾರ್ಡ್ ಮತ್ತು ಡಿಜಿಟಲ್ ವ್ಯಾಲೆಟ್‌ನಂತಹ ಪಿಪಿಐ ಹೊಂದಿರುವವರಿಗೆ ಹೆಚ್ಚಿನ ಅನುಕೂಲ ಒದಗಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದೆ.

ಧಾರಾಶಿವ: ಸರಪಂಚ್ ಕಾರಿನ ಮೇಲೆ ದಾಳಿ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಧಾರಾಶಿವ ಜಿಲ್ಲೆಯಲ್ಲಿ ನಾಲ್ವರು ದುಷ್ಕರ್ಮಿಗಳು, ಸರಪಂಚರೊಬ್ಬರ ಎಸ್‌ಯುವಿ ಕಾರಿನ ಮೇಲೆ ದಾಳಿ ಮಾಡಿ, ಪೆಟ್ರೋಲ್ ತುಂಬಿದ ಕಾಂಡೋಮ್ ಅನ್ನು ಕಾರಿನೊಳಗೆ ಎಸೆದಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಮೆಸಾಯಿ ಜವಳ್ಗಾದ ಸರಪಂಚ್ ನಾಮದೇವ್ ನಿಕಮ್ ಮತ್ತು ವಾಹನದಲ್ಲಿದ್ದ ಮತ್ತೊಬ್ಬರು ಗಾಯಗೊಂಡಿದ್ದಾರೆ. ತುಳಜಾಪುರದಲ್ಲಿ ಗುರುವಾರ ರಾತ್ರಿ 10 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಿಕಮ್ ಅವರು ಕಾರಿನಲ್ಲಿ ಹೋಗುತ್ತಿದ್ದಾಗ ಎರಡು ಬೈಕ್‌ಗಳಲ್ಲಿ ಬಂದ ನಾಲ್ವರು ದಾಳಿಕೋರರು ಕೃತ್ಯ ಎಸಗಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ನಿಕಮ್ ಅವರ ದೂರು ಆಧರಿಸಿ ತುಳಜಾಪುರ ಪೊಲೀಸರು ನಾಲ್ವರು ಅಪರಿಚಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಸೆಕ್ಷನ್ 110ರ ಅಡಿಯಲ್ಲಿ ಹತ್ಯೆಗೆ ಯತ್ನ ಪ್ರಕರಣ ದಾಖಲಿಸಿದ್ದಾರೆ. ತನಿಖೆ ನಡೆಯುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಈ ತಿಂಗಳ ಆರಂಭದಲ್ಲಿ ಬೀಡ್ ಜಿಲ್ಲೆಯ ಮಸಾಜೋಗ್ ಗ್ರಾಮದ ಸರಪಂಚ್ ಸಂತೋಷ್ ದೇಶಮುಖ್ ಅವರನ್ನು ಅಪಹರಿಸಿ ಹತ್ಯೆಗೈದಿರು-ವುದಕ್ಕೆ ವಿಪಕ್ಷಗಳು ಭಾರಿ ಆಕ್ರೋಶ ವ್ಯಕ್ತಪಡಿಸಿವೆ. ಇದರ ಬೆನ್ನಲ್ಲೇ, ಗ್ರಾಮದ ಮುಖ್ಯಸ್ಥನ ಮೇಲೆ ದಾಳಿ ನಡೆದಿದೆ.

ಸಂತೋಷ್ ದೇಶ್‌ಮುಖ್ ಹತ್ಯೆಯ ಪ್ರಮುಖ ಸೂತ್ರಧಾರಿ ಸಚಿವ ಧನಂಜಯ್ ಮುಂಡೆ ಅವರ ಆಪ್ತ ಸಹಾಯಕ ವಾಲ್ಮಿಕ್ ಕರಾಡ್ ಎಂದು ಪ್ರತಿಪಕ್ಷಗಳು ಆರೋಪಿಸಿವೆ.

ಬೆಳಗಾವಿಯ ಖಾಸಗಿ ಆಸ್ಪತ್ರೆಗೆ ದಾಖಲಾದ ರಾಜಸ್ಥಾನದ ರಾಜ್ಯಸಭಾ ಸದಸ್ಯ ನೀರಜ್ ಡಾಂಗೆ ಅವರನ್ನು ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪ್ರಮುಖರು ಭೇಟಿಯಾದರು

ರಾಜ್ಯಸಭಾ ಸದಸ್ಯ ನೀರಜ್ ಅಸ್ವಸ್ಥ; ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಗಾಂಧಿ ಭಾರತ' ಶತಮಾನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬೆಳಗಾವಿಗೆ ಬಂದಿದ್ದ ರಾಜ್ಯಸಭಾ ಸದಸ್ಯ ರಾಜಸ್ಥಾನದ ನೀರಜ್ ಡಾಂಗೆ ಅವರು ಅನಾರೋಗ್ಯದಿಂದ ನಗರದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

'ಶುಕ್ರವಾರ ನೀರಜ್ ಡಾಂಗೆ ಅವರ ಆರೋಗ್ಯದಲ್ಲಿ ಏರುಪೇರಾಯಿತು. ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆ ಮುಂದುವರೆದಿದೆ. ಪ್ರಾಣಾಪಾಯವಿಲ್ಲ' ಎಂದು ಪಕ್ಷದ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಸ್ಪತ್ರೆಗೆ ಭೇಟಿ ನೀಡಿ ನೀರಜ್ ಅವರ ಆರೋಗ್ಯ ವಿಚಾರಿಸಿದರು. ಸಚಿವರಾದ ಕೆ.ಜೆ.ಜಾರ್ಜ್, ಸತೀಶ ಜಾರಕಿಹೊಳಿ, ಲಕ್ಷ್ಮೀ ಹೆಬ್ಬಾಳಕರ, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಜತೆಗಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

IN THE COURT OF THE III ADDL DISTRICT AND SESSIONS JUDGE, BANGALORE RURAL AT ANEKAL

P & S.C.No.5034 /2024

BETWEEN

Sri S.Girish, S/o late Srinivasulu Naidu, age about 60 years, R/@ Flat No F4, Gauthmannor, 2nd Cross, Opposite Laa Lavender, Old Mangammanapalya, Bangalore-560068.

PETITIONER

AND

NIL RESPONDENT

WHEREAS, as the above-named petitioners have made a petition to this court under Section 276 of the Indian Succession Act, 1925, praying for issue of Succession Certificate in the name of petitioner in respect of property as below scheduled so left by their deceased Sri. late Srinivasulu Naidu who died on 19/05/2013, at Bangalore.

Interested parties are hereby warned to appear in this court in person or by a pleader duly instructed on the **4th day of February 2024 at 11 O'clock** in forenoon to show cause against the petition, failing wherein, the matter will be heard and determined ex parte.

SCHEDULE

All that piece and parcel of the Property land bearing plot no 118-B in R.S No 94, in industrial area within the Village of Hebbagodi Attibele Hobli, Anekal Taluk, Bangalore district Measuring 3148 Sq Meters of polt and bounded as follows: **East by:** plot no 110-L &M, **West by:** 40 feet wide Road, **North by:** Plot no 118-A, **South by:** plot no 119-A.

Given under my Hand and Seal of the Court on this 26th day of December 2024 at Bangalore,

By Order of the Court

Sd/- Shirestedar

III Addl District and Session Judge at Anekal, Bangalore.

H Siddesh, Advocate,

No.1380.2/1, 3rd Cross, 3rd 'C' Main, 'E' Block, Subramanyanagar, Rajajinagar 2nd Stage, Bangalore- 560010.

ಉದ್ಯೋಗಾವಕಾಶ

Domestic Helpers / Housekeeping

ಬೆಂಗಳೂರಿನ ಕಲ್ಯಾಣ ನಗರದಲ್ಲಿರುವ ಆಸ್ಪತ್ರೆಗೆ ಅರ್ಜೆಂಟಾಗಿ ಹೌಸ್ ಕೀಪಿಂಗ್ ಬಾಯ್ಸ್ ಬೇಕಾಗಿದ್ದಾರೆ. ಸಂಬಳ: 19300/-. ಸಂಪರ್ಕಿಸಿ: ಹೇಮಾವತಿ: 9945779607, ಸಂದೀಪ: 9108946691, ಮಿತುನ್: 9112959375.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ

Astrology

★॥ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್॥★ ಕೇರಳ_ಅಘೋರಿ_ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮ_ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದು`ನಿಜ_ನಂಬಿ`ಕರೆಮಾಡಿ. ಪಂಡಿತ್. ಅಮರ್‌ನಾಥ್‌ಭಟ್. 9972407122

ಭಾರತದ ಪ್ರಖ್ಯಾತ ಬುಡಬುಡಿಕೆ ಜನಾಂಗದ ಲಕ್ಷಾಂತರ ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಬಾಬಾ.ಶ್ರೀ.ದೇವಾನಂದನರವರಿಂದ ನಿಮ್ಮೆಲ್ಲಾ ಸರ್ವಸಂಕಷ್ಟಗಳಿಗೆ ಪರಿಹಾರ. ಮಹಮ್ಮಾಯಿ, ಮನ್ಮೋಹಿನಿಮೋಡಿ ವಶೀಕರಣಗಳಿಗೆ #100,ರಾಹೇಜಪಾರ್ಕ್ ಎದುರು,ಮಾಗಡಿ ರಸ್ತೆ ಬೆಂಗಳೂರು.9845005009

ಪ್ರವಾಸ

Travel

25.1.2025 ರಿಂದ 4ದಿನಗಳ ರಾಮೇಶ್ವರ ಮತ್ತು 9ನವಗ್ರಹ ದೇವಾಲಯಗಳ ದರ್ಶನ. 30.1.2025 ರಿಂದ 4 ದಿನಗಳ ಧರ್ಮಸ್ಥಳ, ಕೊಲ್ಲೂರು, ಹೊರನಾಡು, ಶೃಂಗೇರಿ, ಮುರಡೇಶ್ವರ. 20.2.2025 ರಿಂದ 10ದಿನಗಳ ವೈಷ್ಣೋದೇವಿ, ಕುಲುಮನಾಲಿ, ಸಿಮ್ಲಾ, ದೆಹಲಿ, ವಾಘಬಾರ್ಡರ್. 12.3.2025 ರಿಂದ 5 ದಿನಗಳ ಕಾಶಿ, ಅಯೋಧ್ಯ, ಗಯಾ, ಪ್ರಯಾಗರಾಜ್. 12.5.2025 ರಿಂದ 7ದಿನಗಳ ಸಿಂಗಾಪೂರ, ಮಲೇಸಿಯಾ. ಶ್ರೀ ಗುರುರಾಜ ಟ್ರಾವಲ್ಸ್. ಕೋಲಾರ. 9449652555, 9611082432, 8123099913

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಸಾರ್ವಜನಿಕ ಪ್ರಕಟಣೆ

BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS

www.dhclassifieds.com

BOOK NOW

@ 500/-* PER SQCM

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9886213331 | +91 9731810277

+91 9901641752 | 9845114560

*Conditions apply

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |

Tanveer: +91 9886213331 | Ravichandra: +91 9901641752 |

Anitha: +91 9900428036

ಸಂಕ್ಷಿಪ್ತ ಸುದ್ದಿ

ಜೆಯುಡಿ ಉಪನಾಯಕ ಮಕ್ಕಿ ನಿಧನ

ಲಾಹೋರ್ (ಪಿಟಿಐ): ಮುಂಬೈ ದಾಳಿಯ ರೂವಾರಿ, ಉಗ್ರ ಹಫೀಜ್ ಸಯೀದ್ ಅವರ ಬಾಮೈದ ಮತ್ತು ನಿಷೇಧಿತ ಉಗ್ರ ಸಂಘಟನೆ ಜಮಾತ್‌-ಉದ್‌-ದವಾ (ಜೆಯುಡಿ)ಯ ಉಪನಾಯಕ ಹಫೀಜ್ ಅಬ್ದುಲ್ ರಹಮಾನ್ ಮಕ್ಕಿ ಹೃದಯಾಘಾತದಿಂದ ಶುಕ್ರವಾರ ಮೃತಪಟ್ಟಿದ್ದಾರೆ.

'ಮಕ್ಕಿ ಹಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮಧುಮೇಹ ಸಮಸ್ಯೆಯಿಂದ ಲಾಹೋರ್‌ನ ಖಾಸಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಶುಕ್ರವಾರ ಬೆಳಿಗ್ಗೆ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ' ಎಂದು ಜೆಡಿಯು ತಿಳಿಸಿದೆ.

ಭಯೋತ್ಪಾದಕ ಕೃತ್ಯಗಳಿಗೆ ಆರ್ಥಿಕ ನೆರವು ನೀಡಿದ ಆರೋಪದಡಿ 2020ರಲ್ಲಿ ಭಯೋತ್ಪಾದನೆ ನಿಗ್ರಹ ನ್ಯಾಯಾಲಯವು ಮಕ್ಕಿಗೆ ಆರು ತಿಂಗಳು ಜೈಲು ಶಿಕ್ಷೆ ವಿಧಿಸಿತ್ತು.

2023ರಲ್ಲಿ ಮಕ್ಕಿಯನ್ನು ಜಾಗತಿಕ ಭಯೋತ್ಪಾದಕ ಎಂದು ವಿಶ್ವಸಂಸ್ಥೆ ಘೋಷಿಸಿತ್ತು. ಈ ಸಂಬಂಧ ಆತನ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳ-ಲಾಗಿತ್ತು. ಆತನ ಸಂಚಾರ ಮತ್ತು ಶಸ್ತ್ರಾಸ್ತ್ರ ಬಳಕೆಯ ಮೇಲೆ ನಿರ್ಬಂಧ ಹೇರಲಾಗಿತ್ತು.

ಜೈಶಂಕರ್– ಸುಲ್ಲಿವಾನ್ ಭೇಟಿ: ಪಾಲುದಾರಿಕೆಯ ಚರ್ಚೆ

ಸ್ಯಾನ್ ಫ್ರಾನ್ಸಿಸ್ಕೊ (ಪಿಟಿಐ): ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲ್ಲಿವಾನ್ ಅವರನ್ನು ಶ್ವೇತಭವನದಲ್ಲಿ ಭೇಟಿಯಾಗಿ, ಉಭಯ ರಾಷ್ಟ್ರಗಳ ರಕ್ಷಣಾ ಕಾರ್ಯತಂತ್ರದ ಪಾಲುದಾರಿಕೆಯ ಪ್ರಗತಿಯ ಕುರಿತು ವಿಸ್ತೃತ ಚರ್ಚೆ ನಡೆಸಿದರು.

'ಈಗಿನ ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು' ಎಂದು ಜೈಶಂಕರ್ ಗುರುವಾರ 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಅಮೆರಿಕಕ್ಕೆ ಅಧಿಕೃತ ಭೇಟಿ ನೀಡಿರುವ ಜೈಶಂಕರ್ ಅವರು, ಅಲ್ಲಿನ ವಿದೇಶಾಂಗ ಸಚಿವ ಆಂಟೋನಿ ಬ್ಲಿಂಕನ್ ಹಾಗೂ ನಿರ್ಗಮಿಸಲಿರುವ ಬೈಡನ್ ಆಡಳಿತದ ಇನ್ನಿತರ ಸಚಿವರನ್ನು ಭೇಟಿಯಾಗಲಿದ್ದಾರೆ. ಮುಂಬರುವ ಟ್ರಂಪ್ ಆಡಳಿತದ ಹಿರಿಯ ನಾಯಕರರೊಂದಿಗೂ ಅವರು ಔಪಚಾರಿಕ ಸಭೆಗಳನ್ನು ನಡೆಸುವ ಸಾಧ್ಯತೆಯಿದೆ.

ಸಂಕ್ಷಿಪ್ತ ಸುದ್ದಿ

ಸಕ್ಕರೆ ಕಾರ್ಖಾನೆಯಲ್ಲಿ ಸ್ಫೋಟ: ಇಬ್ಬರ ಸಾವು

ಮುಂಬೈ (ಪಿಟಿಐ): ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಯೊಂದರಲ್ಲಿ ಗುರುವಾರ ಮಧ್ಯಾಹ್ನ ಸಲ್ಫರ್ ಟ್ಯಾಂಕ್ ಸ್ಫೋಟಗೊಂಡು ಇಬ್ಬರು ಮೃತಪಟ್ಟಿದ್ದು, ಒಬ್ಬರು ಗಾಯಗೊಂಡಿದ್ದಾರೆ.

ಸಿಂದಖೇಡ ರಾಜಾ ನಿವಾಸಿ ಅಶೋಕ ತೇಜರಾವ್ ದೇಶಮುಖ್ (56), ಪರ್ತೂರಿನ ಅಪ್ಪಾಸಾಹೇಬ ಶಂಕರ ಪಾರಖೆ (42) ಮೃತರು.

ಜಲ್ನಾ ಜಿಲ್ಲೆಯ ಬಾಗೂರಿನ ಬಾಗೇಶ್ವರಿ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ನಡೆಯುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಗಾಯಗೊಂಡ ವ್ಯಕ್ತಿಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪರ್ತೂರು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಜೈಪುರ: ಗುಂಡು ಹಾರಿಸಿಕೊಂಡು ಯೋಧ ಸಾವು

ಜೈಪುರ (ಪಿಟಿಐ): ರಾಜಸ್ಥಾನದ ಜೈಸಲ್ಮೇರ್ ಜಿಲ್ಲೆಯಲ್ಲಿ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಹೆಡ್ ಕಾನ್‌ಸ್ಟೆಬಲ್ ಒಬ್ಬರು ತಮ್ಮ ಸರ್ವೀಸ್ ರೈಫಲ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಘಟನೆ ಗುರುವಾರ ನಡೆದಿದ್ದು, ಮೃತರನ್ನು ಪಂಜಾಬ್‌ನ ಹೋಶಿಯಾರ್‌ಪುರದ ಕೃಷ್ಣ ಕುಮಾರ್ (44) ಎಂದು ಗುರುತಿಸಲಾಗಿದೆ. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ ಎಂದು ಅಧಿಕಾರಿ ರೂಪ್ ಸಿಂಗ್ ಇಂದಾ ಹೇಳಿದ್ದಾರೆ.

ಶಹಗಢ ಪ್ರದೇಶದ ಭೋನು ಗಡಿ ಹೊರಠಾಣೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಕೃಷ್ಣ ಅವರು ಕರ್ತವ್ಯದಲ್ಲಿದ್ದಾಗಲೇ ಗುಂಡು ಹಾರಿಸಿಕೊಂಡಿದ್ದಾರೆ. ಗುಂಡಿನ ಸದ್ದು ಕೇಳಿ ಬೇರೆ ಸೈನಿಕರು ಸ್ಥಳಕ್ಕೆ ಬಂದಾಗ ಅವರು ಮೃತಪಟ್ಟಿರುವುದು ಗೊತ್ತಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ನಕ್ಸಲ್ ಶರಣಾಗತಿ

ಗೊಂದಿಯಾ (ಪಿಟಿಐ): ಮಹಾರಾಷ್ಟ್ರದಲ್ಲಿ ಪೊಲೀಸರು ಹುಡುಕುತ್ತಿದ್ದ ನಕ್ಸಲ್ ಒಬ್ಬ ಗೊಂದಿಯಾದಲ್ಲಿ ಅಧಿಕಾರಿಗಳ ಮುಂದೆ ಶರಣಾಗಿದ್ದಾನೆ ಎಂದು ಶುಕ್ರವಾರ ಪೊಲೀಸರು ತಿಳಿಸಿದ್ದಾರೆ.

ನಕ್ಸಲ್ ದೇವಾ ಅಲಿಯಾಸ್ ಅರ್ಜುನ್ ಅಲಿಯಾಸ್ ರಾಕೇಶ್ ಸುಮದೋ ಮುದಾಮ್ (27) ನಿಷೇಧಿತ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾದ (ಮಾವೋವಾದಿ) ಭಾಗವಾಗಿದ್ದ ಎಂದು ಅಧಿಕಾರಿ ತಿಳಿಸಿದ್ದಾರೆ.

ಈತನ ಸುಳಿವು ನೀಡಿದವರಿಗೆ ಪೊಲೀಸರು ಈ ಹಿಂದೆ ₹7 ಲಕ್ಷ ಬಹುಮಾನ ಘೋಷಿಸಿದ್ದರು. ಆದರೆ, ಗುರುವಾರ ರಾಕೇಶ್ ಅಧಿಕಾರಿಗಳ ಮುಂದೆ ಶಸ್ತ್ರಾಸ್ತ್ರಗಳೊಂದಿಗೆ ಶರಣಾಗಿದ್ದಾನೆ ಎಂದು ತಿಳಿಸಿದ್ದಾರೆ.

ಟಿಕೆಟ್ ಖರೀದಿಗೆ ಹಣವಿಲ್ಲದಿದ್ದಕ್ಕೆ ರೈಲಿನ ಬೋಗಿ ಕೆಳಗೆ ಅವಿತು 4 ತಾಸು ಸಂಚರಿಸಿದ ವ್ಯಕ್ತಿ

ರೈಲಿನಡಿ ಅಡಗಿ 290 ಕಿ.ಮೀ. ಪಯಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಟಿಕೆಟ್ ಖರೀದಿಗೆ ಹಣವಿಲ್ಲ ಎಂಬ ಕಾರಣಕ್ಕೆ ಎಕ್ಸ್‌ಪ್ರೆಸ್ ರೈಲಿನ ಬೋಗಿಯ ಕೆಳಗೆ ಅವಿತುಕೊಂಡು ವ್ಯಕ್ತಿಯೊಬ್ಬರು 290 ಕಿ.ಮೀ. ದೂರ ಪ್ರಯಾಣಿಸಿದ್ದಾರೆ.

ರೈಲ್ವೆ ಇಲಾಖೆ ಸಿಬ್ಬಂದಿಯ ಗಮನಕ್ಕೆ ಬಾರದಂತೆ, ಇಷ್ಟೊಂದು ದೂರ ಪ್ರಯಾಣಿಸಿದ ವಿಚಿತ್ರ ಘಟನೆಯು ಮಧ್ಯ ಪ್ರದೇಶದಲ್ಲಿ ಗುರುವಾರ ನಡೆದಿದೆ.

ಜಬಲ್‌ಪುರ ನಿಲ್ದಾಣದಲ್ಲಿ, ಪುಣೆ–ದಾನಾಪುರ ಎಕ್ಸ್‌ಪ್ರೆಸ್ ರೈಲಿನಡಿ ಕ್ಯಾರೇಜ್ ಆ್ಯಂಡ್ ವ್ಯಾಗನ್ ವಿಭಾಗದ ಸಿಬ್ಬಂದಿಯು ವಾಡಿಕೆಯಂತೆ ಪರಿಶೀಲಿಸುವಾಗ ಎಸಿ–4 ಕೋಚ್ ಅಡಿ ವ್ಯಕ್ತಿಯೊಬ್ಬರು ಅವಿತಿರುವುದನ್ನು ಕಂಡರು. ತಕ್ಷಣವೇ ಲೋಕೊ ಪೈಲಟ್‌ಗೆ ರೈಲು ನಿಲ್ಲಿಸುವಂತೆ ಸೂಚಿಸಿದರು.

ರೈಲು ನಿಂತ ನಂತರ, ಸಿಬ್ಬಂದಿಯು ಕೋಚ್‌ನಡಿ ಪರಿಶೀಲಿಸಿದಾಗ ವ್ಯಕ್ತಿ ಒಬ್ಬರು ಅಡಗಿರುವುದು ಪತ್ತೆಯಾಯಿತು. ಆತ ಇಟಾರಸಿಯಿಂದ ಜಬಲ್‌ಪುರ ನಿಲ್ದಾಣಕ್ಕೆ ಇದೇ ರೀತಿ ಅವಿತು ಪ್ರಯಾಣಿಸಿದ್ದಾರೆ ಎಂದು ರೈಲ್ವೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

‘ದುಡ್ಡು ಕೊಟ್ಟು ಪ್ರಯಾಣದ ಟಿಕೆಟ್ ಖರೀದಿಸಲು ಸಾಧ್ಯವಿಲ್ಲದಿರುವುದಕ್ಕೆ ಈ ರೀತಿ ಪ್ರಯಾಣಿಸಿರುವೆ’ ಎಂದು ಆತ ಹೇಳಿದ್ದಾರೆ. ಅವರ ಪ್ರತಿಕ್ರಿಯೆಯನ್ನು ಗಮನಿಸಿದಾಗ, ಮಾನಸಿಕ ತೊಂದರೆಗೊಳಗಾಗಿರಬಹುದು ಎಂಬ ಶಂಕೆಯೂ ವ್ಯಕ್ತವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ಸಿಬ್ಬಂದಿ ವಿಚಾರಣೆ ನಡೆಸಿದ್ದು, ಆತನ ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಕ್ಕೆ ಮುಂದಾಗಿದ್ದಾರೆ. ರೈಲು ಬೋಗಿಯ ಕೆಳಗಿನಿಂದ ವ್ಯಕ್ತಿಯನ್ನು ಕೆಳಗಿಳಿಸುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

ಮುಖ್ಯಾಂಶಗಳು

- ಇಟಾರಸಿ ನಿಲ್ದಾಣದಿಂದ ಪ್ರಯಾಣ ಆರಂಭಿಸಿದ್ದ
- ಮಧ್ಯಪ್ರದೇಶದ ಜಬಲ್‌ಪುರ ನಿಲ್ದಾಣದಲ್ಲಿ ಪರಿಶೀಲನೆ ವೇಳೆ ಪತ್ತೆ
- ಪ್ರಯಾಣಿಕನಿಗೆ ಮಾನಸಿಕ ಸಮಸ್ಯೆ ಸಾಧ್ಯತೆ

ಸೇತುವೆಯಿಂದ ಉರುಳಿದ ಬಸ್–8 ಸಾವು

ಬಟಿಂಡಾ (ಪಿಟಿಐ): ಪಂಜಾಬ್‌ನ ಬಟಿಂಡಾದಲ್ಲಿ ಸೇತುವೆ ಮೇಲಿಂದ ಬಸ್ ಉರುಳಿ ಬಿದ್ದು, ಎಂಟು ಪ್ರಯಾಣಿಕರು ಶುಕ್ರವಾರ ಮೃತಪಟ್ಟಿದ್ದಾರೆ.

45ಕ್ಕೂ ಹೆಚ್ಚು ಪ್ರಯಾಣಿಕರಿದ್ದ ಖಾಸಗಿ ಬಸ್ ತಲವಂಡಿ ಸಾಬೊ ಮಾರ್ಗವಾಗಿ ಬಟಿಂಡಾ ಕಡೆಗೆ ಸಂಚರಿಸುತ್ತಿದ್ದಾಗ ಈ ಅವಘಡ ಸಂಭವಿಸಿದೆ.

ಪೊಲೀಸರು ಮತ್ತು ಜಿಲ್ಲಾಡಳಿತದ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ನಡೆಸಿ, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ತಂಡವು ಸಹ ನೆರವು ನೀಡಲು ಸ್ಥಳಕ್ಕೆ ದೌಡಾಯಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿದೆ. ಪ್ರತಿಕೂಲ ಹವಾಮಾನವು ಅವಘಡಕ್ಕೆ ಕಾರಣವಾಗಿರಬಹುದು ಎಂದು ಅಂದಾಜಿಸಲಾಗಿದೆ.

ಅಪಘಾತಕ್ಕೀಡಾದ ಬಸ್ ಸೇತುವೆಯಿಂದ ಕೆಳಕ್ಕೆ ಉರುಳಿ ಬಿದ್ದಿದ್ದು, ಸ್ಥಳೀಯರು ರಕ್ಷಣಾ ಕಾರ್ಯ ನಡೆಸಿದರು ಪಿಟಿಐ ಚಿತ್ರ

ಕೊಯಮತ್ತೂರು: ಚಾಟಿಯಿಂದ ಹೊಡೆದುಕೊಂಡ ಅಣ್ಣಾಮಲೈ

ಕೊಯಮತ್ತೂರು (ತಮಿಳುನಾಡು) (ಪಿಟಿಐ): ಅಣ್ಣಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿ ಮೇಲೆ ಲೈಂಗಿಕ ಕಿರುಕುಳ ನಡೆದಿರುವುದನ್ನು ಖಂಡಿಸಿ ತಾವು ನಡೆಸುತ್ತಿರುವ ಪ್ರತಿಭಟನೆಯ ಭಾಗವಾಗಿ ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಅವರು ಶುಕ್ರವಾರ ತಮ್ಮ ನಿವಾಸದ ಮುಂದೆ ಚಾಟಿಯಿಂದ ತಮಗೆ ತಾವೇ ಹೊಡೆದುಕೊಂಡರು.

ಹಸಿರು ಬಣ್ಣದ ಧೋತಿ ಧರಿಸಿದ್ದ ಅಣ್ಣಾಮಲೈ ಅವರು ತಮ್ಮ ಬರಿಮೈಗೆ ಚಾಟಿಯಿಂದ ಹೊಡೆದುಕೊಳ್ಳುತ್ತಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದೆ. ಈ ವೇಳೆ ಬಿಜೆಪಿ ಕಾರ್ಯಕರ್ತರು ಭಿತ್ತಿಪತ್ರಗಳನ್ನು ಹಿಡಿದು ಅವರ ಬಳಿ ನಿಂತರು.

‘ರಾಜ್ಯದಲ್ಲಿ ಡಿಎಂಕೆ ಪಕ್ಷವನ್ನು ಅಧಿಕಾರದಿಂದ ಕಿತ್ತೊಗೆಯುವ ವರೆಗೂ ಚಪ್ಪಲಿ ಧರಿಸುವುದಿಲ್ಲ’ ಎಂದು ಗುರುವಾರ ಹೇಳಿದ್ದ ಅವರು, ಸುದ್ದಿಗೋಷ್ಠಿಯ ಬಳಿಕ ತಮ್ಮ ಶೂಗಳನ್ನು ಕಳಚಿದ್ದರು.

ಅಣ್ಣಾ ವಿಶ್ವವಿದ್ಯಾಲಯದಲ್ಲಿ ನಡೆದ ಲೈಂಗಿಕ ಕಿರುಕುಳದಲ್ಲಿ ಸಂತ್ರಸ್ತೆಯ ಹೆಸರನ್ನು ಬಹಿರಂಗಗೊಳಿಸುವ ಮೂಲಕ ಎಫ್‌ಐಆರ್ ಸೋರಿಕೆ ಮಾಡಿರುವುದನ್ನು ಖಂಡಿಸಿ ಅವರು ಸರ್ಕಾರ ಮತ್ತು ಪೊಲೀಸರ ವಿರುದ್ಧ ಹರಿಹಾಯ್ದಿದ್ದಾರೆ.

ರೈತ ಮುಖಂಡ ಡಲ್ಲೇವಾಲ್ ಸುರಕ್ಷತೆ ಕುರಿತು ಕಳವಳ

ಪಂಜಾಬ್ ಸರ್ಕಾರಕ್ಕೆ ‘ಸುಪ್ರೀಂ’ ನೋಟಿಸ್

ನವದೆಹಲಿ(ಪಿಟಿಐ): ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಕೈಗೊಂಡಿರುವ ರೈತ ಮುಖಂಡ ಜಗಜೀತ್ ಸಿಂಗ್ ಡಲ್ಲೇವಾಲ್ ಅವರ ಜೀವ ಮತ್ತು ಸುರಕ್ಷತೆ ಕುರಿತು ಕಳವಳ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಅವರಿಗೆ ಅಗತ್ಯ ವೈದ್ಯಕೀಯ ನೆರವು ನೀಡುವ ಸಂಬಂಧ ಕ್ರಮ ತೆಗೆದುಕೊಳ್ಳುವಂತೆ ಪಂಜಾಬ್ ಸರ್ಕಾರಕ್ಕೆ ಶುಕ್ರವಾರ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ ಹಾಗೂ ಸುಧಾಂಶು ಧುಲಿಯಾ ಅವರು ಇದ್ದ ರಜಾಕಾಲದ ನ್ಯಾಯಪೀಠ, ಈ ಕುರಿತ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ನಡೆಸಿತು.

ಡಲ್ಲೇವಾಲ್ ಅವರಿಗೆ ವೈದ್ಯಕೀಯ ನೆರವು ನೀಡುವ ಸಂಬಂಧ ಸುಪ್ರೀಂ ಕೋರ್ಟ್ ನೀಡಿದ್ದ ನಿರ್ದೇಶನದಂತೆ ಕ್ರಮ ಕೈಗೊಂಡಿಲ್ಲ ಎಂದು ದೂರಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಿರುದ್ಧ ಈ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಲಾಗಿದೆ.

ನ್ಯಾಯಾಂಗ ನಿಂದನೆ ಅರ್ಜಿಗೆ ಸಂಬಂಧಿಸಿದಂತೆ, ಪಂಜಾಬ್ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದ ಪೀಠವು, ಕ್ರಮ ಕೈಗೊಂಡ ಕುರಿತು ಶನಿವಾರ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿತು.

‘ಒಬ್ಬ ವ್ಯಕ್ತಿಯ ಜೀವ ಅಪಾಯದಲ್ಲಿದ್ದು, ನೀವು ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಅವರಿಗೆ (ಡಲ್ಲೇವಾಲ್) ವೈದ್ಯಕೀಯ ನೆರವು ನೀಡಲೇಬೇಕು. ಆದರೆ, ನೀವು ನ್ಯಾಯಾಲಯದ ಸೂಚನೆ ಪಾಲನೆ ಮಾಡುತ್ತಿಲ್ಲ ಎಂಬ ಭಾವನೆ ಮೂಡಿದೆ’ ಎಂದು ಪೀಠ ಹೇಳಿತು.

‘ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಆಗುತ್ತದೆ ಎಂಬ ಪರಿಸ್ಥಿತಿ ಇದ್ದಲ್ಲಿ, ಕಠಿಣ ಕ್ರಮ ಕೈಗೊಳ್ಳಬೇಕು’ ಎಂದೂ ಸೂಚಿಸಿತು.

ವಿಚಾರಣೆ: ಕೋರ್ಟ್‌ಗೆ ಅಲ್ಲು ಹಾಜರು

ಹೈದರಾಬಾದ್ (ಪಿಟಿಐ): ‘ಪುಷ್ಪ–2’ ಚಿತ್ರ ಪ್ರದರ್ಶನದ ವೇಳೆ ಸಂಭವಿಸಿದ್ದ ಕಾಲ್ತುಳಿತದಲ್ಲಿ ಮಹಿಳೆಯೊಬ್ಬರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿ ತೆಲುಗು ಚಿತ್ರನಟ ಅಲ್ಲು ಅರ್ಜುನ್ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಶುಕ್ರವಾರ ನ್ಯಾಯಾಲಯದ ವಿಚಾರಣೆಗೆ ಹಾಜರಾದರು.

ಅಲ್ಲು ಅರ್ಜುನ್

ಪ್ರಕರಣದ 11ನೇ ಆರೋಪಿಯಾಗಿರುವ ಅಲ್ಲು ಅರ್ಜುನ್ ಅವರು ಜಾಮೀನು ಅರ್ಜಿಯನ್ನು ಸಲ್ಲಿಸಿದ್ದು, ಡಿಸೆಂಬರ್ 30ರಂದು ಈ ಅರ್ಜಿಯ ವಿಚಾರಣೆ ನಡೆಯುವ ಸಾಧ್ಯತೆಯಿದೆ. ಪ್ರಕರಣ ಸಂಬಂಧ ಅಲ್ಲು ಅರ್ಜುನ್ ಅವರನ್ನು ಡಿ.13ರಂದು ಬಂಧಿಸಿ ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ನ್ಯಾಯಾಲಯವು ಅವರಿಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿತ್ತು. ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿದ ಕಾರಣ ಡಿ.14ರಂದು ಅಲ್ಲು ಅರ್ಜುನ್ ಬಿಡುಗಡೆಯಾಗಿತ್ತು.

ಸ್ಥಳೀಯ ನ್ಯಾಯಾಲಯ ವಿಧಿಸಿದ್ದ ನ್ಯಾಯಾಂಗ ಬಂಧನದ ಅವಧಿಯು ಇಂದು ಮುಕ್ತಾಯಗೊಂಡ ಕಾರಣ ಅಲ್ಲು ಅರ್ಜುನ್ ವಿಚಾರಣೆಗೆ ಹಾಜರಾದರು.

ಹಿಮ ಸಿಂಚನ ಜಮ್ಮು–ಕಾಶ್ಮೀರದ ಶ್ರೀನಗರದಲ್ಲಿ ಹಿಮಪಾತದ ಮಧ್ಯೆಯೇ ಜನರು ವಾಹನ ಚಲಾಯಿಸಿಕೊಂಡು ಹೋಗುತ್ತಿದ್ದ ದೃಶ್ಯ ಶುಕ್ರವಾರ ಕಂಡುಬಂತು ಎಎಫ್‌ಪಿ ಚಿತ್ರ

‘ರಜೆ’ಗಾಗಿ ಸಹಪಾಠಿಯ ಹತ್ಯೆ

ಪ್ರಜಾವಾಣಿ ವಾರ್ತೆ

ಲಖನೌ: ‘ರಜೆ’ಗಾಗಿ ಎಂಟನೇ ತರಗತಿಯ ಬಾಲಕನೊಬ್ಬನು ಎರಡನೇ ತರಗತಿ ವಿದ್ಯಾರ್ಥಿಯ ಕೊಲೆ ಮಾಡಿದ್ದಾನೆ ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.



ಉತ್ತರ ಪ್ರದೇಶದ ಹಾಥರಸ್ ಜಿಲ್ಲೆಯ ರಸಗವಾನ್ ಖಾಸಗಿ ಶಾಲೆಯ ವಿದ್ಯಾರ್ಥಿನಿಲಯದಲ್ಲಿ ಈ ಘಟನೆ ನಡೆದಿದೆ.

‘ಶಾಲೆಯಲ್ಲಿನ ವಿದ್ಯಾರ್ಥಿಯೊಬ್ಬ ಮೃತಪಟ್ಟರೆ, ಆ ಶಾಲೆಗೆ ರಜೆ ಘೋಷಿಸುವುದನ್ನು ಗಮನಿಸಿದ್ದ ಆರೋಪಿತನು, ರಜೆಗಾಗಿಯೇ ತನ್ನ ಕಿರಿಯ ಸಹಪಾಠಿಯನ್ನು ಕೊಂದಿದ್ದಾನೆ’ ಎಂದು ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪದಲ್ಲಿ ಉಲ್ಲೇಖವಾಗಿದೆ.

‘ಶಾಲಾ ಬಾಲಕನು, ವಿದ್ಯಾರ್ಥಿಯ ಕೊರಳನ್ನು ಟವೆಲ್‌ನಿಂದ ಬಿಗಿದು ಕೊಂದಿದ್ದಾನೆ. ನಂತರ ಆ ಟವೆಲ್ ಅನ್ನು ಶಾಲಾ ಕಟ್ಟಡದ ಹಿಂಭಾಗದಲ್ಲಿರುವ ಪೊದೆಗೆ ಎಸೆದಿದ್ದಾನೆ’ ಎಂದು ಹಾಥರಸ್‌ನ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಕಾನೂನಿನ ಸಂಘರ್ಷಕ್ಕೆ ಒಳಪಟ್ಟ ಬಾಲಕನನ್ನು ವಶಕ್ಕೆ ಪಡೆಯಲಾಗಿದೆ ಎಂದಿದ್ದಾರೆ.

ಕೊಲೆಗೆ ಸಂಬಂಧಿಸಿದಂತೆ ಈ ಹಿಂದೆ ಬಂಧನಕ್ಕೊಳಗಾಗಿದ್ದ ಶಾಲಾ ವ್ಯವಸ್ಥಾಪಕ ದಿನೇಶ್ ಬಘೇಲ್ ಸೇರಿದಂತೆ ನಾಲ್ವರಿಗೆ ಜಿಲ್ಲಾ ನ್ಯಾಯಾಲಯವು ಜಾಮೀನು ಮಂಜೂರು ಮಾಡಿದೆ.

ಪೊಲೀಸರು ಹಿಂಸಿಸುತ್ತಾರೆ ಎಂಬ ಭಯದಿಂದಲೇ, ಈ ನಾಲ್ವರೂ ತಮ್ಮ ಮೇಲಿದ್ದ ಕೊಲೆ ಆರೋಪವನ್ನು ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ.

ಶಾಲಾ ವ್ಯವಸ್ಥಾಪಕ ಮತ್ತು ಇತರರನ್ನು ರಕ್ಷಿಸಲಿಕ್ಕಾಗಿಯೇ ಪೊಲೀಸರು, ಎಂಟನೇ ತರಗತಿ ಬಾಲಕನ ಮೇಲೆ ಕೊಲೆಯ ಸುಳ್ಳು ಆರೋಪ ಹೊರಿಸಿದ್ದಾರೆ ಎಂದು ಮೃತ ವಿದ್ಯಾರ್ಥಿಯ ಪೋಷಕರು ದೂರಿದ್ದಾರೆ.

ಅಮಾನತು: ವಿವರಣೆ ಕೇಳಿ ಪತ್ರ

ತಿರುವನಂತಪುರ (ಪಿಟಿಐ): ‘ಕಲೆಕ್ಟರ್ ಬ್ರೋ’ ಎಂದೇ ಹೆಸರಾಗಿರುವ ಕೇರಳದ ಐಎಎಸ್ ಅಧಿಕಾರಿ ಎನ್. ಪ್ರಶಾಂತ್ ಅವರನ್ನು ಹಿರಿಯ ಅಧಿಕಾರಿಗಳ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಟೀಕೆ ವ್ಯಕ್ತಪಡಿಸಿದ ಕಾರಣಕ್ಕೆ ಅಮಾನತು ಮಾಡಲಾಗಿದ್ದು, ತಮ್ಮ ವಿರುದ್ಧದ ಆರೋಪಕ್ಕೆ ಅವರು ಮುಖ್ಯ ಕಾರ್ಯದರ್ಶಿಯಿಂದ ವಿವರಣೆ ಕೇಳಿದ್ದಾರೆ.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎ. ಜಯತಿಲಕ್ ಅವರನ್ನು ಸಾಮಾಜಿಕ ಮಾಧ್ಯಮದಲ್ಲಿ ಟೀಕಿಸಿದ ಕಾರಣ ನೀಡಿ, ಪ್ರಶಾಂತ್ ಅವರನ್ನು ಅಮಾನತು ಮಾಡಲಾಗಿತ್ತು. ತಮ್ಮ ವಿರುದ್ಧ ದೂರು ನೀಡಿದವರು ಯಾರು, ಡಿಜಿಟಲ್ ಸಾಕ್ಷ್ಯಗಳನ್ನು ಸಾಚಾ ಎಂದು ತೀರ್ಮಾನ ಮಾಡಿದ್ದು ಹೇಗೆ ಎಂದು ಪ್ರಶ್ನಿಸಿ ಅವರು ಡಿ. 16ರಂದು ಪತ್ರ ಬರೆದಿದ್ದಾರೆ.

ವಿವಾದಾತ್ಮಕ ಪೋಸ್ಟ್: ಬಾಂಗ್ಲಾದೇಶದ ಇಬ್ಬರು ವಿದ್ಯಾರ್ಥಿಗಳು ಡಿಬಾರ್

ಪ್ರಜಾವಾಣಿ ವಾರ್ತೆ

ಲಖನೌ: ಇಸ್ಕಾನ್ ಅನ್ನು ಮೂಲಭೂತವಾದಿ ಸಂಘಟನೆ ಎಂದು ಕರೆದು, ಭಾರತೀಯ ಮಹಿಳೆಯರ ಕುರಿತಂತೆ ಆಕ್ಷೇಪಾರ್ಹ ಪದಗಳನ್ನು ಬಳಸಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದ ಬಾಂಗ್ಲಾದೇಶದ ಇಬ್ಬರು ವಿದ್ಯಾರ್ಥಿಗಳನ್ನು ಅಲಿಗಢ ಮುಸ್ಲಿಂ ವಿದ್ಯಾಲಯ (ಎಂಎಂಯು)ದಿಂದ ಡಿಬಾರ್ ಮಾಡಲಾಗಿದೆ. ಮತ್ತೊಬ್ಬ ವಿದ್ಯಾರ್ಥಿಗೆ ಎಚ್ಚರಿಕೆಯ ನೋಟಿಸ್ ನೀಡಲಾಗಿದೆ.

‘ಎಲ್‌ಎಲ್‌ಬಿಗೆ ಪ್ರವೇಶಾತಿ ಪಡೆದಿದ್ದ ಮೆಹಮ್ಮೂದ್ ಹಸನ್, ಸಮೀಉಲ್ ಇಸ್ಲಾಂ ಅವರನ್ನು ಡಿಬಾರ್ ಮಾಡಲಾಗಿದೆ. ಇಬ್ಬರೂ ಈಗ ಬಾಂಗ್ಲಾದೇಶದಲ್ಲಿದ್ದಾರೆ. ಬಿ.ಎ. (ಅರ್ಥಶಾಸ್ತ್ರ) ಪದವಿ ಪಡೆಯುತ್ತಿರುವ ಮೊಹಮ್ಮದ್ ಆರೀಫ್–ಉರ್–ರೆಹಮಾನ್ ಅವರಿಗೆ ಎಚ್ಚರಿಕೆ ಪತ್ರ ನೀಡಿದ್ದು, ಈಗಿನ ವಿದ್ಯಾಭ್ಯಾಸ ಮುಗಿದ ಬಳಿಕ ಕಾಲೇಜಿನಲ್ಲಿ ಮತ್ತೆ ಶಿಕ್ಷಣ ಮುಂದುವರಿಸಲು ಅವರಿಗೆ ಅವಕಾಶ ನೀಡುವುದಿಲ್ಲ’ ಎಂದು ವಿಶ್ವವಿದ್ಯಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

‘ಆರ್.ಜಿ. ಕರ್ ಪ್ರಕರಣ: ತನಿಖೆ ಚುರುಕುಗೊಳಿಸಿ’

ಕೋಲ್ಕತ್ತ (ಪಿಟಿಐ): ನಗರದ ಆರ್.ಜಿ. ಕರ್ ವೈದ್ಯಕೀಯ ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿಯ ಮೇಲೆ ನಡೆದ ಅತ್ಯಾಚಾರ ಹಾಗೂ ಆಕೆಯ ಕೊಲೆ ಪ್ರಕರಣದ ತನಿಖೆಯನ್ನು ಚುರುಕುಗೊಳಿಸುವಂತೆ ವೈದ್ಯರು ಆಗ್ರಹಿಸಿದ್ದಾರೆ.



ಸಚಿವಾಲಯಕ್ಕೆ ಭೇಟಿ ನೀಡಿದ ಅಸಮಾಧಾನಿತ ವೈದ್ಯರ ನಿಯೋಗವು, ತನಿಖೆಗೆ ಸಹಕಾರಿಯಾಗಲು ಸಿಬಿಐಗೆ ಎನ್‌ಒಸಿ ನೀಡಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಮನೋಜ್ ಪಂತ್ ಅವರನ್ನು ಗುರುವಾರ ಒತ್ತಾಯಿಸಿತು.

ಸಿಬಿಐ ಕಚೇರಿಗೆ ತೆರಳಿದ ಮತ್ತೊಂದು ವೈದ್ಯರ ತಂಡವು ತನಿಖೆಯನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು ಎಂದು ಆಗ್ರಹಿಸಿತು.

‘ಮುಖ್ಯ ಕಾರ್ಯದರ್ಶಿ ನಮ್ಮನ್ನು ಭೇಟಿಯಾಗಲಿಲ್ಲ. ಬೇಡಿಕೆಯನ್ನು ಆಲಿಸಲಿಲ್ಲ’ ಎಂದು ನಿಯೋಗದಲ್ಲಿದ್ದ ವೈದ್ಯರೊಬ್ಬರು ತಿಳಿಸಿದರು.

ಕೃಷ್ಣೇಗೌಡಗೆ ಸೋಲು, ಖಜಾಂಚಿ ಸ್ಥಾನಕ್ಕೆ ಶಿವರುದ್ರಯ್ಯ ಆಯ್ಕೆ

ನೌಕರರ ಸಂಘಕ್ಕೆ ಮತ್ತೆ ಷಡಾಕ್ಷರಿ ಸಾರಥ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರು ಪುನರಾಯ್ಕೆ ಆಗಿದ್ದಾರೆ.

ಷಡಾಕ್ಷರಿ ಅವರು 507 ಮತಗಳು ಹಾಗೂ ಬಿ.ಪಿ. ಕೃಷ್ಣೇಗೌಡ ಅವರು 442 ಮತಗಳನ್ನು ಪಡೆದರು. ಷಡಾಕ್ಷರಿ ಅವರು 65 ಮತಗಳ ಅಂತರದಿಂದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎ. ಹನುಮನರಸಯ್ಯ ಘೋಷಿಸಿದರು.

ಖಜಾಂಚಿ ಸ್ಥಾನಕ್ಕೆ ಶಿವರುದ್ರಯ್ಯ ವಿ.ವಿ. ಆಯ್ಕೆ: ಖಜಾಂಚಿ ಸ್ಥಾನಕ್ಕೆ ಸ್ಪರ್ಧಿಸಿದ್ದ ಷಡಾಕ್ಷರಿ ಬಣದ ನಾಗರಾಜ ಆರ್. ಜುಮ್ಮನ್ನವರ ಅವರು ಸೋಲು ಕಂಡಿದ್ದು, ಕೃಷ್ಣೇಗೌಡ ಬಣದ ಶಿವರುದ್ರಯ್ಯ ವಿ.ವಿ. 18 ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ. ಶಿವರುದ್ರಯ್ಯ 485 ಮತಗಳನ್ನು ಪಡೆದರೆ, ನಾಗರಾಜ ಅವರು 467 ಪಡೆದರು.

ಶಿವರುದ್ರಯ್ಯ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಶಾಖೆಯಿಂದ ಆರಂಭಗೊಂಡು ರಾಜ್ಯ ಸಂಘದ ಅಧ್ಯಕ್ಷರು, ಪದಾಧಿಕಾರಿಗಳ ಚುನಾವಣಾ ಪ್ರಕ್ರಿಯೆ ಸೆ. 17ರಿಂದ ವಿವಿಧ ಹಂತದಲ್ಲಿ ಆರಂಭವಾಗಿತ್ತು. ಮೊದಲ ಹಂತದಲ್ಲಿ ಮೂರು ಶೈಕ್ಷಣಿಕ ಜಿಲ್ಲೆ ಒಳಗೊಂಡ 33 ಜಿಲ್ಲೆಗಳು ಹಾಗೂ 191 ತಾಲ್ಲೂಕುಗಳ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ನಂತರ ಆಯಾ ತಾಲ್ಲೂಕು ಹಾಗೂ ಜಿಲ್ಲಾ ಘಟಕಗಳ ಅಧ್ಯಕ್ಷರು, ಖಜಾಂಚಿ ಹಾಗೂ ರಾಜ್ಯ ಪರಿಷತ್ ಸದಸ್ಯರನ್ನು ಆಯ್ಕೆ ಮಾಡಲಾಗಿತ್ತು.

ತಾಲ್ಲೂಕು, ಜಿಲ್ಲಾ ಘಟಕಗಳ ತಲಾ ನಾಲ್ವರು ಪದಾಧಿಕಾರಿಗಳು ಸೇರಿದಂತೆ ಬೆಂಗಳೂರು ನಗರ ವ್ಯಾಪ್ತಿಯ 102 ರಾಜ್ಯ ಪರಿಷತ್ ಸದಸ್ಯರು ಹಾಗೂ ಎಂಟು ಯೋಜನಾ ಘಟಕಗಳ ಪದಾಧಿಕಾರಿಗಳು ಶುಕ್ರವಾರ ಕಬ್ಬನ್ ಉದ್ಯಾನದ ನೌಕರರ ಸಂಘದ ಕಚೇರಿ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಮತ ಚಲಾಯಿಸಿದರು.

ಹಿಂದಿನ ಅವಧಿಯಲ್ಲಿ ನೌಕರರ ಹಿತಾಸಕ್ತಿಗೆ ಪ್ರಾಮಾಣಿಕ ಸ್ಪಂದನೆಗೆ ಸಿಕ್ಕ ಫಲವಾಗಿ ಪುನರ್ ಆಯ್ಕೆ ಸಾಧ್ಯವಾಗಿದೆ. ಎನ್‌ಪಿಎಸ್ ಸೇರಿ ಉಳಿದ ಸವಾಲುಗಳಿಗೆ ಆದ್ಯತೆ ನೀಡುವೆ

ಸಿ.ಎಸ್. ಷಡಾಕ್ಷರಿ
ರಾಜ್ಯಾಧ್ಯಕ್ಷ, ಸರ್ಕಾರಿ ನೌಕರರ ಸಂಘ

‘ಮೂಲತ್ವ ವಿಶ್ವ ಪ್ರಶಸ್ತಿ’ ಪ್ರದಾನ ನಾಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಮೂಲತ್ವ ಫೌಂಡೇಷನ್ ಚಾರಿಟಬಲ್ ಟ್ರಸ್ಟ್‌ನ ‘10ನೇ ವರ್ಷದ ಮೂಲತ್ವ ವಿಶ್ವ ಪ್ರಶಸ್ತಿ 2024’ಕ್ಕೆ ಉಡುಪಿಯ ಮುಳುಗುತಜ್ಞ ಈಶ್ವರ್ ಮಲ್ಪೆ ಆಯ್ಕೆಯಾಗಿದ್ದಾರೆ ಎಂದು ಟ್ರಸ್ಟ್ ಸ್ಥಾಪಕ ಪ್ರಕಾಶ್ ಮೂಲತ್ವ ತಿಳಿಸಿದರು.

ಈಶ್ವರ್ ಮಲ್ಪೆ

ಪ್ರಶಸ್ತಿಯು ₹1ಲಕ್ಷ ನಗದು ಹಾಗೂ ಫಲಕ ಒಳಗೊಂಡಿದ್ದು ನಗರದ ಕೊಡಿಯಾಲಬೈಲ್‌ನ ಶಾರದಾ ವಿದ್ಯಾಲಯದ ಸಭಾಂಗಣದಲ್ಲಿ ಡಿ.29ರಂದು ಬೆಳಿಗ್ಗೆ 10ಕ್ಕೆ ನಡೆಯಲಿರುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ಮಂಗಳೂರಿನ ಮೀನುಗಾರಿಕಾ ಕಾಲೇಜಿನ ಡೀನ್ ಪ್ರೊ.ಎಚ್.ಎನ್. ಆಂಜನೇಯಪ್ಪ, ಶಾರದಾ ಸಮೂಹ ಸಂಸ್ಥೆಗಳ ಅಧ್ಯಕ್ಷ ಪ್ರೊ.ಎಂ.ಬಿ. ಪುರಾಣಿಕ್, ಸಮಾಜ ಸೇವಕ ರವಿ ಕಟಪಾಡಿ, ದೈಜಿ ವರ್ಲ್ಡ್ ಸ್ಥಾಪಕ ವಾಲ್ಟರ್ ನಂದಳಿಕೆ, ಉಚ್ಚಿಲ ಮೊಗವೀರ ಮಹಾಸಭಾದ ಉಪಾಧ್ಯಕ್ಷ ಮೋಹನ್ ಬೆಂಗ್ರೆ ಅತಿಥಿಗಳಾಗಿರುವರು. 11.30ರಿಂದ ಈಶ್ವರ್ ಮಲ್ಪೆ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವರು ಎಂದು ತಿಳಿಸಿದರು.

ಟ್ರಸ್ಟಿಗಳಾದ ಕಲ್ಪನಾ ಕೋಟ್ಯಾನ್, ಶೈನಿ, ಅಕ್ಷತಾ ಕದ್ರಿ, ಲಕ್ಷ್ಮೀಶ ಪಿ.ಕೋಟ್ಯಾನ್, ಸದಸ್ಯ ಮಹೇಶ್ ಅಮೀನ್ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದ್ದರು.

ನವೀನ್ ಪಡೀಲ್‌ಗೆ ‘ವಿಶ್ವ ಪ್ರಭಾ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಉಡುಪಿ: ಉಡುಪಿಯ ಸಂಸ್ಕೃತಿ ವಿಶ್ವ ಪ್ರತಿಷ್ಠಾನ ನೀಡುವ, ಪ್ರಭಾವತಿ ಹಾಗೂ ವಿಶ್ವನಾಥ್ ಶೆಣೈ ಪ್ರಾಯೋಜಿತ ‘ವಿಶ್ವಪ್ರಭಾ ಪುರಸ್ಕಾರ’ವನ್ನು ರಂಗಭೂಮಿ ಕಲಾವಿದ ನವೀನ್ ಡಿ.ಪಡೀಲ್ ಅವರಿಗೆ ನೀಡಲಾಗುವುದು ಎಂದು ಪ್ರತಿಷ್ಠಾನದ ಸಂಚಾಲಕ ಮರವಂತೆ ನಾಗರಾಜ್ ಹೆಬ್ಬಾರ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಪ್ರಶಸ್ತಿ ₹1 ಲಕ್ಷ ನಗದು ಹಾಗೂ ಫಲಕ ಒಳಗೊಂಡಿದೆ. ಫೆಬ್ರುವರಿಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ರಂಗಭೂಮಿ ಮತ್ತು ಚಲನಚಿತ್ರ ನಟರಾದ ನವೀನ್ ಡಿ.ಪಡೀಲ್ ತುಳು ಭಾಷೆಯ 15 ಸಾವಿರಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ ಎಂದರು.

ಪ್ರತಿಷ್ಠಾನದ ಸ್ಥಾಪಕ ವಿಶ್ವನಾಥ್ ಶೆಣೈ, ಉಪಾಧ್ಯಕ್ಷರಾದ ಸಂಧ್ಯಾ ಶೆಣೈ ಹಾಗೂ ವಿಘ್ನೇಶರ ಅಡಿಗ, ಸಂಚಾಲಕ ರವಿರಾಜ್ ಎಚ್.ಪಿ ಇದ್ದರು.

ಹೆಡ್ ಕಾನ್‌ಸ್ಟೆಬಲ್‌ಗಳ ಅಮಾನತು

ಒಂದನೇ ಪುಟದಿಂದ...

ಬಳಿಕ ಗಾಂಧಿ ಗಂಜ್ ಠಾಣೆಗೆ ತೆರಳಿ ಸಚಿನ್‌ನನ್ನು ಹುಡುಕಿಕೊಡುವಂತೆ ದೂರು ನೀಡಲು ಮುಂದಾಗಿದ್ದರು. ಆದರೆ, ಠಾಣೆಯಲ್ಲಿದ್ದ ಹೆಡ್ ಕಾನ್‌ಸ್ಟೆಬಲ್‌ಗಳಾದ ರಾಜೇಶ್ ಚೆಲ್ವಾ ಮತ್ತು ಶಾಮಲಾ ಎಫ್‌ಐಆರ್ ದಾಖಲಿಸಿಕೊಂಡಿರಲಿಲ್ಲ. ಯುವಕ ಕಟ್ಟಿತೂಗಾಂವ್ ಗ್ರಾಮದವನಾಗಿದ್ದರಿಂದ ಧನ್ನೂರ ಪೊಲೀಸ್ ಠಾಣೆಗೆ ಹೋಗುವಂತೆ ಹೇಳಿ ಕಳುಹಿಸಿದ್ದರು. ದೂರು ಸ್ವೀಕರಿಸದೆ ಕರ್ತವ್ಯಲೋಪ ಎಸಗಿದ ಕಾರಣಕ್ಕೆ ಇಬ್ಬರನ್ನು ಅಮಾನತುಗೊಳಿಸಲಾಗಿದೆ ಎಂದು ಪೊಲೀಸ್ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಸಚಿನ್ ಅವರ ಸಹೋದರಿ ಸವಿತಾ ಅವರು ನೀಡಿರುವ ದೂರು ಆಧರಿಸಿ ರಾಜು ಕಪನೂರ್ ಸೇರಿ ಒಂಬತ್ತು ಜನರ ವಿರುದ್ಧ ಬೀದರ್ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಇಡೀ ಪ್ರಕರಣದ ತನಿಖೆಯನ್ನು ಬೀದರ್ ರೈಲ್ವೆ ಪೊಲೀಸರು ಮಾಡುತ್ತಿದ್ದಾರೆ. ಅದರ ಬಗ್ಗೆ ನಾನು ಏನೂ ಮಾತನಾಡಲಾರೆ

ಪ್ರದೀಪ್ ಗುಂಟಿ
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬೀದರ್

ಸ್ಟೀಲರ್ಸ್, ಪೈರೇಟ್ಸ್ ಫೈನಲ್ ಪ್ರವೇಶ

ಸತತ 2ನೇ ಬಾರಿ ಪ್ರಶಸ್ತಿ ಸುತ್ತಿಗೆ ಹರಿಯಾಣ: ಯೋಧಾಸ್, ದಬಾಂಗ್‌ಗೆ ನಿರಾಸೆ

ಪುಣೆ (ಪಿಟಿಐ): ಅಂತಿಮ ಕ್ಷಣದ ಒತ್ತಡವನ್ನು ಸಮರ್ಥವಾಗಿ ನಿಭಾಯಿಸಿದ ಹರಿಯಾಣ ಸ್ಟೀಲರ್ಸ್ ತಂಡ ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿಯ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಯು.ಪಿ. ಯೋಧಾಸ್ ತಂಡದ ಸವಾಲನ್ನು 28–25ರಲ್ಲಿ ಮೆಟ್ಟಿನಿಂತು ಫೈನಲ್ ಪ್ರವೇಶಿಸಿತು.

ಬಾಲೇವಾಡಿ ಕ್ರೀಡಾ ಸಂಕೀರ್ಣದಲ್ಲಿ ಶುಕ್ರವಾರ ನಡೆದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಸ್ಟೀಲರ್ಸ್ ತಂಡ ವಿರಾಮದ ವೇಳೆ ಕೇವಲ ಒಂದು ಪಾಯಿಂಟ್‌ನಿಂದ (12–11ರಲ್ಲಿ) ಮುಂದಿತ್ತು. ಹರಿಯಾಣ ಸ್ಟೀಲರ್ಸ್ ಇದೇ 29ರಂದು (ಭಾನುವಾರ) ನಡೆಯಲಿರುವ ಫೈನಲ್‌ನಲ್ಲಿ ಮೂರು ಬಾರಿಯ ಚಾಂಪಿಯನ್ ಪಟ್ನಾ ಪೈರೇಟ್ಸ್ ತಂಡವನ್ನು ಎದುರಿಸಲಿದೆ.

ರೋಚಕ ಹೋರಾಟ ಕಂಡ ಎರಡನೇ ಸೆಮಿಫೈನಲ್‌ನಲ್ಲಿ ಪೈರೇಟ್ಸ್, 32–28 ರಿಂದ ದಬಾಂಗ್ ಡೆಲ್ಲಿ ತಂಡವನ್ನು ಸೋಲಿಸಿತು. ವಿರಾಮದ ವೇಳೆ ಪೈರೇಟ್ಸ್ 17–10 ಪಾಯಿಂಟ್‌ಗಳಿಂದ ಮುಂದಿತ್ತು.

ಯು.ಪಿ. ಯೋಧಾಸ್ ಅಂಕಣದಲ್ಲಿ ಹರಿಯಾಣ ಸ್ಟೀಲರ್ಸ್ ತಂಡದ ವಿನಯ್ ರೇಡಿಂಗ್‌ನಲ್ಲಿ ತೊಡಗಿದ್ದು ಹೀಗೆ....

ಲೀಗ್ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿದ್ದ ಹರಿಯಾಣ ನೇರವಾಗಿ ಸೆಮಿಫೈನಲ್ ಪ್ರವೇಶಿಸಿತ್ತು. ಯೋಧಾಸ್ ತಂಡ ಮೊದಲ ಎಲಿಮಿನೇಟರ್ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ಸೋಲಿಸಿ ನಾಲ್ಕರ ಘಟ್ಟ ತಲುಪಿತ್ತು.

ಸ್ಟೀಲರ್ಸ್ ತಂಡದ ಪರ ಶಿವಂ ಪತಾರೆ ಮತ್ತು ವಿನಯ್ ಕ್ರಮವಾಗಿ 7 ಮತ್ತು 6 ಅಂಕ ಗಳಿಸಿದರು. ರಾಹುಲ್ 5 ಅಂಕ ಗಳಿಸಿದರು. ಯೋಧಾಸ್ ಪರ ಗಗನ್ ಗೌಡ ಮತ್ತು ಭವಾನಿ ರಜಪೂತ್ ಕ್ರಮವಾಗಿ 10 ಮತ್ತು 5 ಅಂಕ ಗಳಿಸಿ ತಂಡದ ಹೋರಾಟಕ್ಕೆ ಸಾಕ್ಷಿಯಾದರು.

ಪಂದ್ಯದಲ್ಲಿ ಯೋಧಾಸ್ ಒಮ್ಮೆ (ದ್ವಿತೀಯಾರ್ಧದ ಎರಡನೇ ನಿಮಿಷ) ಆಲೌಟ್ ಆಯಿತು. ಮುಕ್ತಾಯಕ್ಕೆ ಐದು ನಿಮಿಷಗಳು ಬಾಕಿ ಇರುವಾಗ ಹರಿಯಾಣ ಸ್ಟೀಲರ್ಸ್ 23– 21ರಲ್ಲಿ ಅಂತರ ಕಾಯ್ದುಕೊಳ್ಳುವ ಮೂಲಕ ಅಲ್ಪ ಮುನ್ನಡೆ ಉಳಿಸಿಕೊಂಡಿತು.

35ನೇ ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್

ಕರ್ನಾಟಕದ ಯಶ್, ಸಿದ್ಧಿ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಯಶ್ ಎಚ್.ಪಾಲ್ ಮತ್ತು ಸಿದ್ಧಿ ಜಿ. ಶಾ ಅವರು ವಿಜಯವಾಡದಲ್ಲಿ ಶುಕ್ರವಾರ ಆರಂಭವಾದ 35ನೇ ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಸಾಧನೆಯೊಂದಿಗೆ ಕೂಟ ದಾಖಲೆ ನಿರ್ಮಿಸಿದರು.

ಬಾಲಕರ 200 ಮೀಟರ್ ಬ್ರೆಸ್ಟ್ ಸ್ಟ್ರೋಕ್ (ಗುಂಪು 2) ಸ್ಪರ್ಧೆಯಲ್ಲಿ ಯಶ್ 2 ನಿಮಿಷ 30.05 ಸೆಕೆಂಡ್‌ನಲ್ಲಿ ಗುರಿ ತಲುಪಿದರು. ಈ ಮೂಲಕ ಎಂ.ಎಸ್. ನಿತೀಶ್ (2 ನಿ.33.37ಸೆ) ಅವರ ದಾಖಲೆ ಮುರಿದರು.

ಬಾಲಕಿಯರ 100 ಮೀಟರ್ ಬ್ಯಾಕ್‌ಸ್ಟ್ರೋಕ್ (ಗುಂಪು 1) ಸ್ಪರ್ಧೆಯಲ್ಲಿ ಸಿದ್ಧಿ 1 ನಿಮಿಷ 08.98 ಸೆಕೆಂಡ್‌ನಲ್ಲಿ ಗುರಿ ಮುಟ್ಟಿ, ಆರುಷಿ ಅಗರವಾಲ್ (1 ನಿ.09.26ಸೆ) ಹೆಸರಿನಲ್ಲಿದ್ದ ದಾಖಲೆಯನ್ನು ತನ್ನದಾಗಿಸಿಕೊಂಡರು.

ತಮಿಳುನಾಡಿನ ರೋನೆಲ್ ರೆಟ್ನಮ್ ಇ.ಜೆ ಅವರು ಬಾಲಕರ 50 ಮೀಟರ್ ಬಟರ್‌ಫ್ಲೈ (ಗುಂಪು 2) ಸ್ಪರ್ಧೆಯಲ್ಲಿ 27.35 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಹೊಸ ದಾಖಲೆ ನಿರ್ಮಿಸಿದರು.

ಕರ್ನಾಟಕದ ಯಶ್ ಎಚ್. ಪಾಲ್

ಫಲಿತಾಂಶ: (ಕರ್ನಾಟಕದ ಪದಕ ವಿಜೇತರು ಮಾತ್ರ): ಬಾಲಕರು: ಗುಂಪು 1: 1500 ಮೀ. ಫ್ರೀಸ್ಟೈಲ್: ನಮನ್ ಎಂ.ಎನ್–3; 200 ಮೀ. ಬ್ರೆಸ್ಟ್ ಸ್ಟ್ರೋಕ್: ಸಾಯೇಶ್ ಕಿಣಿ– 1, ಆಯುಷ್ ಶಿವರಾಜು ಮಾಗನಹಳ್ಳಿ–2; 50 ಮೀ. ಬಟರ್ ಫ್ಲೈ: ಅನೀಶ್ ಅನಿರುದ್ಧ ಕೋರೆ–1; ಸ್ವರೂಪ್ ಧನುಚೆ– 3; 200 ಮೀ. ಫ್ರೀಸ್ಟೈಲ್: ಸಂಪತ್ ಕುಮಾರ್ ಯಾದವ್– 1; ರೇಣುಕಾಚಾರ್ಯ ಹೊದ್ಮನಿ–3; 100 ಮೀ. ಬ್ಯಾಕ್ ಸ್ಟ್ರೋಕ್: ಸ್ವರೂಪ್ ಧನುಚೆ– 3; 50 ಮೀ. ಬ್ರೆಸ್ಟ್ ಸ್ಟ್ರೋಕ್: ಆಯುಷ್ ಶಿವರಾಜು–2; 4x200 ಮೀ. ಫ್ರೀಸ್ಟೈಲ್ ರಿಲೆ: ಕರ್ನಾಟಕ–1.

ಬಾಲಕಿಯರು: ಗುಂಪು 1: 1500 ಮೀ. ಫ್ರೀಸ್ಟೈಲ್: ಜನ್ಯಾ ಬಿ.ಎಸ್– 1; ನಮ್ರತಾ ವೆಂಕಟೇಶ್– 2; 200 ಮೀ. ಬ್ರೆಸ್ಟ್ ಸ್ಟ್ರೋಕ್: ಸಮನ್ವಿ ಇ.ಎಸ್–2, ರಿಷಿಕಾ ಎಂ.ವಿ–3; 50 ಮೀ. ಬಟರ್ ಫ್ಲೈ: ರಿಷಿಕಾ ಯು.ಎಂ–1; ಇಂಚರಾ ಫಣೀಂದ್ರನಾಥ್–2. 200 ಮೀ. ಫ್ರೀಸ್ಟೈಲ್: ರಿಷಿಕಾ ಎಂ.ವಿ–1; ಜಗಶ್ರೀ ಪೂಜಾ–2; 100 ಮೀ. ಬ್ಯಾಕ್‌ಸ್ಟ್ರೋಕ್: ಸಿದ್ಧಿ ಜಿ. ಶಾ– 1, ತನ್ಮಯಿ ಧರ್ಮೇಶ್–2; 50 ಮೀ. ಬ್ರೆಸ್ಟ್ ಸ್ಟ್ರೋಕ್: ಪ್ರತೀಕ್ಷಾ ಎನ್. ಶೆಣೈ– 1; ಸಮನ್ವಿ ಇ.ಎಸ್– 2; 4x200 ಮೀ. ಫ್ರೀಸ್ಟೈಲ್ ರಿಲೆ: ಕರ್ನಾಟಕ– 1.

ನಾಲ್ಕನೇ ಕ್ರಿಕೆಟ್ ಟೆಸ್ಟ್: ಕೊಹ್ಲಿ–ಯಶಸ್ವಿ ಜೊತೆಯಾಟದ ಬಳಿಕ ಕುಸಿತ • ಭಾರತ 5ಕ್ಕೆ 164

ಹಿಡಿತ ಬಿಗಿಪಡಿಸಿದ ಆಸ್ಟ್ರೇಲಿಯಾ

• ಮಧು ಜವಳಿ

ಮೆಲ್ಬರ್ನ್: ಅಂತಿಮ ಅವಧಿಯ ಆಟದಲ್ಲಿ ಅನಗತ್ಯವಾಗಿ ಆದ ರನ್‌ಔಟ್ ಭಾರತ ತಂಡದ ಸ್ಫೂರ್ತಿಯುತ ಪ್ರತಿರೋಧವನ್ನು ಮಸುಕುಗೊಳಿಸಿತು. ಆತಿಥೇಯ ಆಸ್ಟ್ರೇಲಿಯಾ ತಂಡಕ್ಕೆ ಬಾಕ್ಸಿಂಗ್ ಡೇ (ನಾಲ್ಕನೇ) ಕ್ರಿಕೆಟ್ ಟೆಸ್ಟ್ ಪಂದ್ಯದ ಎರಡನೇ ದಿನವಾದ ಶುಕ್ರವಾರದ ಆಟದಲ್ಲಿ ಮೇಲುಗೈ ಒದಗಿಸಿತು.

ಸ್ಟೀವ್ ಸ್ಮಿತ್ ಅವರ ಅಧಿಕಾರಯುತ (140, 197ಎ, 4x13, 6x3) ಶತಕದ ಮೂಲಕ ಆಸ್ಟ್ರೇಲಿಯಾದ ಮೊದಲ ಇನಿಂಗ್ಸ್ 474 ರನ್‌ಗಳಿಗೆ ಬೆಳೆಯಿತು. ಭಾರತದ ಆರಂಭ ಉತ್ತಮವಾಗಿರಲಿಲ್ಲ. ಆಸ್ಟ್ರೇಲಿಯಾದ ಮೊದಲ ಗುರಿ ಎನಿಸಿರುವ ವಿರಾಟ್ ಕೊಹ್ಲಿ (35, 86ಎ, 4x4) ಮತ್ತು ಲಯಕ್ಕೆ ಪರದಾಡುತ್ತಿದ್ದ ಯಶಸ್ವಿ ಜೈಸ್ವಾಲ್ (82, 118ಎ, 4x12, 6x1) ಅವರ ಜೊತೆಯಾಟ ಆತಿಥೇಯ ದೇಶದ ಬೆಂಬಲಿಗರ ಹರ್ಷೋದ್ಗಾರಗಳನ್ನು ಮೌನವಾಗಿಸಿತು.

ಸ್ಥಿರ ಪ್ರದರ್ಶನ ನೀಡುತ್ತಿರುವ ಕೆ.ಎಲ್.ರಾಹುಲ್ ಬದಲು ಆರಂಭ ಆಟಗಾರನ ಸ್ಥಾನಕ್ಕೆ ಮರಳಿದ ನಾಯಕ ರೋಹಿತ್ ಶರ್ಮಾ ಅವರ ನಿರ್ಧಾರ ತಿರುಗುಬಾಣವಾಯಿತು. ಎದುರಾಳಿ ನಾಯಕ ಪ್ಯಾಟ್ ಕಮಿನ್ಸ್ ಬೌಲಿಂಗ್‌ನಲ್ಲಿ ಅವರ ದುರ್ಬಲ ಪುಲ್ ಹೊಡೆತ ಸುಲಭ ಕ್ಯಾಚಿನಲ್ಲಿ ಅಂತ್ಯಕಂಡಿತು. ಅವರು ಗಳಿಸಿದ್ದು 5 ಎಸೆತಗಳಲ್ಲಿ 3 ರನ್‌ಗಳನ್ನಷ್ಟೇ.

ಮೂರನೇ ಕ್ರಮಾಂಕದಲ್ಲಿ ಆಡಲಿಳಿದ ರಾಹುಲ್ ಎಂದಿನ ಲಯದಲ್ಲೇ ಇದ್ದು 24 ರನ್ ಗಳಿಸಿದರು. ಆದರೆ ಚಹಾ ವಿರಾಮಕ್ಕೆ ಸ್ವಲ್ಪ ಮೊದಲು, ಕಮಿನ್ಸ್ ಅವರ ಬೌಲಿಂಗ್‌ನಲ್ಲಿ ಮಿಡ್ಲ್ ಮತ್ತು ಆಫ್ ಸ್ಟಂಪ್ ನೇರದಲ್ಲಿ ಪಿಚ್ ಆಗಿ ಬಂದ ಚೆಂಡನ್ನು ಆಡುವಲ್ಲಿ ಎಡವಿದರು. ಆ ಅಮೋಘ ಎಸೆತ ಬೇಲ್ಸ್ ಉರುಳಿಸಿತು. ಆಗ ಮೊತ್ತ 51ಕ್ಕೆ2. ಮತ್ತೊಮ್ಮೆ ಕುಸಿತದ ಸೂಚನೆಗಳು ಕಂಡವು.

ಆದರೆ ಕೊಹ್ಲಿ ಮತ್ತು ಜೈಸ್ವಾಲ್ ವಿಭಿನ್ನ ರೀತಿಯಲ್ಲಿ ಇನಿಂಗ್ಸ್ ಕಟ್ಟಲು ಶುರುಮಾಡಿದರು. ಜೈಸ್ವಾಲ್ ಅವರು ವೈವಿಧ್ಯಮಯ ಹೊಡೆತಗಳನ್ನು ಆಡಿದರೆ, ಕೊಹ್ಲಿ ಎಂದಿನಂತೆ ಛಲ, ಸಂಯಮದ ಆಟವಾಡಿದರು. ಗ್ಯಾಲರಿಯಲ್ಲಿ ಭಾರತದ ಧ್ವಜಗಳು ಹಾರಾಡತೊಡಗಿದವು. ಹಿರಿಯ ಹೋರಾಟಗಾರನಲ್ಲಿ ಉಳಿದಿರುವ ಕೆಚ್ಚು ಕಾಣಬಹುದಿತ್ತು. ವಿಶೇಷವಾಗಿ ಆಫ್‌ಸೈಡ್ ಕಡೆ ಆಡುವಾಗ ಕೊಹ್ಲಿ ಕಟ್ಟೆಚ್ಚರ ವಹಿಸಿದರು. ಆ ಭಾಗದಲ್ಲಿ ಆಡಿದ 60 ಎಸೆತಗಳಲ್ಲಿ ಬರೇ ಮೂರಷ್ಟೇ ರನ್ ತಂದ ಹೊಡೆತಗಳಾಗಿದ್ದವು.

ಇವರಿಬ್ಬರ 102 ರನ್ ಜೊತೆಯಾಟದಿಂದ ಭಾರತದ ಪಾಳಯದಲ್ಲಿ ಚೇತರಿಕೆಯ ಆಶಾವಾದ ಮೂಡಿತು. ಆ ವೇಳೆಗೇ ಆಘಾತ ಎದುರಾಯಿತು. ಜೈಸ್ವಾಲ್ ಬೇಡವಾಗಿದ್ದ ರನ್‌ಗೆ ಓಡಲು ಹೋಗಿದ್ದರಿಂದ ಗೊಂದಲ ಎದುರಾಯಿತು. ಇಬ್ಬರು ಒಂದೇ ಕಡೆ ಸಿಕ್ಕಿಕೊಂಡು ಜೈಸ್ವಾಲ್ ರನೌಟ್ ಆಗಿ ನಿರಾಸೆಯಿಂದ ನಿರ್ಗಮಿಸಿದರು. ಬೌಲರ್ ಎಂಡ್‌ನಲ್ಲಿದ್ದ ಕೊಹ್ಲಿ ಚೆಂಡಿನ ಕಡೆ ಗಮನ ನೀಡಿದ್ದು ಓಡಲು ಯೋಚಿಸುವಷ್ಟರಲ್ಲಿ ಎಲ್ಲವೂ ನಡೆದುಹೋಯಿತು.

ಇದು ಕೊಹ್ಲಿ ಅವರ ಏಕಾಗ್ರತೆ ಮೇಲೂ ಪರಿಣಾಮ ಬೀರಿತು. ಅವರು ಬೋಲ್ಯಾಂಡ್ ಬೌಲಿಂಗ್‌ನಲ್ಲಿ ಆಫ್‌ಸ್ಟಂಪ್ ಆಚೆಯಿದ್ದ ಎಸೆತವನ್ನು ಆಡುವ ಯತ್ನ ನಡೆಸಿದಾಗ ಅದು ವಿಕೆಟ್ ಕೀಪರ್ ಅಲೆಕ್ಸ್ ಕ್ಯಾರಿ ಅವರಿಗೆ ಸುಲಭದ ಕ್ಯಾಚ್ ಆಯಿತು. ನೈಟ್ ವಾಚಮನ್ ಆಗಿ ಆಡಲಿಳಿದ ಆಕಾಶ್ ದೀಪ್ ಹೆಚ್ಚು ಹೊತ್ತು ನಿಲ್ಲಲಿಲ್ಲ. ಒಂದು ಹಂತದಲ್ಲಿ 2 ವಿಕೆಟ್‌ಗೆ 153 ರ್ ಗಳಿಸಿದ್ದ ಭಾರತ ಅಂತಿಮವಾಗಿ 5 ವಿಕೆಟ್‌ಗೆ 164 ರನ್‌ಗಳೊಡನೆ ದಿನದಾಟ ಮುಗಿಸಿತು.

ರಿಷಭ್ ಪಂತ್ ಮತ್ತು ರವೀಂದ್ರ ಜಡೇಜ ಶನಿವಾರ ಆಟ ಮುಂದುವರಿಸಲಿದ್ದಾರೆ. ಆದರೆ 310 ರನ್‌ಗಳಿಂದ ಹಿಂದಿರುವ ಭಾರತ ಮುನ್ನಡೆ ಸಾಧಿಸಬೇಕಾದರೆ ಭಗೀರಥ ಪ್ರಯತ್ನವೇ ನಡೆಯಬೇಕಾಗಿದೆ.

ಇದಕ್ಕೆ ಮೊದಲು ಬೆಳಗಿನ ಅವಧಿಯೂ ಭಾರತಕ್ಕೆ ಫಲಪ್ರದವಾಗಿರಲಿಲ್ಲ. ಆಸ್ಟ್ರೇಲಿಯಾದ ಆಟ (ಗುರುವಾರ: 6 ವಿಕೆಟ್‌ಗೆ 311) ಮುಂದುವರಿಸಿದ ಸ್ಮಿತ್ ಮತ್ತು ಕಮಿನ್ಸ್ (49, 63ಎ, 4x7) ಜೊತೆಯಾಟ 112 ರನ್‌ಗಳಿಗೆ ಬೆಳೆಯಿತು. ಇಬ್ಬರೂ ಭಾರತದ ಬೌಲರ್‌ಗಳನ್ನು ಹತಾಶರನ್ನಾಗಿಸಿದರು.

ಸ್ಮಿತ್ ಟೆಸ್ಟ್‌ಗಳಲ್ಲಿ 34ನೇ ಶತಕ ಬಾರಿಸಿದರು. ಭಾರತದ ವಿರುದ್ಧ 11ನೇ ಶತಕ ಇದಾಗಿತ್ತು. ಭಾರತದ ವಿರುದ್ಧ ದಾಖಲಾದ ಆಟಗಾರನೊಬ್ಬನ ಗರಿಷ್ಠ ಶತಕ ಇದು. ಸ್ಮಿತ್– ಕಮಿನ್ಸ್ ಜೊತೆಯಾಟ ಮುರಿಯಲು ರೋಹಿತ್ ಶರ್ಮಾ ಸಾಧ್ಯವಿರುವ ಎಲ್ಲ ಪ್ರಯತ್ನ ನಡೆಸಿದರು. ಆದರೆ ಅವರ ಯತ್ನ ಬೇಗ ಕೈಗೂಡಲಿಲ್ಲ. ಸ್ಮಿತ್–ಕಮಿನ್ಸ್ ಇಬ್ಬರಿಂದಲೂ ಹುಕ್ ಮತ್ತು ಪುಲ್ ಹೊಡೆತಗಳು ಪ್ರಯೋಗವಾದವು. ಮೊಹಮ್ಮದ್ ಸಿರಾಜ್ ಇಲ್ಲೂ ಲಯಕಂಡುಕೊಳ್ಳಲಿಲ್ಲ.

ತೋಳಿಗೆ ಕಪ್ಪು ಪಟ್ಟಿ ಧರಿಸಿ ಆಡುವ ಮೂಲಕ ಭಾರತ ತಂಡದ ಆಟಗಾರರು ಗುರುವಾರ ನಿಧನರಾದ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರಿಗೆ ಗೌರವ ಸಲ್ಲಿಸಿದರು.

ಭಾರತದ ಯಶಸ್ವಿ ಜೈಸ್ವಾಲ್ –ಎಎಫ್‌ಪಿ ಚಿತ್ರ

ಶತಕ ಗಳಿಸಿದ ಸಂಭ್ರಮದಲ್ಲಿ ಸ್ಟೀವ್ ಸ್ಮಿತ್ –ಎಪಿ / ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಆಸ್ಟ್ರೇಲಿಯಾ: 474 (122.4 ಓವರ್‌ಗಳಲ್ಲಿ) (ಗುರುವಾರ 86 ಓವರ್‌ಗಳಲ್ಲಿ 6 ಕ್ಕೆ 311)
ಸ್ಮಿತ್ ಬಿ ಆಕಾಶ್‌ದೀಪ್ 140 (197ಎ, 4x13, 6x3)
ಕಮಿನ್ಸ್ ಸಿ ನಿತೀಶ್ ಕುಮಾರ್ ಬಿ ಜಡೇಜ 49 (63ಎ, 4x7)
ಸ್ಟಾರ್ಕ್ ಬಿ ಜಡೇಜ 15 (36ಎ, 6x1)
ಲಯನ್ ಎಲ್‌ಬಿಡಬ್ಲ್ಯು ಬಿ ಬೂಮ್ರಾ 13 (18ಎ, 4x1)
ಸ್ಕಾಟ್ ಬೊಲ್ಯಾಂಡ್ ಔಟಾಗದೇ 6 (36ಎ)
ಇತರೆ: 27 (ಲೆಗ್‌ಬೈ 11, ನೋಬಾಲ್ 6, ವೈಡ್ 10)
ವಿಕೆಟ್ ಪತನ: 6-299 (ಅಲೆಕ್ಸ್ ಕ್ಯಾರಿ, 82.1), 7-411 (ಪ್ಯಾಟ್ ಕಮಿನ್ಸ್, 104.1), 8-455 (ಮಿಚೆಲ್ ಸ್ಟಾರ್ಕ್, 113.3), 9-455 (ಸ್ಟೀವನ್ ಸ್ಮಿತ್, 114.1), 10-474 (ನೇಥನ್ ಲಯನ್ 122.4)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 28.4–9–99–4, ಮೊಹಮ್ಮದ್ ಸಿರಾಜ್ 23–3–122–0, ಆಕಾಶ್ ದೀಪ್ 26–8–94–2, ರವೀಂದ್ರ ಜಡೇಜ 23–4–78–3, ನಿತೀಶ್ ಕುಮಾರ್ ರೆಡ್ಡಿ 7–0–21–0, ವಾಷಿಂಗ್ಟನ್ ಸುಂದರ್ 15–2–49–1

ಭಾರತ: 5ಕ್ಕೆ 164 (46 ಓವರ್‌ಗಳಲ್ಲಿ)
ಜೈಸ್ವಾಲ್ ರನ್‌ಔಟ್ (ಕಮಿನ್ಸ್/ಕ್ಯಾರಿ) 82 (118ಎ, 4x11, 6x1)
ರೋಹಿತ್ ಸಿ ಬೋಲ್ಯಾಂಡ್ ಬಿ ಕಮಿನ್ಸ್ 3 (5ಎ)
ರಾಹುಲ್ ಬಿ ಕಮಿನ್ಸ್ 24 (42ಎ, 4x3)
ವಿರಾಟ್ ಸಿ ಲಯನ್ ಬಿ ಬೋಲ್ಯಾಂಡ್ 36 (86ಎ, 4x4)
ಆಕಾಶ್ ಸಿ ಲಯನ್ ಬಿ ಬೋಲ್ಯಾಂಡ್ 0 (13ಎ)
ರಿಷಭ್ ಪಂತ್ ಔಟಾಗದೇ 6 (7ಎ)
ರವೀಂದ್ರ ಜಡೇಜ ಔಟಾಗದೇ 4 (7ಎ, 4x1)
ಇತರೆ: 9 (ಲೆಗ್‌ಬೈ 2, ನೋಬಾಲ್ 2, ವೈಡ್ 5)
ವಿಕೆಟ್ ಪತನ: 1-8 (ರೋಹಿತ್ ಶರ್ಮಾ, 1.6), 2-51 (ಕೆ.ಎಲ್. ರಾಹುಲ್, 14.6), 3-153 (ಯಶಸ್ವಿ ಜೈಸ್ವಾಲ್, 40.6), 4-154 (ವಿರಾಟ್ ಕೊಹ್ಲಿ, 42.1), 5-159 (ಆಕಾಶ್ ದೀಪ್, 44.3)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 13–0–48–0, ಪ್ಯಾಟ್ ಕಮಿನ್ಸ್ 13–2–57–2, ಸ್ಕಾಟ್ ಬೋಲ್ಯಾಂಡ್ 12–4–24–2, ನೇಥನ್ ಲಯನ್ 5–1–18–0, ಮಿಚೆಲ್ ಮಾರ್ಷ್ 3–0–15–0

ಭಾರತ ವಿರುದ್ಧ ಗರಿಷ್ಠ ಶತಕ ಗಳಿಸಿದವರು (ಟೆಸ್ಟ್)

ಆಟಗಾರ	ತಂಡ	ಪಂದ್ಯ	ಶತಕ
ಸ್ಟೀವ್ ಸ್ಮಿತ್	ಆಸ್ಟ್ರೇಲಿಯಾ	23*	11
ಜೋ ರೂಟ್	ಇಂಗ್ಲೆಂಡ್	30	10
ಗ್ಯಾರಿ ಸೋಬರ್ಸ್	ವೆಸ್ಟ್ ಇಂಡೀಸ್	18	8
ವಿವ್ ರಿಚರ್ಡ್ಸ್	ವೆಸ್ಟ್ ಇಂಡೀಸ್	28	8
ರಿಕಿ ಪಾಂಟಿಂಗ್	ಆಸ್ಟ್ರೇಲಿಯಾ	29	8

ಸೆಮಿಗೆ ಸೇನ್

ಶೆಂಜೆನ್, ಚೀನಾ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್ ಅವರು ಶುಕ್ರವಾರ ಇಲ್ಲಿ ಆರಂಭಗೊಂಡ ಕಿಂಗ್ ಕಪ್ ಇಂಟರ್‌ನ್ಯಾಷನಲ್ ಬ್ಯಾಡ್ಮಿಂಟನ್ ಓಪನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದಾರೆ. ವಿಶ್ವದ 12ನೇ ಕ್ರಮಾಂಕದ ಸೇನ್ 10-21, 21-13, 21-13ರಿಂದ ಹಾಂಗ್‌ಕಾಂಗ್‌ನ ಅಂಗಸ್ ಕಾ ಲಾಂಗ್ ಅವರನ್ನು ಮಣಿಸಿದರು.

ಮಾಜಿ ಪ್ರಧಾನಿಗೆ ಗೌರವ ನಮನಗಳು!

ಅಂತಿಮ ಏಕದಿನ: ವಿಂಡೀಸ್ ವಿರುದ್ಧ 3–0 ಸರಣಿ

ದೀಪ್ತಿ ಮಿಂಚು: ಭಾರತಕ್ಕೆ ಜಯ

ವಡೋದರಾ (ಪಿಟಿಐ): ಅನುಭವಿ ಆಫ್ ಸ್ಪಿನ್ನರ್ ದೀಪ್ತಿ ಶರ್ಮಾ ಅವರು ಜೀವನಶ್ರೇಷ್ಠ ಸಾಧನೆಯಲ್ಲಿ 31 ರನ್ನಿಗೆ 6 ವಿಕೆಟ್ ಪಡೆದರು. ನಂತರ ಬ್ಯಾಟಿನಿಂದಲೂ ಉಪಯುಕ್ತ ಕೊಡುಗೆ ನೀಡಿದರು. ಮಹಿಳಾ ಮೂರನೇ ಹಾಗೂ ಅಂತಿಮ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಶುಕ್ರವಾರ ಭಾರತ ತಂಡ ಐದು ವಿಕೆಟ್‌ಗಳಿಂದ ವೆಸ್ಟ್ ಇಂಡೀಸ್ ತಂಡವನ್ನು ಸೋಲಿಸಿತು.

ಸರಣಿ 3–0ಯಿಂದ ಆತಿಥೇಯರ ಪಾಲಾಯಿತು. ಟಾಸ್ ಗೆದ್ದುಕೊಂಡ ವೆಸ್ಟ್ ಇಂಡೀಸ್ ತಂಡ ಮೊದಲು ಆಡಿ 162 ರನ್‌ಗಳಿಗೆ ಆಲೌಟ್ ಆಯಿತು. ದೀಪ್ತಿ ಅವರ ಅಮೋಘ ಸಾಧನೆಗೆ ವೇಗದ ಬೌಲರ್ ರೇಣುಕಾ ಸಿಂಗ್ (29ಕ್ಕೆ4) ಬೆಂಬಲ ನೀಡಿ 10 ವಿಕೆಟ್‌ಗಳನ್ನು ತಮ್ಮೊಳಗೆ ಹಂಚಿಕೊಂಡರು. ಭಾರತ ಈ ಗುರಿಯನ್ನು 28.2 ಓವರುಗಳಲ್ಲಿ 5 ವಿಕೆಟ್ ನಷ್ಟದಲ್ಲಿ ತಲುಪಿತು.

ಒಂದು ಹಂತದಲ್ಲಿ ಭಾರತ 4 ವಿಕೆಟ್‌ಗೆ 73 ರನ್ ಗಳಿಸಿ ಕುಸಿತದ ಭೀತಿಯಲ್ಲಿತ್ತು. ಆದರೆ ದೀಪ್ತಿ 48 ಎಸೆತಗಳಲ್ಲಿ ಅಜೇಯ 39 ರನ್ ಬಾರಿಸಿ ಬ್ಯಾಟಿಂಗ್‌ನಲ್ಲೂ ಮಿಂಚಿದರು. ಜೆಮಿಮಾ ರಾಡ್ರಿಗಸ್ (29) ಜೊತೆ ಐದನೇ ವಿಕೆಟ್‌ಗೆ 56 ರನ್ ಸೇರಿಸಿ ತಂಡವನ್ನು ಸುರಕ್ಷಿತವಾಗಿ ಗುರಿಯತ್ತ ಮುನ್ನಡೆಸಿದರು. ವಿಕೆಟ್ ಕೀಪರ್–ಬ್ಯಾಟರ್ ರಿಚಾ ಘೋಷ್ (ಅಜೇಯ 23, 11ಎ, 4x1, 6x3) ಅವರು ತಂಡ ಬೇಗ ಗುರಿತಲುಪಲು ನೆರವಾದರು.

ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ (4) ಮತ್ತು ಹಿಂದಿನ ಪಂದ್ಯದಲ್ಲಿ ಶತಕ ಬಾರಿಸಿದ್ದ ಹರ್ಲೀನ್ ದಿಯೋಲ್ (1) ಬೇಗನೇ ನಿರ್ಗಮಿಸಿದ್ದರು. ನಾಯಕಿ ಹರ್ಮನ್‌ಪ್ರೀತ್ ಕೌರ್ (32) ಅವರೂ ಉಪಯುಕ್ತ ಕೊಡುಗೆ ನೀಡಿದರು.

ಇದಕ್ಕೆ ಮೊದಲು ವೇಗಿ ರೇಣುಕಾ ಸಿಂಗ್, ವೆಸ್ಟ್ ಇಂಡೀಸ್ ತಂಡಕ್ಕೆ ಆರಂಭದಲ್ಲೇ ಹೊಡೆತ ನೀಡಿದರು. ಕಿಯಾನ ಜೋಸೆಫ್ ಮತ್ತು ಹೆಯಲಿ ಮ್ಯಾಥ್ಯೂಸ್ ಖಾತೆ ತೆರೆಯುವ ಮೊದಲೇ ನಿರ್ಗಮಿಸಿದರು. ದಿಯಾಂಡ್ರ ದಾಟಿನ್ ಕೂಡ ರೇಣುಕಾ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಶೆಮೆನ್ ಕ್ಯಾಂಪ್‌ಬೆಲ್ (46) ಮತ್ತು ಚಿನೆಲಿ ಹೆನ್ರಿ (61) ಅವರು ನಾಲ್ಕನೇ ವಿಕೆಟ್‌ಗೆ 91 ರನ್ ಸೇರಿಸಿ ತಂಡ ಅಲ್ಪಮೊತ್ತಕ್ಕೆ ಕುಸಿಯುವುದನ್ನು ತಪ್ಪಿಸಿದರು. ಮೂವರು ಮಾತ್ರ ಎರಡಂಕಿ ಮೊತ್ತ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 38.5 ಓವರುಗಳಲ್ಲಿ 162 (ಶೆಮೇನ್ ಕ್ಯಾಂಪ್‌ಬೆಲ್ 46, ಚಿನೆಲಿ ಹೆನ್ರಿ 61, ಆಲಿಯಾ ಅಲೇನ್ 21; ರೇಣುಕಾ ಸಿಂಗ್ 29ಕ್ಕೆ4, ದೀಪ್ತಿ ಶರ್ಮಾ 31ಕ್ಕೆ6); ಭಾರತ: 28.2 ಓವರುಗಳಲ್ಲಿ 5 ವಿಕೆಟ್‌ಗೆ 167 (ಹರ್ಮನ್‌ಪ್ರೀತ್ ಕೌರ್ 32, ಜೆಮಿಮಾ ರಾಡ್ರಿಗಸ್ 29, ದೀಪ್ತಿ ಶರ್ಮಾ 39, ರಿಚಾ ಘೋಷ್ ಔಟಾಗದೇ 23); **ಪಂದ್ಯದ ಆಟಗಾರ್ತಿ:** ದೀಪ್ತಿ ಶರ್ಮಾ; **ಸರಣಿಯ ಆಟಗಾರ್ತಿ:** ರೇಣುಕಾ ಸಿಂಗ್ (10 ವಿಕೆಟ್).



ದೀಪ್ತಿ ಶರ್ಮಾ

ಸಚಿನ್‌ಗೆ ಎಂಸಿಸಿ ಗೌರವ ಸದಸ್ಯತ್ವ

ಮೆಲ್ಬರ್ನ್ (ಪಿಟಿಐ): ಭಾರತದ ಕ್ರಿಕೆಟ್ ತಾರೆ ಸಚಿನ್ ತೆಂಡೂಲ್ಕರ್ ಅವರು ಪ್ರತಿಷ್ಠಿತ ಮೆಲ್ಬರ್ನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಗೌರವ ಸದಸ್ಯತ್ವಕ್ಕೆ ನೀಡಿದ ಆಹ್ವಾನವನ್ನು ಒಪ್ಪಿಕೊಂಡಿದ್ದಾರೆ ಎಂದು ಕ್ಲಬ್ ಶುಕ್ರವಾರ ಪ್ರಕಟಿಸಿದೆ.

1838ರಲ್ಲಿ ಸ್ಥಾಪನೆಯಾದ ಎಂಸಿಸಿ, ಆಸ್ಟ್ರೇಲಿಯಾದ ಅತಿ ಹಳೆಯ ಕ್ಲಬ್‌ಗಳಲ್ಲಿ ಒಂದಾಗಿದೆ. ಮೆಲ್ಬರ್ನ್ ಕ್ರಿಕೆಟ್ ಮೈದಾನದ ಅಭಿವೃದ್ಧಿ ಮತ್ತು ಆಡಳಿತದ ವಿಷಯದಲ್ಲಿ ಇದು ನಿರ್ಧಾರ ಕೈಗೊಳ್ಳುತ್ತದೆ.

ಸೂಪರ್ ಸಿರೀಸ್ ಟೆನಿಸ್: ಖುನ್ಮಾನ್, ಪೂಜಾಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಖುನ್ಮಾನ್ ಮಹೇಶ್ ಮತ್ತು ಪೂಜಾ ನಾಗರಾಜ್ ಅವರು ನಗರದ ಬೌರಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ಶುಕ್ರವಾರ ಮುಕ್ತಾಯಗೊಂಡ ಎಐಟಿಎ ಸೂಪರ್ ಸಿರೀಸ್ 14 ವರ್ಷದೊಳಗಿನ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಖುನ್ಮಾನ್ ಹಿನ್ನಡೆಯಿಂದ ಚೇತರಿಸಿ 5–7, 7–5, 6–3 ರಿಂದ ತಮಿಳುನಾಡಿನ ಹೇಮದೇವ್ ಮಹೇಶ್ ಅವರನ್ನು ಸೋಲಿಸಿದರು. ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಪೂಜಾ 6–1, 6–2 ರಿಂದ ಎಂಟನೇ ಶ್ರೇಯಾಂಕದ ದೇಶ್ನಾ ಭಟ್ಟಾಚಾರ್ಯ ಅವರನ್ನು ಸುಲಭವಾಗಿ ಮಣಿಸಿದರು.

ಬಾಲಕರ ಡಬಲ್ಸ್ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಮಹದೇವ್–ಅರ್ಜುನ್ ಮಣಿಕಂಠನ್ ಜೋಡಿ 6–3, 6–1 ರಿಂದ ಖುನ್ಮಾನ್ ಮಹೇಶ್– ವಿಯಾನ್ ನಾರಾಯಣ್ ಅವರನ್ನು ಸೋಲಿಸಿತು. ಬಾಲಕಿಯರ ವಿಭಾಗದ ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಸತನುಶ್ರಿ ಸತೀಶ್– ಮಿತ್ರವಿಂದ ಸತೀಶ್ ಜೋಡಿ 6–3, 5-7, 10–8 ರಿಂದ ಉನ್ನತಿ ವೇದಾ ಮುರಳೀಧರ– ಇಶಿತಾ ಶ್ರಿಯಾಲಾ (ಆಂಧ್ರಪ್ರದೇಶ) ಜೋಡಿಯನ್ನು ಮಣಿಸಿತು.

ಎಚ್‌ಐಎಲ್ ಟೂರ್ನಿ ಇಂದಿನಿಂದ

ರುರ್ಕೆಲಾ (ಪಿಟಿಐ): ಬಹುನಿರೀಕ್ಷಿತ ಹಾಕಿ ಇಂಡಿಯಾ ಲೀಗ್ (ಎಚ್‌ಐಎಲ್) ಟೂರ್ನಿ ಶನಿವಾರ ಇಲ್ಲಿ ಪುನರಾರಂಭಗೊಳ್ಳಲಿದೆ. ಮೊದಲ ಪಂದ್ಯದಲ್ಲಿ ಡೆಲ್ಲಿ ಎಸ್.ಜಿ ಪೈಪರ್ಸ್ ಮತ್ತು ಟೀಮ್ ಗೊನಾಶಿಕಾ ತಂಡಗಳು ಸೆಣಸಲಿವೆ.

ಏಳು ವರ್ಷಗಳ ನಂತರ ಪುರುಷರ ಎಂಟು ತಂಡಗಳೊಂದಿಗೆ ಹೊಸ ಉತ್ಸಾಹದಲ್ಲಿ ಎಚ್‌ಐಎಲ್ ಟೂರ್ನಿ ಆರಂಭವಾಗಿದೆ. 2017ರಲ್ಲಿ ಐದನೇ ಆವೃತ್ತಿ ನಡೆದಿದ್ದು, ನಂತರ ಟೂರ್ನಿ ನಡೆದಿರಲಿಲ್ಲ. ಮೊದಲ ಹಂತದ ಪಂದ್ಯಗಳು ಡಿಸೆಂಬರ್ 28ರಿಂದ ಜನವರಿ 18 ರವರೆಗೆ ನಡೆಯಲಿವೆ. ಜ.19ರಿಂದ ಎರಡನೇ ಹಂತದ ಸ್ಪರ್ಧೆಗಳು ನಡೆಯಲಿವೆ. ಜ.31ರಂದು ಸೆಮಿಫೈನಲ್ ಮತ್ತು ಫೆಬ್ರುವರಿ 1 ರಂದು ಬಿರ್ಸಾ ಮುಂಡಾ ಕ್ರೀಡಾಂಗಣದಲ್ಲಿ ಫೈನಲ್ ಪಂದ್ಯ ನಡೆಯಲಿದೆ.

ಸ್ಪರ್ಧೆಯಲ್ಲಿರುವ 8 ತಂಡಗಳು: ದೆಹಲಿ ಎಸ್.ಜಿ ಪೈಪರ್ಸ್, ಶ್ರಾಚಿ ಬೆಂಗಾಲ್ ಟೈಗರ್ಸ್, ಸೂರ್ಮಾ ಹಾಕಿ ಕ್ಲಬ್, ಕಳಿಂಗ ಲ್ಯಾನ್ಸರ್ಸ್, ಟೀಮ್ ಗೊನಾಶಿಕಾ, ಹೈದರಾಬಾದ್ ತೂಫಾನ್ಸ್, ತಮಿಳುನಾಡು ಡ್ರಾಗನ್ಸ್, ಯು.ಪಿ ರುದ್ರಾಸ್.

ಪಂದ್ಯ ಆರಂಭ: ರಾತ್ರಿ 8.15
ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ಮಯಂಕ್ ಪಡೆಗೆ ಅರುಣಾಚಲ ಸವಾಲು ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹ್ಯಾಟ್ರಿಕ್ ಗೆಲುವಿನ ಹುಮ್ಮಸ್ಸಿನಲ್ಲಿರುವ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಶನಿವಾರ ಅರುಣಾಚಲ ಪ್ರದೇಶ ತಂಡದ ಸವಾಲನ್ನು ಎದುರಿಸಲಿದೆ.

‘ಸಿ’ ಗುಂಪಿನಲ್ಲಿ ಅಜೇಯವಾಗಿರುವ ಮಯಂಕ್ ಅಗರವಾಲ್ ಪಡೆಯ ಆತ್ಮವಿಶ್ವಾಸದ ಮಟ್ಟ ಉತ್ತುಂಗದಲ್ಲಿದೆ. ಆಡಿರುವ ಮೂರೂ ಪಂದ್ಯಗಳನ್ನು ಗೆದ್ದು 12 ಅಂಕಗಳೊಂದಿಗೆ ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ.

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುವ ಅರುಣಾಚಲ ಪ್ರದೇಶ ವಿರುದ್ಧದ ಪಂದ್ಯವನ್ನು ಜಯಿಸಿದರೆ ಕರ್ನಾಟಕಕ್ಕೆ ಅಗ್ರಸ್ಥಾನ ಮತ್ತಷ್ಟು ಗಟ್ಟಿಯಾಗಲಿದೆ. ಎಂಟು ತಂಡಗಳ ಗುಂಪಿನಲ್ಲಿ ಮುಂಬೈ, ಪಂಜಾಬ್, ಸೌರಾಷ್ಟ್ರ ಮತ್ತು ಪುದುಚೇರಿ ತಂಡಗಳು (ತಲಾ 8 ಅಂಕ) ಕ್ರಮವಾಗಿ ಕರ್ನಾಟಕದ ನಂತರದ ಸ್ಥಾನದಲ್ಲಿವೆ.

ಬಲಿಷ್ಠ ಮುಂಬೈ ತಂಡವನ್ನು ಹಣಿದು ಶುಭಾರಂಭ ಮಾಡಿದ್ದ ಕರ್ನಾಟಕ ತಂಡವು ನಂತರ ಪುದುಚೇರಿ ಮತ್ತು ಪಂಜಾಬ್ ತಂಡವನ್ನು ಸೋಲಿಸಿದೆ. ಮುಂಬೈ ಎದುರು ಕೆ.ಎಲ್. ಶ್ರೀಜಿತ್, ಪುದುಚೇರಿ ವಿರುದ್ಧ ಆರ್. ಸ್ಮರಣ ಹಾಗೂ ಪಂಜಾಬ್ ವಿರುದ್ಧ ಮಯಂಕ್ ಅಮೋಘ ಶತಕ ದಾಖಲಿಸಿದ್ದರು.

ಅರುಣಾಚಲ ಪ್ರದೇಶ ತಂಡವು ಆಡಿರುವ ಮೂರೂ ಪಂದ್ಯಗಳನ್ನು ಸೋತಿದ್ದು, ಗುಂಪಿನಲ್ಲಿ ಕೊನೆಯ ಸ್ಥಾನದಲ್ಲಿದೆ. ನಬಮ್ ತಗನ್ ಅಬೊ ನಾಯಕತ್ವದ ತಂಡವು ಪಂಜಾಬ್, ಸೌರಾಷ್ಟ್ರ ಮತ್ತು ಮುಂಬೈ ತಂಡಗಳಿಗೆ ಸುಲಭ ತುತ್ತಾಗಿದೆ.

ಮೊದಲೆರಡು ಪಂದ್ಯಗಳನ್ನು ಹೆಚ್ಚು ಕಷ್ಟವಿಲ್ಲದೇ ಗೆದ್ದಿದ್ದ ಕರ್ನಾಟಕ ತಂಡವು ಪಂಜಾಬ್ ವಿರುದ್ಧ ಪ್ರಯಾಸ ಪಟ್ಟು ಜಯಿಸಿತ್ತು. ಮಯಂಕ್ ಏಕಾಂಗಿ ಹೋರಾಟ ನಡೆಸಿ ತಂಡವನ್ನು ಸೋಲಿನ ದವಡೆಯಿಂದ ಪಾರು ಮಾಡಿದ್ದರು. ಅಗ್ರಕ್ರಮಾಂಕದ ನಿಕಿನ್ ಜೋಸ್, ಕೆ.ವಿ. ಅನೀಶ್ ಮತ್ತು ಮಧ್ಯಮ ಕ್ರಮಾಂಕದಲ್ಲಿ ಅಭಿನವ್ ಮನೋಹರ್ ಲಯಕ್ಕೆ ಮರಳಿದರೆ ಬ್ಯಾಟಿಂಗ್ ವಿಭಾಗಕ್ಕೆ ಬಲ ಸಿಗಲಿದೆ.

ಕರ್ನಾಟಕದ ಬೌಲಿಂಗ್ ವಿಭಾಗವೂ ಬಲಿಷ್ಠವಾಗಿದೆ. ಪುದುಚೇರಿ ವಿರುದ್ಧ ವಿದ್ಯಾಧರ ಪಾಟೀಲ ಮತ್ತು ಪಂಜಾಬ್ ವಿರುದ್ಧ ಅಭಿಲಾಷ್ ಶೆಟ್ಟಿ ನಾಲ್ಕು ವಿಕೆಟ್ ಸಾಧನೆ ಮಾಡಿದ್ದಾರೆ. ಅನುಭವಿ ಬೌಲರ್ ವೈಶಾಖ ವಿಜಯ ಕುಮಾರ್, ವಿ ಕೌಶಿಕ್, ನೈಜ ಸಾಮರ್ಥ್ಯ ಪ್ರದರ್ಶಿಸಿದರೆ ಎದುರಾಳಿ ತಂಡವನ್ನು ಬೇಗನೆ ಕಟ್ಟಿಹಾಕಬಹುದು.

ಪಂದ್ಯ ಆರಂಭ: ಬೆಳಿಗ್ಗೆ 9

ಮಯಂಕ್ ಅಗರವಾಲ್

ಕ್ರಿಕೆಟ್: ಒಡಿಶಾಕ್ಕೆ ಮಣಿದ ಕರ್ನಾಟಕ

ಬೆಂಗಳೂರು: ಬೌಲರ್‌ಗಳ ಸಾಂಘಿಕ ದಾಳಿಯ ನೆರವಿನಿಂದ ಒಡಿಶಾ ತಂಡವು ಬಿಸಿಸಿಐ ಪುರುಷರ 23 ವರ್ಷದೊಳಗಿನ ರಾಜ್ಯ ‘ಎ’ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮೂರು ವಿಕೆಟ್‌ಗಳಿಂದ ಕರ್ನಾಟಕ ತಂಡವನ್ನು ಮಣಿಸಿತು.

ಛತ್ತೀಸ್‌ಗಢದ ಭಿಲಾಯಿನಲ್ಲಿ ಶುಕ್ರವಾರ ನಡೆದ ‘ಡಿ’ ಗುಂಪಿನ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ 34.4 ಓವರ್‌ಗಳಲ್ಲಿ 151 ರನ್‌ಗಳಿಗೆ ಕುಸಿಯಿತು. 44 ರನ್ ಗಳಿಸಿದ ಮ್ಯಾಕ್ನೀಲ್ ನೊರೊನ್ಹಾ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಒಡಿಶಾದ ಅಶುತೋಷ್ ಚುರಿಯಾ ಮೂರು ವಿಕೆಟ್ ಪಡೆದರು.

ಗುರಿಯನ್ನು ಬೆನ್ನಟ್ಟಿದ ಒಡಿಶಾ ತಂಡವು 38 ಓವರ್‌ಗಳಲ್ಲಿ 7 ವಿಕೆಟ್‌ಗೆ 154 ರನ್ ಗಳಿಸಿ ಜಯ ಸಾಧಿಸಿತು. ಈ ಗೆಲುವಿನೊಂದಿಗೆ ಒಡಿಶಾ ತಂಡ ಗುಂಪಿನಲ್ಲಿ ನಾಲ್ಕನೇ ಸ್ಥಾನಕ್ಕೆ ಏರಿತು. ಕರ್ನಾಟಕ ಐದನೇ ಸ್ಥಾನದಲ್ಲಿದೆ.

Doctor's Consultation: 844 844 4935, www.baidyanath.co

ಸಂಕ್ಷಿಪ್ತ ಸುದ್ದಿ

ಚೆಸ್: ಜಂಟಿ 5ನೇ ಸ್ಥಾನದಲ್ಲಿ ಅರ್ಜುನ್

ನ್ಯೂಯಾರ್ಕ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ, ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನ ಮೊದಲ ದಿನವಾದ ಗುರುವಾರ ನಾಲ್ಕು ಗೆಲುವು, ಒಂದು ಸೋಲು ಕಂಡು ಜಂಟಿ ಐದನೇ ಸ್ಥಾನ ಗಳಿಸಿದರು.

ಹಾಲಿ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ (ನಾರ್ವೆ) ಅವರಿಗೂ ಮೊದಲ ದಿನ ನಿರಾಸೆ ಮೂಡಿಸಿತು. ಅವರು ಒಂದು ಜಯವನ್ನಷ್ಟೇ ಗಳಿಸಿ ದರು. ಇತರ ನಾಲ್ಕರಲ್ಲಿ ಅವರಿಗೆ ಮೂರು ಡ್ರಾ, ಒಂದು ಸೋಲು (ರಷ್ಯದ ಡೆನಿಸ್ ಲಾಝುವಿಕ್ ಎದುರು) ಎದುರಾಯಿತು.

ಪುರುಷರ ವಿಭಾಗದಲ್ಲಿ ಇನ್ನೂ ಎಂಟು ಸುತ್ತಿನ ಆಟಗಳು ಉಳಿದಿವೆ. ಅರ್ಮೇನಿಯಾದ ಶಾಂತ್ ಸರ್ಗಸ್ಯಾನ್, ಅಮೆರಿಕದ ಲೇನಿಯರ್ ಡೊಮಿಂಗೆಝ್ ಪೆರೆಝ್, ಡೇನಿಯಲ್ ನರೊಡಿಟ್‌ಸ್ಕಿ ಮತ್ತು ರಷ್ಯಾದ ಮುರ್ಝಿನ್ ವೊಲೊದರ್ ತಲಾ 4.5 ಅಂಕ ಗಳಿಸಿ ಪ್ರೊಗ್ರೆಸಿವ್ ಮೇಲೆ ಮೊದಲ ನಾಲ್ಕು ಸ್ಥಾನದಲ್ಲಿದ್ದಾರೆ. ಅರ್ಜುನ್ ಮತ್ತು ಸಾಧ್ವಾನಿ ತಲಾ ನಾಲ್ಕು ಪಾಯಿಂಟ್ಸ್ ಗಳಿಸಿ ನಂತರದ ಸ್ಥಾನದಲ್ಲಿದ್ದಾರೆ. ಉಜ್ಬೇಕ್ ಆಟಗಾರ ಜಾವೊಕಿರ್ ಸಿಂದರೋವ್ ಏಳನೇ ಸ್ಥಾನದಲ್ಲಿದ್ದಾರೆ.

ಡೇವಿಸ್ ಕಪ್: ನಗಾಲ್ ಆಡಲು ನಕಾರ

ನವದೆಹಲಿ (ಪಿಟಿಐ): ಭಾರತದ ಅಗ್ರ ಸಿಂಗಲ್ಸ್ ಟೆನಿಸಿಗ ಸುಮಿತ್ ನಗಾಲ್ ಅವರು ಡೇವಿಸ್ ಕಪ್ ರಾಷ್ಟ್ರೀಯ ತಂಡಕ್ಕೆ ಆಡಲು ಮತ್ತೊಮ್ಮೆ ನಿರಾಕರಿಸಿದ್ದಾರೆ. ಇದೇ ವೇಳೆ ಶಶಿಕುಮಾರ್ ಮುಕುಂದ್ ಅವರು ಶುಕ್ರವಾರ ರಾಷ್ಟ್ರೀಯ ತಂಡಕ್ಕೆ ಮರಳಿದ್ದಾರೆ.

ಮುಕುಂದ್ ಮೇಲಿನ ಅಮಾನತನ್ನು ಅಖಿಲ ಭಾರತ ಟೆನಿಸ್ ಸಂಸ್ಥೆ ಕಾರ್ಯನಿರ್ವಾಹಕ ಸಮಿತಿ ಹಿಂಪಡೆದಿದೆ. ಭಾರತ ಡೇವಿಸ್ ಕಪ್ ವಿಶ್ವ ಗುಂಪಿನಲ್ಲಿ ತನ್ನ ಪಂದ್ಯವನ್ನು ಟೋಗೊ (ಪಶ್ಚಿಮ ಆಫ್ರಿಕಾದ ದೇಶ) ವಿರುದ್ಧ ಜನವರಿ 31 ರಿಂದ ಆಡಲಿದೆ. ಎಐಟಿಎ ಆಯ್ಕೆ ಸಮಿತಿ ಐವರು ಆಟಗಾರರ ತಂಡವವನ್ನು ಪ್ರಕಟಿಸಿದ್ದು, ಇದರಲ್ಲಿ ಮುಕುಂದ್ ಅವರು ಅತಿ ಹೆಚ್ಚಿನ ಕ್ರಮಾಂಕ (368) ಪಡೆದ ಆಟಗಾರ ಎನಿಸಿದ್ದಾರೆ. ಅಗ್ರ ಡಬಲ್ಸ್ ಆಟಗಾರ ಯುಕಿ ಭಾಂಬ್ರಿ ಕೂಡ ಅಲಭ್ಯರಾಗಿದ್ದಾರೆ.

ಬಿಎಫ್‌ಸಿಗೆ ಚೆನ್ನೈಯಿನ್ ಸವಾಲು ಇಂದು

ಸುನಿಲ್ ಚೆಟ್ರಿ

ಬೆಂಗಳೂರು: ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯ ಪಂದ್ಯದಲ್ಲಿ ಶನಿವಾರ ಚೆನ್ನೈಯಿನ್ ಎಫ್‌ಸಿ ತಂಡವನ್ನು ಎದುರಿಸಲಿದೆ.

ಚೆನ್ನೈನ ಜವಾಹರ ಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಆತಿಥೇಯರನ್ನು ಮಣಿಸಿ ಮತ್ತೆ ಅಗ್ರಸ್ಥಾನಕ್ಕೇರಲು ಸುನಿಲ್ ಚೆಟ್ರಿ ಬಳಗವು ಎದುರು ನೋಡುತ್ತಿದೆ.

ಬಿಎಫ್‌ಸಿ ತಂಡವು ಆಡಿರುವ 12 ಪಂದ್ಯಗಳಲ್ಲಿ ಏಳರಲ್ಲಿ ಗೆದ್ದಿದ್ದರೆ, ಮೂರರಲ್ಲಿ ಡ್ರಾ ಸಾಧಿಸಿದೆ. ಎರಡರಲ್ಲಿ ಮಾತ್ರ ಸೋತು ಒಟ್ಟು 24 ಅಂಕಗಳನ್ನು ಪಡೆದಿದೆ. ಮೋಹನ್ ಬಾಗನ್ (29) ತಂಡವು ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಚೆನ್ನೈಯಿನ್ ತಂಡವು 14 ಅಂಕಗಳೊಂದಿಗೆ 9ನೇ ಸ್ಥಾನದಲ್ಲಿದೆ. 13 ಪಂದ್ಯಗಳಲ್ಲಿ ಕೇವಲ ನಾಲ್ಕರಲ್ಲಿ ಗೆದ್ದಿದೆ.

ಪಂದ್ಯ ಆರಂಭ: ರಾತ್ರಿ 7.30. ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ